
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 13 | ಮಾರ್ಚ್ 23-29, 2020 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕೊರೊನಾ ಮಹಾಮಾರಿ ವಿರುದ್ಧ ಹೋರಾಟ ಸಮಗ್ರ ಕ್ರಮ ಬೇಕು

▸ ಜನ ವಿಜ್ಞಾನ ಮತ್ತು ಜನಸ್ವಾಸ್ಥ್ಯ ಚಳುವಳಿಯ ಜನತಾ ಸನ್ನದು

Break the chain

▸ ಕೇರಳ ಮಾದರಿ



ಭಾರತದ ಬ್ಯಾಂಕುಗಳು ಯಾಕೆ ದುರ್ಬಲವಾಗಿವೆ?



ಜನರ ಜ್ವಲಂತ ಸಮಸ್ಯೆಗಳ ಮೇಲೆ ಪ್ರಚಾರಾಂದೋಲನಗಳು

ತೈಲ ಬೆಲೆ ಕುಸಿತ: ಬೆಲೆ ಸಮರದ ಗುರಿ ಯಾರು?



ಮಾರ್ಚ್ 22 ಕೊರೊನ ವೈರಸ್ ವಿರುದ್ಧ ಹೋರಾಟಕ್ಕೆ ಜನತೆಯ ಸೌಹಾರ್ದತಾ ದಿನಾಚರಣೆ

11 ಬೇಡಿಕೆಗಳೊಂದಿಗೆ ನಡೆಸಲು ಜನತೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ

ಮಾರ್ಚ್ 22 ನ್ನು ಕೊರೊನ ವೈರಸ್ ವಿರುದ್ಧ ಹೋರಾಟಕ್ಕೆ ಜನತೆಯ ಸೌಹಾರ್ದತೆಯ ದಿನವಾಗಿ ಆಚರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನತೆಗೆ ಮನವಿ ಮಾಡಿದೆ.

ಆದರೆ ಪ್ರಧಾನ ಮಂತ್ರಿಗಳು ಈ ಹೋರಾಟದ ಆರೋಗ್ಯ ಮತ್ತು ಆರ್ಥಿಕ ಆಯಾಮಗಳನ್ನು ನಿಭಾಯಿಸುವ ಬಗ್ಗೆ ಯಾವುದೇ ಮೂರ್ತ ಹೆಜ್ಜೆಗಳನ್ನು ಮುಂದಿಟ್ಟಿಲ್ಲವಾದ್ದರಿಂದ ಈ ಸೌಹಾರ್ದತೆಯ ದಿನವನ್ನು ಈ ಕೆಳಗಿನ ಬೇಡಿಕೆಗಳೊಂದಿಗೆ ಆಚರಿಸಬೇಕು ಎಂದು ಪೊಲಿಟ್‌ಬ್ಯುರೊ ಜನತೆಗೆ ಮನವಿ ಮಾಡಿದೆ.

1. ವೈರಸ್ ಬಗ್ಗೆ ಪರೀಕ್ಷಣೆಯ ಪ್ರಮಾಣವನ್ನು ಸಾಕಷ್ಟು ವ್ಯಾಪಕವಾಗಿ, ವಿಶೇಷವಾಗಿ ನೆಗಡಿ, ಜ್ವರ, ಕೆಮ್ಮು ಇತ್ಯಾದಿ ಲಕ್ಷಣಗಳಿರುವವರನ್ನು ಪರೀಕ್ಷಿಸಲು ಸಾಧ್ಯವಾಗುವಂತೆ ಹೆಚ್ಚಿಸಬೇಕು.
2. ಸಾಕಷ್ಟು ಉಚಿತ ಪರೀಕ್ಷಣೆ, ಆಸ್ಪತ್ರೆ ಸೌಲಭ್ಯಗಳು, ಪ್ರತ್ಯೇಕವಾಗಿಡುವ ವಾರ್ಡ್‌ಗಳು ಮತ್ತು ವೆಂಟಿಲೇಟರ್‌ಗಳನ್ನು ಒದಗಿಸಲು ಸಾಧ್ಯವಾಗುವಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚಿನ ವೆಚ್ಚವನ್ನು ಪ್ರಕಟಿಸಬೇಕು.
3. ಜನಧನ್ ಖಾತೆ ಮತ್ತು ಬಿಪಿಎಲ್ ಫಲಾನುಭವಿಗಳಿಗೆ ರೂ.5000 ನಗದು ವರ್ಗಾವಣೆ ಮಾಡಬೇಕು.
4. ಎಲ್ಲ ಬಿಪಿಎಲ್/ಎಪಿಎಲ್ ಕುಟುಂಬಗಳಿಗೆ, ವಲಸೆ ಕಾರ್ಮಿಕರಿಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒಂದು ತಿಂಗಳ ಉಚಿತ ರೇಶನ್‌ನ್ನು ಕೊಡಬೇಕು, ಇದಕ್ಕೆ ಎಫ್‌ಸಿಐ ಗೋದಾಮುಗಳಲ್ಲಿರುವ 7.5 ಕೋಟಿ ಟನ್‌ಗಳ ಅಗಾಧ ದಾಸ್ತಾನನ್ನು ಬಳಸಬೇಕು.
5. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 150 ದಿನಗಳಿಗೆ ವಿಸ್ತರಿಸಿ ಕೆಲಸ ಕೇಳುವವರಿಗೆಲ್ಲರಿಗೂ ಕೊಡಬೇಕು.
6. ಎಲ್ಲ ಅಗತ್ಯ ಸರಕುಗಳನ್ನು ಒಳಗೊಳ್ಳುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕು.
7. ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಯೋಜನೆಯ ಬದಲು, ರೇಶನ್ ಕಿಟ್‌ಗಳನ್ನು ಮಕ್ಕಳ ಮನೆಗಳಿಗೆ/ಕುಟುಂಬಗಳಿಗೆ ಒದಗಿಸಬೇಕು.
8. ಈ ಮಹಾಮಾರಿಯಿಂದ ಬಾಧಿತಗೊಂಡಿರುವ ವಲಯಗಳಿಗೆ ಹಣಕಾಸು ಪ್ಯಾಕೇಜುಗಳನ್ನು ಸ್ಥಾಪಿಸಬೇಕು. ಈ ಹಣಕಾಸು ಬೆಂಬಲವನ್ನು ಕಂಪನಿಗಳು ಮತ್ತು ಉದ್ದಿಮೆಗಳಿಗೆ ಮುಂದಿನ ಮೂರು ತಿಂಗಳು ಲೇ-ಆಫ್ ಮಾಡುವುದಿಲ್ಲ, ಕೆಲಸದಿಂದ ತೆಗೆದು ಹಾಕುವುದಿಲ್ಲ ಎಂಬ ಷರತ್ತಿನ ಮೇಲೆ ಕೊಡಬೇಕು.
9. ಅನೌಪಚಾರಿಕ ಮತ್ತು ಅಸಂಘಟಿತ ವಲಯಗಳಲ್ಲಿ ಜೀವನಾಧಾರಗಳಿಗೆ ತೊಂದರೆಯಾಗಿರುವ ಎಲ್ಲ ಕಾರ್ಮಿಕರಿಗೆ ಹಣಕಾಸು ನೆರವು/ಭತ್ಯೆಯನ್ನು ನೀಡಲು ಒಂದು ನಿಧಿಯನ್ನು ಸ್ಥಾಪಿಸಬೇಕು.
10.ಕೊರೊನ ವೈರಸ್‌ನಿಂದಾಗಿ ಕೆಲಸದಿಂದ ದೂರವಿರಬೇಕಾದ ಕಾರ್ಮಿಕರು ಮತ್ತು ನೌಕರರಿಗೆ ಸಂಬಳ ಸಹಿತ ಕಾಯಿಲೆ ರಜಾ ನೀಡಬೇಕು.
11. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಬ್ಯಾಂಕು ಸಾಲಗಳ ಮರುಪಾವತಿಯಲ್ಲಿ ಒಂದು ವರ್ಷದ ಋಣವಿಳಂಬದ ಸೌಲಭ್ಯವನ್ನು ನೀಡಬೇಕು. •

“ಜನಗಣತಿ ಕಾರ್ಯವನ್ನು ಮುಂದೂಡಿ, ಎನ್‌ಪಿಆರ್ ಗಣತಿಯನ್ನು ಕೈಬಿಡಿ”

ಕೊವಿದ್–19 ಎಲ್ಲೆಡೆಗಳಲ್ಲಿ ಹರಡುತ್ತಿರುವುದರಿಂದ ಮತ್ತು ಸಾಮಾಜಿಕವಾಗಿ ದೂರವಿರುವುದು ಮುಂತಾದ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುವ ಅಗತ್ಯವಿರುವುದರಿಂದ ಎಪ್ರಿಲ್ 1ರಿಂದ ಆರಂಭಿಸಬೇಕೆಂದಿರುವ ಎನ್‌ಪಿಆರ್ ಗಣತಿಯನ್ನು ಕೈಬಿಡಬೇಕು ಎಂಬುದು ತನ್ನ ದೃಢ ಅಭಿಪ್ರಾಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಸರಕಾರ ಮತ್ತು ಅದರ ಎಲ್ಲ ಸಂಸ್ಥೆಗಳು ಈ ಸರ್ವತ್ರ ಹರಡುತ್ತಿರುವ ಕಾಯಿಲೆಯ ಮೇಲೆ ಹತೋಟಿ ಪಡೆಯಲು ಮತ್ತು ಅದರಿಂದಾಗಿ ಜನಗಳ ಆರೋಗ್ಯ ಹಾಗೂ ಜೀವನಾಧಾರಗಳಿಗೆ ಒಡ್ಡಿರುವ ಸವಾಲುಗಳನ್ನು ಎದುರಿಸಲು ಏಕಚಿತ್ತದಿಂದ ಗಮನ ಕೇಂದ್ರೀಕರಿಸಬೇಕಾಗಿದೆ.

ಅಲ್ಲದೆ ಈಗಾಗಲೇ 13 ರಾಜ್ಯ ಸರಕಾರಗಳು ಎನ್‌ಪಿಆರ್/ಎನ್‌ಆರ್‌ಸಿ ಪ್ರಕ್ರಿಯೆಗೆ ತಮ್ಮ ವಿರೋಧವನ್ನು ಘೋಷಿಸಿವೆ.

ಜನಗಣತಿ ಕಾರ್ಯವನ್ನು ಪರಿಸ್ಥಿತಿ ಸಾಮಾನ್ಯಗೊಳ್ಳುವ ವರೆಗೆ ಮುಂದೂಡಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಧಾನ ಮಂತ್ರಿಗಳು ಇಂದು (ಮಾರ್ಚ್19) ರಂದು ರಾತ್ರಿ 8 ಗಂಟೆಗೆ ಮಾಡುತ್ತಾರೆಂದು ಬಹಳ ಪ್ರಚಾರ ಪಡಿಸಲಾಗಿರುವ ತನ್ನ ಭಾಷಣದಲ್ಲಿ ಈ ಕುರಿತ ಪ್ರಕಟಣೆಯನ್ನು ಮಾಡಬೇಕು ಎಂದು ಕರೆ ನೀಡಿತ್ತು. ಆದರೆ ಪ್ರಧಾನ ಮಂತ್ರಿಗಳು ಈ ಬಗ್ಗೆ ಏನೂ ಹೇಳಿಲ್ಲ.

ಕೇಂದ್ರ ಸರಕಾರ ತನ್ನ ಅಪಾರ ದಾಸ್ತಾನಿನಿಂದ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಿ ಬಡಜನರ ನೆರವಿಗೆ ಧಾವಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ದೇಶ ಮಾರಕ ಕೊವಿದ್–19 ವೈರಸ್ ಹರಡದಂತೆ ತಡೆಗಟ್ಟಲು ಹೆಣಗುತ್ತಿರುವಾಗಲೇ, ಅದರ ಪ್ರತಿಕೂಲ ಆರ್ಥಿಕ ಪರಿಣಾಮಗಳು ಅದಾಗಲೇ ಬಹುದೊಡ್ಡ ಬಡ ಮತ್ತು ಅಂಚಿನಲ್ಲಿರುವ ಜನವಿಭಾಗಗಳ ಬದುಕುಗಳನ್ನು ಬಾಧಿಸಲಾರಂಭಿಸಿವೆ. ಹೊಟೇಲು, ಪ್ರವಾಸೋದ್ಯಮ, ಕಟ್ಟಡ ನಿರ್ಮಾಣ, ಸಾರಿಗೆ ಮುಂತಾದ ಆರ್ಥಿಕ ವ್ಯವಸ್ಥೆಯ ವಲಯಗಳಲ್ಲಿ ಚಟುವಟಿಕೆಗಳು ಸುಮಾರಾಗಿ ನಿಂತೇ ಹೋಗಿವೆ.

ಇದು ದಿನಗೂಲಿಗಳು, ಅಂಸಂಘಟಿತ ಕಾರ್ಮಿಕರು, ರಸ್ತೆ ವ್ಯಾಪಾರಿಗಳು, ಸಣ್ಣ ಅಂಗಡಿಕಾರರು ಮತ್ತು ವಲಸೆ ಕಾರ್ಮಿಕರ ಆದಾಯಗಳಲ್ಲಿ ತೀವ್ರ ಕಡಿತ ತಂದಿದೆ.ಇದು ಹಸಿವು, ಅಪೌಷ್ಟಿಕತೆಯ ಮೇಲೆ ನೇರ ದುಷ್ಪ್ರಭಾವ ಬೀರುತ್ತದೆ, ಆಮೂಲಕ ಜನಗಳ ರೋಗ ನಿರೋಧಕ ಸಾಮರ್ಥ್ಯವನ್ನು ಕುಂದಿಸುತ್ತದೆ. ಆದ್ದರಿಂದ ರಾಜ್ಯ ಸರಕಾರಗಳು ಅಸಂಘಟಿತ ಮತ್ತು ವಲಸೆ ಕಾರ್ಮಿಕರಿಗೆ ಪುಕ್ಕಟೆ ರೇಶನ್ ಒದಗಿಸುವ ಒಂದು ಕಾರ್ಯಕಕ್ರಮವನ್ನು ಆರಂಭಿಸಲು ಅನುವಾಗುವಂತೆ ಕೇಂದ್ರ ಸರಕಾರ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಪುಕ್ಕಟೆಯಾಗಿ ಪೂರೈಸುವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಕೇಂದ್ರ ಸರಕಾರದ ಬಳಿ ಫೆಬ್ರುವರಿ 1ರ ವೇಳೆಗೇ 7.5 ಕೋಟಿ ಟನ್ ಆಹಾರಧಾನ್ಯಗಳ ಅಪಾರ ದಾಸ್ತಾನು ಇದ್ದು, ಅವು ಗೋದಾಮುಗಳಲ್ಲಿ ಕೊಳೆಯುತ್ತಿವೆ ಎಂದು ವರದಿಯಾಗಿದೆ.

ಕೇಂದ್ರ ಮತ್ತು ರಾಜ್ಯಸರಕಾರಗಳು ಪುಕ್ಕಟೆ ರೇಶನ್‌ಗಳನ್ನು ಒದಗಿಸಿ ಬಡಕುಟುಂಬಗಳಿಗೆ ಅವರ ಪ್ರಸಕ್ತ ಕಷ್ಟಗಳನ್ನು ಎದುರಿಸುವಲ್ಲಿ ನೆರವಿಗೆ ಬಾರದಿದ್ದರೆ, ಅವರು ಕೋವಿದ್–19 ವೈರಸ್‌ಗಳಿಗೆ ತುತ್ತಾಗುವ ಸಂಭವ ಹೆಚ್ಚುತ್ತದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ದೇಶಾದ್ಯಂತ ಆಹಾರದ ತೀವ್ರ ಅಗತ್ಯವಿರುವ ಬಡಜನಗಳ ನಡುವೆ ವಿತರಣೆಗೆ ತನ್ನ ಅಪಾರ ದಾಸ್ತಾನಿನಿಂದ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

ರಾಜ್ಯಗಳಿಗೆ ಹೆಚ್ಚಿನ ಆಹಾರಧಾನ್ಯಗಳ ನೀಡಿಕೆಗೆ ಎಐಡಿಡಬ್ಲ್ಯುಎ ಆಗ್ರಹ

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಕೂಡ ಕೇಂದ್ರ ಸರಕಾರ ತನ್ನ 7.5 ಕೋಟಿ ಟನ್‌ಗಳ ಅಗಾಧ ದಾಸ್ತಾನಿನಿಂದ ಎಲ್ಲ ರಆಜ್ಯಗಳಿಗೆ ಹೆಚ್ಚುವರಿ ಆಹಾರಧಾನ್ಯಗಳನ್ನು ಒದಗಿಸಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿದೆ. ಈ ದಾಸ್ತಾನನ್ನು ಕೊಳೆಯಲು ಬಿಡುವ ಬದಲು ಎಲ್ಲ ಸಂಕಷ್ಟಗಳಿಗೆ ಒಳಗಾಗುವ ಜನವಿಭಾಗಗಳಿಗೆ ಅದನ್ನು ಉಚಿತವಾಗಿ ಹಂಚಬೇಕು. ಇಂದು ಬಡಜನರು ಎದುರಿಸುತ್ತಿರುವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸಲು ನೆರವಾಗಲು ಕೇರಳ ಸರಕಾರ ಕೈಗೊಂಡಂತಹ ಕ್ರಮಗಳನ್ನು ಎಲ್ಲ ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರ ಕೈಗೊಳ್ಳಬೇಕು ಎಂದು ಎಐಡಿಡಬ್ಲ್ಯೂಎ ಆಗ್ರಹಿಸಿದೆ.

ಮಾರ್ಚ್ 23ರ ಪ್ರತಿಭಟನೆ – ದೊಡ್ಡ ಸಭೆಗಳನ್ನು ನಡೆಸದಿರಲು ಎಡಪಕ್ಷಗಳ ನಿರ್ಧಾರ

ಐದು ಎಡಪಕ್ಷಗಳು ಸಿ.ಎ.ಎ./ಎನ್.ಪಿ.ಆರ್./ಎನ್.ಆರ್.ಸಿ.ಗೆ ಹಾಗೂ ಬಜೆಟ್ ಪ್ರಸ್ತಾವಗಳು ಮತ್ತು ಮೋದಿ ಸರಕಾರದ ಆರ್ಥಿಕ ಧೋರಣೆಗಳಿಂದಾಗಿ ಉಂಟಾಗಿರುವ ಆರ್ಥಿಕ ಹಿಂಜರಿತವು ಹೇರಿರುವ ಅಭೂತಪೂರ್ವ ಆರ್ಥಿಕ ಹೊರೆಗಳಿಗೆ ತಮ್ಮ ವಿರೋಧಗಳನ್ನು ಒಟ್ಟು ಸೇರಿಸಿ ಮಾರ್ಚ್ 23ರಂದು ಅಖಿಲ ಭಾರತ ಪ್ರತಿಭಟನೆಗೆ ಕರೆ ನೀಡಿದ್ದವು.

ಕೊರೊನ ವೈರಸ್ ಸರ್ವವ್ಯಾಪಿಯಾಗಿರುವ ಹಿನ್ನೆಲೆಯಲ್ಲಿ ಈ ಪ್ರತಿಭಟನೆಯನ್ನು ದೊಡ್ಡ ಸಭೆಗಳು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸದಿರಲು ಎಡಪಕ್ಷಗಳು ಈಗ ನಿರ್ಧರಿಸಿವೆ. ಆದರೆ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಹುತಾತ್ಮರಾದ ದಿನದ ವಾರ್ಷಿಕಾಚರಣೆಯನ್ನು ಪ್ರತಿವರ್ಷದಂತೆ ನಡೆಸಲಾಗುವುದು ಎಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಷನ್, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿಯ ಮುಖಂಡರು ಮಾರ್ಚ್17 ರಂದು ನೀಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕದಲ್ಲಿ ಕ್ರಿಮಿನಲ್ ಏರಿಕೆಯ ಏಟು ಜನಸಾಮಾನ್ಯರ ಬಗ್ಗೆ ಕಾಳಜಿಯೇ ಇಲ್ಲದ ಸರಕಾರ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೋದಿ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿರುವದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಅಂತರ‍್ರಾಷ್ಟ್ರೀಯ ಕಚ್ಚಾತೈಲ ಬೆಲೆಗಳು ತೀವ್ರವಾಗಿ ಬೀಳುತ್ತಿರುವಾಗ, ನರೇಂದ್ರ ಮೋದಿ ಸರಕಾರ ತನ್ನ ಸ್ವಭಾವಕ್ಕೆ ಅನುಗುಣವಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕಗಳನ್ನು ಏರಿಸಿದೆ. ಇದು ಆಗಲೇ ಆರ್ಥಿಕ ಹಿಂಜರಿತದ ಅಡಿಯಲ್ಲಿ ನರಳುತ್ತಿರುವ ಜನಗಳ ಮೆಲೆ ಒಂದು ಕ್ರಿಮಿನಲ್ ಏಟು ಎಂದು ಪೊಲಿಟ್‌ಬ್ಯುರೊ ವರ್ಣಿಸಿದೆ.

ಪೆಟ್ರೋಲ್ ಮೇಲಿನ ವಿಶೇಷ ಅಬಕಾರಿ ಸುಂಕವನ್ನು ಲೀಟರಿಗೆ 2 ರೂ. ಗಳಷ್ಟು ಹೆಚ್ಚಿಸಿ ಲೀಟರಿಗೆ 8 ರೂ. ಮಾಡಲಾಗಿದೆ ಮತ್ತು ಡೀಸೆಲ್‌ಗೆ 4 ರೂ. ಮಾಡಲಾಗಿದೆ. ಪ್ರತಿ ಲೀಟರ್ ಪೆಟ್ರೋಲ್‌ಗೆ ಅಬಕಾರಿ ಸುಂಕ ರೂ.22.98 ಆಗುತ್ತದೆ, ಮತ್ತು ಡೀಸೆಲ್‌ಗೆ ರೂ.18.83 ಆಗುತ್ತದೆ. ಇದರೊಂದಿಗೇ, ರಸ್ತೆ ಕರವನ್ನು ಲೀಟರಿಗೆ 1 ರೂ. ಹೆಚ್ಚಿಸಿ 10 ರೂ. ಮಾಡಲಾಗಿದೆ.

ಆಡಳಿತಾತ್ಮಕ ಬೆಲೆ ನಿಗದಿ ವ್ಯವಸ್ಥೆ(ಎಪಿಎಂ)ಯನ್ನು ಕಳಚಿ ಹಾಕುವಾಗ ಕಚ್ಚಾತೈಲಗಳಲ್ಲಿ ಇಳಿಕೆಯ ಪ್ರಯೋಜನವನ್ನು ಬಳಕೆದಾರರಿಗೆ ವರ್ಗಾಯಿಸಲಾಗುವುದು ಎಂದು ಹೇಳಲಾಗಿತ್ತು. ತದ್ವಿರುದ್ಧವಾಗಿ, 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದ ಪೆಟ್ರೋಲ್ ಮೇಲಿನ ಸುಂಕಗಳನ್ನು 142ಶೇ.ದಷ್ಟು ಮತ್ತು ಡೀಸೆಲ್ ಮೇಲಿನ ಸುಂಕಗಳನ್ನು 429ಶೇ.ದಷ್ಟು ಹೆಚ್ಚಿಸಲಾಗಿದೆ. ಆರ್ಥಿಕ ವ್ಯವಸ್ಥೆ ಒಂದು ಹಿಂಜರಿತವನ್ನು ಎದುರಿಸುತ್ತಿರುವಾಗ, ಕೊರೊನ ವ್ಯಾಧಿ ವ್ಯಾಪಕವಾಗಿ ಹರಡುವ ಭೀತಿ ಒಂದು ಬೃಹತ್ ಆರೋಗ್ಯ ಕಾಳಜಿಯಾಗಿ ಇದನ್ನು ಉಲ್ಬಣಗೊಳಿಸುತ್ತಿರುವಾಗ, ಅದಾಗಲೇ ವಿಪರೀತ ಹೊರೆಯಿಂದ ಪೀಡಿತರಾಗಿರುವ ಬಳಕೆದಾರರಿಗೆ ಬೆಲೆಗಳ ಇಳಿಕೆಯ ಪ್ರಯೋಜನವನ್ನು ತಲುಪಿಸಬೇಕಾಗಿತ್ತು. ಆದರೆ ಜನಸಾಮಾನ್ಯರ ಕಾಳಜಿಗಳ ಪರಿವೆಯೇ ಇಲ್ಲದ, ಕಾರ್ಪೊರೇಟ್‌ಗಳು ಮತ್ತು ಅವರ ಬಂಟರ ಹಿತಗಳಿಗೆ ಪ್ರೋತ್ಸಾಹ ನೀಡುವುದರಲ್ಲೇ ಹೆಚ್ಚು ಕಾಳಜಿ ತೋರಿಸುತ್ತಿರುವ ಒಂದು ಸರಕಾರದಿಂದ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವ್ಯಂಗ್ಯವಾಡಿದೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕಗಳ ಈ ಕ್ರಿಮಿನಲ್ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು, ಚಿಲ್ಲರೆ ದರಗಳನ್ನು ಅಂತರ‍್ರಾಷ್ಟ್ರೀಯ ಬೆಲೆಗಳಲ್ಲಿ ಇಳಿಕೆಯ ಮಟ್ಟಕ್ಕೆ, ಅಂದರೆ 30ಶೇ. ದಷ್ಟು ಇಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಶ್ರೀಮಂತ ಬಂಟರಿಗೆ ಸಾಲಮನ್ನಾಗಳು, ಉಳಿದೆಲ್ಲರಿಗೂ ಅಬಕಾರಿ ಸುಂಕ ಏರಿಕೆಗಳು

ಅಂತರ‍್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ಏರಿದಾಗಲೆಲ್ಲ ಅದರ ಹೊರೆಯನ್ನು ತಕ್ಷಣವೇ ಬಳಕೆದಾರರ ಮೇಲೆ ವರ್ಗಾಯಿಸುವ ಸರಕಾರ ಈಗ ಅದು ತೀವ್ರವಾಗಿ ಇಳಿದಿರುವಾಗ ಅದರ ಪ್ರಯೋಜನವನ್ನು ಬಳಕೆದಾರರಿಗೆ ಒದಗಿಸಲು ನಿರಾಕರಿಸಿದೆ, ಪೆಟ್ರೋಲ್‌ಮತ್ತು ಡೀಸೆಲ್‌ಮೇಲೆ ಅಬಕಾರಿ ಸುಂಕವನ್ನು ಲೀಟರಿಗೆ 3ರೂ. ಏರಿಸಿದೆ.

ಜನಸಾಮಾನ್ಯರು ಹಲವು ತಿಂಗಳುಗಳಿಂದ ಭಾರೀ ಆರ್ಥಿಕ ಹತಾಶೆಯಲ್ಲಿರುವಾಗ, ನಿರುದ್ಯೋಗ, ವ್ಯಾಪಕವಾಗಿ ಹರಡುತ್ತಿರುವ ಕೊರೊನ ವ್ಯಾಧಿ ಮತ್ತು ಸಾಮಾಜಿಕ ತಿಕ್ಕಾಟಗಳಿಂದ ತಲ್ಲಣಗೊಂಡಿರುವಾಗ, ಸರಕಾರದ ಶ್ರೀಮಂತ ಬಂಟರು ಸಾಲಮನ್ನಾಗಳನ್ನು ಪಡೆಯುತ್ತಿದ್ದಾರೆ, ಉಳಿದವರಿಗೆಲ್ಲ ಅಬಕಾರಿ ಸುಂಕಗಳ ಏರಿಕೆ ಸಿಗುತ್ತಿದೆ ಎಂಧು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಟಿಪ್ಪಣಿ ಮಾಡಿದ್ದಾರೆ.

ಸಂಪಾದಕೀಯ

ರಾಜಕೀಯಕ್ಕೆ ಕೊರೊನಾ ಬಳಕೆ, ಎಚ್ಚರ!

ವಿಶ್ವವ್ಯಾಪಿಯಾಗಿ ಹರಡುತ್ತಿರುವ ಸಾಂಕ್ರಾಮಿಕ ಕೊರೊನಾ ಈಗಾಗಲೇ ವಿಶ್ವದ 100 ಕ್ಕೂ ಹೆಚ್ಚು ದೇಶಗಳ 10 ಸಾವಿರಕ್ಕಿಂತಲೂ ಹೆಚ್ಚು ಜನರನ್ನು ಬಲಿತೆಗೆದುಕೊಂಡಿದೆ. ಈ ಭಯಂಕರ ರೋಗಕ್ಕೆ ಔಷಧಿಯನ್ನು ಕಂಡು ಹುಡುಕುವ ಪ್ರಯತ್ನವೂ ಬರದಲ್ಲಿ ನಡೆದಿದೆ. ವಿಜ್ಞಾನಿಗಳು ಹಗಲು ರಾತ್ರಿ ಪ್ರಯೋಗದ ಕೆಲಸದಲ್ಲಿ ತೊಡಗಿವೆ. ವೈದ್ಯರು, ಆಸ್ಪತ್ರೆಗಳ ಸಿಬ್ಬಂದಿಗಳು ತಮ್ಮ ಸ್ವಂತ ಜೀವವನ್ನು ಪಣಕ್ಕೊಡಿ ರೋಗಿಗಳ ಸೇವೆಯಲ್ಲಿ ತೊಡಗಿದ್ದಾರೆ.

ಆದರೆ, ಈ ಆತಂಕದ ಪರಿಸ್ಥಿತಿಯನ್ನು ಕೆಲವು ಶಕ್ತಿಗಳು ತಮ್ಮ ಸ್ವಾರ್ಥದ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಭೀಕರ ವೈರಾಣು ನಾಶ ಮಾಡಲು ಅವೈಜ್ಞಾನಿಕ ವಿಧಾನಗಳನ್ನು ಪ್ರಚಾರ ಮಾಡುವುದರಲ್ಲಿ ನಿರತರಾಗಿದಾರೆ. ಕೆಲವರು ಭಾರತದ ಪ್ರಾಚೀನ ವೈದ್ಯಕೀಯ ಕ್ರಮಗಳ ಹೆಸರಿನಲ್ಲಿ ಜನರ ದಾರಿ ತಪ್ಪಿಸುತ್ತಿದ್ದಾರೆ. ಸೋಂಕಿತರು ವೈಜ್ಞಾನಿಕ ಚಿಕಿತ್ಸೆಗೆ ತಜ್ಞ ವೈದರ ಬಳಿ ಹೋಗುವುದನ್ನು ಶಿಫಾರಸು ಮಾಡುವ ಬದಲು ತುಳಸಿ ಬಳಕೆ, ಈರುಳ್ಳಿ ಬಳಕೆ, ಬೆಳ್ಳುಳ್ಳಿ ಬಳಕೆಗೆ ಸಲಹೆ ನೀಡುತ್ತಾರೆ. ಇಂತಹ ಸೂಚನೆಗಳಿಂದ ಸೋಂಕಿತರು ಮಾತ್ರವಲ್ಲ ಇತರ ಅಮಾಯಕರಿಗೂ ಅಪಾಯ ತಂದೊಡುತ್ತಿದ್ದಾರೆ. ನಾವು ಬಳಸುವ ಈರುಳ್ಳಿ, ಬೆಳ್ಳುಳ್ಳಿ ಮುಂತಾದ ಗಿಡಮೂಲಿಕೆಗಳಲ್ಲಿ ಕೆಲ ಮಟ್ಟದ ರೋಗ ನಿರೋದಕ ಗುಣಗಳು ಇರಬಹುದು. ಆದರೆ ಅಂತಹ ನೈಸರ್ಗಿಕ ಉತ್ಪನ್ನಗಳು ಕೊರೊನಾದಂತಹ ಸಾಂಕ್ರಾಮಿಕ ರೋಗವನ್ನು ತಡೆಯುವ ಸಾಮರ್ಥ್ಯ ಇದೆ ಎಂದು ವೈಜ್ಞಾನಿಕವಾಗಿ ಸಾಬೀತಾಗಿರುವುದಿಲ್ಲ.

ವಿಶ್ವಹಿಂದೂ ಪರಿಷತ್‌ನಂತ ಸಂಘ ಪರಿವಾರದ ಶಕ್ತಿಗಳು ಮತ್ತು ವ್ಯಕ್ತಿಗಳು ಗೋ ಮೂತ್ರ ಹಾಗೂ ಸಗಣಿಯನ್ನು ಕೊರೊನಾಗೆ ಪರಿಣಾಮಕಾರಿ ಮದ್ದು ಎಂಬ ಪ್ರಚಾರದಲ್ಲಿ ತೊಡಗಿದ್ದಾರೆ. ಇದು ಸಹ ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ವಿಶ್ವ ಆರೋಗ್ಯ ಸಂಘಟನೆ ಇದನ್ನು ಘೋಷಿಸಿಲ್ಲ. ಇಂತಹ ಪ್ರಚಾರಕ್ಕೆ ಆಕರ್ಷಿತರಾಗಿ ಜನರು ತಮ್ಮ ಆರೋಗ್ಯವನ್ನು ಕಳಕೊಳ್ಳುವ ಅಪಾಯ ಇದೆ. ಇಂತಹ ಮೌಡ್ಯವನ್ನು ಹಬ್ಬಿಸುವವರ ಬಗ್ಗೆ ಎಚ್ಚರ ಅತ್ಯಗತ್ಯ.

ಇಂದಿನ ಪರಿಸ್ಥಿತಿಯಲ್ಲಿ, ಕೊರೊನಾ ವೈರಾಣು ನಾಶಕ್ಕೆ ವೈಜ್ಞಾನಿಕವಾದ ಪರಿಹಾರ ಸಂಶೋಧನೆ ಆಗುವವರೆಗೆ ರೋಗದ ಹರಡುವಿಕೆಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಮುಖ್ಯವಾಗಿದೆ. ಜಾತ್ರೆ, ಉತ್ಸವಗಳಲ್ಲಿ, ಮದುವೆಯಂತಹ ಸಮಾರಂಭಗಳಲ್ಲಿ ಹೆಚ್ಚು ಜನ ಸೇರಿದಾಗ ರೋಗದ ವೈರಾಣು ಪರಸ್ಪರ ಹತ್ತಿರದಲ್ಲಿರುವವರ ನಡುವೆ ಹರಡುವ ಅಪಾಯ ಇದೆ. ಆ ಕಾರಣಕ್ಕಾಗಿ ಮಾತ್ರ ತಾತ್ಕಾಲಿಕವಾಗಿ ಜನರು ದೊಡ್ಡ ಸಂಖ್ಯೆಯಲ್ಲಿ ಸಭೆ ಸೇರುವುದನ್ನು ಕಡಿಮೆ ಮಾಡಬೇಕಾಗಬಹುದು. ಜನರು ಸಭೆ ಸೇರುವುದನ್ನು ಕಡಿಮೆ ಮಾಡಬೇಕಾದ ಈ ಪರಿಸ್ಥಿತಿಯನ್ನು ಆಳುವ ಸರ್ಕಾರಗಳು ದುರ್ಬಳಕೆ ಮಾಡಬಾರದು. ಸರ್ಕಾರ ಜನರಿಗೆ ಶುದ್ಧ ನೀರು ಸಮರ್ಪಕವಾಗಿ ಒದಗಿಸದಿದ್ದರೆ, ಕೂಲಿಕಾರರಿಗೆ ಕೆಲಸ ನೀಡಲು ಸಾಧ್ಯವಾಗದಿದ್ದರೆ, ಅವರ ಜೀವನ ನಿರ್ವಹಣೆಗೆ ಉಚಿತ ಪಡಿತರ ನೀಡದಿದ್ದರೆ, ನಗರಗಳಲ್ಲಿ ಕಸ ವಿಲೇವಾರಿಗೆ ಪರಿಣಾಮಕಾರಿ ಕ್ರಮ ಕೈಗೊಳ್ಳದಿದ್ದರೆ, ಜನ ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿಯುವುದು ಅನಿವಾರ್ಯವಾಗಲಿದೆ. ಸರ್ಕಾರ ಸಕಾಲದಲ್ಲಿ ಕೆಲವು ಮುನ್ನೆಚ್ಚರದ ಕ್ರಮಗಳನ್ನು ಕೈಗೊಳ್ಳಬೇಕು.

ಈ ನಡುವೆ ಮಾರ್ಚ್ 22 ರಂದು 'ಜನತಾ ಕರ್ಫ್ಯೂ' ಏರ್ಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ. ಇದೊಂದು ಸ್ವಾಗತಾರ್ಹ ಕ್ರಮ. ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಇದು ಸಹಾಯವಾಗಬಹುದು. ಆದರೆ ಈ ಕ್ರಮವನ್ನು ಮೋದಿಯವರು ತಮ್ಮ ರಾಜಕೀಯ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬಾರದು. ಈಗಾಗಲೇ ಮೋದಿಯವರು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ಗುಣಗಾನ ಮಾಡುವುದನ್ನು ಟಿವಿ ಮಾಧ್ಯಮಗಳು ನಡೆಸುತ್ತಿವೆ. ಅವುಗಳು ಜನರಿಂದ 'ಜನತಾ ಕರ್ಫ್ಯೂ' ಅನ್ನು ಸ್ವಾಗತಿಸಿ ಬೆಂಬಲ ಸೂಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಇದೊಂದು ಭಾರತ ಸರ್ಕಾರದ ಕ್ರಮ. ಯೋಗ್ಯವೂ ಹೌದು. ಆದರೆ ಅದರ ಕೀರ್ತಿ ದೇಶದ ಜನತೆಗೆ ಸಲ್ಲಬೇಕು. ಇದೊಂದು ಪಕ್ಷಾತೀತ ಕಾರ್ಯಕ್ರಮವಾಗಿ ಯಶಸ್ವಿಗೊಳ್ಳಬೇಕಾಗಿದೆ.

ಶ್ರಮಿಕ ವರ್ಗದ ಜನರಿಗೆ ಕೊರೊನಾ ಧಾಳಿ ಮುಗಿವವರೆಗೂ ಆಹಾರ ಧಾನ್ಯ ವಿತರಣೆ ಮಾಡುವುದು ಅತ್ಯಂತ ಅವಶ್ಯಕ

ಕೊರೊನಾ ವೈರಸ್ ಕಾರಣದಿಂದ ವಾತಾವರಣವು ವ್ಯತಿರಿಕ್ತವಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಕೊರೊನಾ ವೈರಸ್ ಸೋಂಕಿನ ಕಾರಣದಿಂದ ಸಾವು ಘಟಿಸಿದ್ದು ಸಹ ಪರಿಸ್ಥಿತಿಯು ಇನ್ನಷ್ಟು ಗಂಭೀರವಾಗಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಆಡಳಿತವು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುತ್ತಿದೆ. ಸೋಂಕು ಹರಡದಂತೆ ಜಿಲ್ಲಾ ಆಡಳಿತವು ಕೈಗೊಳ್ಳುತ್ತಿರುವ ಸೂಚನೆಗಳನ್ನು ಮುನ್ನೆಚ್ಚರಿಕೆಯ ಕ್ರಮಗಳನ್ನು ಜನತೆಯು ಅನುಸರಿಸಬೇಕಿದೆ.

ಇದೇ ಹೊತ್ತಿನಲ್ಲಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಜಿಲ್ಲೆಗೆ ಭೇಟಿ ಕೊಡದಿರುವುದನ್ನು ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ. ಎಲ್ಲ ಭಾರವನ್ನು ಆಡಳಿತದ ಮೇಲೆ ಹೇರಿ ತಮ್ಮದೇನೂ ಹೊಣೆಗಾರಿಕೆ ಇಲ್ಲವೆನ್ನುವಂತೆ ಇರುವುದು ತರವಲ್ಲ. ವಿಡಿಯೋ ಕಾನ್ಫರೆನ್ಸ್ ಮಾಡುವುದರಿಂದ ಸಮಸ್ಯೆ ಅರಿತಂತಾಗುವುದಿಲ್ಲ. ಇದು ಬೇಜವಾಬ್ದಾರಿ ನಡೆಯಾಗುವುದು. ಕೊರೊನಾ ಸೋಂಕು ಮೂರನೆಯ ಹಂತಕ್ಕೆ ತಲುಪಿದಲ್ಲಿ ಅದು ಸಾಮುದಾಯಿಕವಾಗಿ ಹಬ್ಬತೊಡಗಬಹುದು. ಆದರೆ ಇದಕ್ಕೆ ಹೆದರದೆ ಆತಂಕಿತರಾಗದೆ ಎದುರಿಸಬೇಕಾಗುವುದು. ಮತ್ತು ಅನೇಕ ಕ್ರಮಗಳನ್ನು ವಹಿಸಬೇಕಾಗುವುದು. ಜಾಗೃತಿ, ಮುನ್ನೆಚ್ಚರಿಕೆ, ಸೋಂಕು ಹರಡದಂತೆ ಸ್ವಯಂ ನಿರ್ಬಂಧನೆ ಇತ್ಯಾದಿಗಳು ಜನತೆ ಜಾರಿ ಮಾಡಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟ ಕೇರಳಾ ಮಾಧರಿಯಲ್ಲಿ ಪ್ರತ್ಯೇಕ ಆಸ್ಪತೆಗಳನ್ನು ಆರಂಭಿಸುವುದು, ಕೈತೊಳೆದುಕೊಳ್ಳುವ ಪ್ರಕ್ರಿಯೆಯ ಆಂದೋಲನ ಕೈಗೊಳ್ಳುವುದು ಮಾಡಬೇಕಾಗುವುದು. ಇದನ್ನೆಲ್ಲ ಗ್ರಹಿಸಿ ಮುನ್ನೆಚ್ಚರಿಕೆಯ ಭಾಗವಾಗಿ ಸರಕಾರವು ನಿರ್ಣಯ ಮಾಡಬೇಕು. ಈ ಹಿನ್ನೆಲೆಯಲ್ಲಿ ಉಸ್ತುವಾರಿ ಸಚಿವರು ಮತ್ತಿತರ ಚುನಾಯಿತ ಸದಸ್ಯರು ಜಿಲ್ಲೆಯಲ್ಲಿರಬೇಕು.

ಕಳೆದ ಮೂರು ದಿನಗಳಿಂದ ಜಿಲ್ಲಾ ಆಡಳಿತವು ಎಲ್ಲ ವ್ಯಾಪಾರ ವಹಿವಾಟುಗಳನ್ನು ಬಂದ್ ಮಾಡಿದೆ. ಹಾಲು ಹಣ್ಣು ತರಕಾರಿ ಮಾರಿ ಜೀವನ ನಿರ್ವಹಿಸುವವರು ಮತ್ತಿತರ ಅಸಂಘಟಿತ ಕಾರ್ಮಿಕರು, ದಿನಗೂಲಿಯವರು, ಕಟ್ಟಡ ಕಾರ್ಮಿಕರು ಹೀಗೆ ದುಡಿಯುವ ವರ್ಗದ ಜನರಲ್ಲಿ ಅನೇಕರು ಗ್ರಾಮಗಳಿಂದ ದುಡಿದುಣ್ಣಲು ನಗರಕ್ಕೆ ಬಂದವರು. ಒಂದು ಕಡೆ ಹೊಟ್ಟೆ ಹಸಿವು ಇನ್ನೊಂದು ಕಡೆ ಕೊರೊನಾ ವೈರಸ್ ಧಾಳಿ. ಇದು ಬಡವರಿಗೆ ಅತ್ಯಂತ ಮಾರಕವಾದ ದಿನಗಳನ್ನು ತಂದೊಡ್ಡಿದೆ. ಈಗ ಅವರು ಸಹಜವಾಗಿಯೇ ಗ್ರಾಮಗಳಿಗೆ ಹೋಗುವರು. ದುಡಿಯದೇ ಹೊಟ್ಟೆ ತುಂಬುವುದು ಕಷ್ಟವಿರುವುದರಿಂದ ಗ್ರಾಮಗಳಲ್ಲಿರುವ ಮಹಾತ್ಮಾಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಕಾಮಗಾರಿಯಲ್ಲಿ ತೊಡಗುವುದು ಸಹಜವಾಗಿದೆ. ಆದ್ದರಿಂದ ಕೊರೊನಾ ವೈರಸ್ ಸೋಂಕು ಹರಡದಂತೆ ಜಿಲ್ಲಾ ಆಡಳಿತವು ಮುನ್ನೆಚ್ಚರಿಕೆಯ ಕ್ರಮಗಳನ್ನು ಗ್ರಾಮೀಣ ಪ್ರದೇಶದಲ್ಲಿಯೂ ವಹಿಸಬೇಕಿದೆ.

ಮನರೇಗಾ ಕೆಲಸ ನಡೆಯುವ ಸ್ಥಳದಲ್ಲಿ ಕಾರ್ಮಿಕರಿಗೆ ಕಾಯ್ದೆ ಪ್ರಕಾರ ನೀರಿನ ವ್ಯವಸ್ಥೆ ಇರಬೇಕೆಂದಿದೆ. ನೀರಿನೊಂದಿಗೆ ಕಾರ್ಮಿಕರಿಗೆ ಕೈ ತೊಳೆದು ಕೊಳ್ಳಲು ಪ್ರತ್ಯೇಕ ಸಾಬೂನಿನ ವಿತರಣೆ ಮಾಡಬೇಕೆಂದು ಆಗ್ರಹಿಸುತ್ತೇವೆ.

ಜೊತೆಗೆ ಪೌರಕಾರ್ಮಿಕರಿಗೆ ಒದಗಿಸಿದಂತೆ ಕೈಗವಸು, ಮುಖಗವಸು ವಿತರಣೆ ಮಾಡಬೇಕು.

ಕೆಲಸದ ಸ್ಥಳದಲ್ಲಿ ಕೊರೊನಾ ಕುರಿತು ಜಾಗೃತಿ ಮತ್ತು ವಹಿಸಬೇಕಾದ ಮುನ್ನೆಚ್ಚರಿಕೆ ತಿಳಿ ಹೇಳುವಂತಹ ಅಭಿಯಾನ ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ.

ತೀರಾ ಕೆಲಸಕ್ಕೆ ಹೋಗಲಾರದಂತಹ ಸ್ಥಿತಿ ನಿರ್ಮಾಣವಾದಲ್ಲಿ ಮನರೇಗಾ ಕಾರ್ಮಿಕರಿಗೆ ಹಾಗೂ ಅಂಗನವಾಡಿ ಮಕ್ಕಳಿಗೆ ಉಚಿತವಾಗಿ ಆಹಾರ ಧಾನ್ಯ ವಿತರಿಸುವ ಅಗತ್ಯವಿದೆ. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಶೇಕಡ 60ಕ್ಕೂ ಹೆಚ್ಚು ಜನತೆಯು ದಿನಗೂಲಿಯಿಂದಲೇ ಜೀವನ ನಿರ್ವಹಣೆ ಮಾಡುವರು.

ದಿನಗೂಲಿಯನ್ನೇ ನೆಚ್ಚಿದ ಕುಟುಂಬಗಳಿಗೆ ಮತ್ತು ಅಂಗನವಾಡಿ ಮಕ್ಕಳಿಗೆ ಮನೆಗೆ ಉಚಿತವಾಗಿ ಆಹಾರಧಾನ್ಯ ವಿತರಣೆ ಮಾಡಬೇಕು. ರೋಗ ನಿರೋಧಕ ಶಕ್ತಿ ಇಲ್ಲದೆ ಹಸಿವು ಬಡತನವಿದ್ದಲ್ಲಿ ಸೋಂಕು ಉಲ್ಬಣಿಸುವ ಸಾಧ್ಯತೆ ಇದ್ದೇ ಇರುವುದು. ಆದ್ದರಿಂದ ಉಚಿತ ಆಹಾರಧಾನ್ಯ ವಿತರಣೆ ಮಾಡಬೇಕೆಂದು ಆಗ್ರಹಸುತ್ತೇವೆ.

ಕೊರೊನಾ ಸೋಂಕು ಇದೆ ಅದಕ್ಕಾಗಿ ಮನೆಯಲ್ಲಿಯೇ ನಿರ್ಬಂದಕ್ಕೆ ಒಳಗಾಗಬೇಕು ಹೌದು. ಹಾಗೆಯೇ ಸೋಂಕು ತಗುಲಿಸದಂತೆ ತಗುಲಿಸಿಕೊಳ್ಳದಂತೆ ಎಚ್ಚರಿಕೆಯಿಂದ ಇರಬೇಕೆಂದಲ್ಲಿ ಶ್ರಮಿಕ ವರ್ಗದ ಜನರಿಗೆ ಕೊರೊನಾ ಧಾಳಿ ಮುಗಿವವರೆಗೂ ಆಹಾರ ಧಾನ್ಯ ವಿತರಣೆ ಮಾಡುವುದು ಅತ್ಯಂತ ಅವಶ್ಯಕವಾದದ್ದಾಗಿದೆ. ವೈರಸ್ ಸೋಂಕು ಹರಡದಂತೆ ತಡೆಗಟ್ಟಬಹುದಾದ ಕ್ರಮದ ಭಾಗವಾಗಿಯೇ ಆಹಾರಧಾನ್ಯ ವಿತರಿಸಬೇಕೆಂದು ಆಗ್ರಹಿಸುತ್ತೇವೆ. ಇದು ನಗರಕ್ಕೂ ವಿಸ್ತರಿಸಬೇಕಾದ ಜರೂರಿ ಇದೆ.

ಸರಕಾರವು ಪಕ್ಕದ ಕೇರಳ ರಾಜ್ಯವನ್ನು ಮಾದರಿಯಾಗಿ ಪರಿಗಣಿಸಿ ಇಂತಹ ಕ್ರಮಗಳನ್ನು ಅನುರಸರಿಸಬೇಕಾದ ಅಗತ್ಯವಿದೆ.

ಇದೇ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣವನ್ನು ಕೊರೊನಾ ಕುರಿತು ಅರಿವು ಮೂಡಿಸಲು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಬೇಕು. ಅನಾವಶ್ಯಕವಾದ ಭಯ ಆತಂಕ ಬಿತ್ತುವ ಬದಲಿಗೆ ಧೈರ್ಯ ಮತ್ತು ಜಾಗರೂಕತೆಯಿಂದ ಕೊರೊನಾ ನಿರ್ವಹಿಸುವುದು ಹೇಗೆ ಎಂಬ ಅರಿವು ಕೊಡಲು ಸಾಮಾಜಿಕ ಜಾಲತಾಣ ಬಳಸಿಕೊಳ್ಳಬೇಕಿದೆ ಎಂದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರು. ಕೆ ನೀಲಾ, ಡಾ. ಪ್ರಭುಖಾನಾಪುರೆ, ಆರ್ ಕೆ ಹುಡಗಿ, ಮಾರುತಿ ಗೋಖಲೆ, ನಂದಾದೇವಿ ಮಂಗೊಂಡಿ, ಶ್ರೀಮಂತ ಬಿರಾದಾರ, ಅಶ್ವಿನಿ ಮದನಕರ್, ಮಹಾನಂದಾತುಕ್ಕಾಣಿ ಮುಂತಾದವರಿದ್ದರು.

ತನಿಖೆ ತೀವ್ರಗೊಳಿಸಿ ದುಷ್ಕೃತ್ಯ ಎಸಗಿದವರನ್ನು ಬಂಧಿಸಬೇಕು

ಕಲಬುರಗಿ ನಗರದ ಹತ್ತಿರವಿರುವ ಶರಣ ಸಿರಸಗಿ ತಾಂಡಾದಲ್ಲಿ ಯುವತಿಯೊಬ್ಬಳನ್ನು ಅತ್ಯಾಚಾರಗೈದು ಬಾರ್ಬರಿಕವಾಗಿ ಹಿಂಸಿಸಿ ಕೊಲೆ ಮಾಡಲಾಗಿದೆ ಎಂಬ ಸಂಕಟದ ಸಂಗತಿ ವರದಿಯಾಗಿದೆ. ಇದೊಂದು ಅತ್ಯಂತ ಪೈಶಾಚಿಕ ಕೃತ್ಯವಾಗಿದ್ದು ಜಿಲ್ಲಾ ಆಡಳಿತವು ಕೂಡಲೇ ಈ ಕುರಿತು ತನಿಖೆ ತೀವ್ರಗೊಳಿಸಿ ತಪ್ಪಿತಸ್ಥರನ್ನು ಬಂಧಿಸಬೇಕೆಂದು ಆಗ್ರಹಿಸುತ್ತೇವೆ. ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಜ್ಞಾ ಕಾನೂನು ಸಲಹಾ ಸಮಿತಿ ಸಂಘಟನೆಗಳು ಈ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತವೆ. ಪೋಷಕರು ಹೊಲಕ್ಕೆ ಹೋದಾಗ ಯುವತಿಯು ಒಬ್ಬಳೇ ಇದ್ದಿರುವುದನ್ನು ನೋಡಿ ದುರುಳರು ಈ ಕೃತ್ಯ ಎಸಗಿರಬಹುದು ಎಂಬುದು ಪೋಷಕರ ಹೇಳಿಕೆಯಾಗಿದೆ. ಯುವತಿಯನ್ನು ವಿಕೃತವಾಗಿ ಹಿಂಸಿಸಿ ಕೊಂದಿರುವ ಎಲ್ಲ ಚಿನ್ಹೆಗಳು ಶರೀರದ ಮೇಲೆ ಕಂಡು ಬಂದಿದೆ. ವಿಕಾರ ಮನೋಸ್ಥಿತಿಯ ದುರುಳರ ಸಂಖ್ಯೆ ಉಲ್ಬಣಿಸುತ್ತಿರುವುದರಿಂದ ಇಂಥವರ ಕ್ರೌರ್ಯಕ್ಕೆ ಮಹಿಳೆಯರು ಮಕ್ಕಳು ಬಲಿಯಾಗುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಅಫಜಲಪುರ ತಾಲ್ಲೂಕಿನ ಹಾವನೂರು ಗ್ರಾಮದ ಬಾಲಕಿಯನ್ನು ಅಪಹರಿಸಿ ಅಂಗಾಂಗಗಳನ್ನು ಕತ್ತರಿಸಿ ಕೊಲೆ ಮಾಡಿದ ಪ್ರಕರಣವು ನಡೆದಿತ್ತು. ದುಷ್ಕೃತ್ಯ ಎಸಗಿದವರನ್ನು ಬೆಂಬಿಡದೆ ತಲಾಶ್‌ಗೈದು ಹಿಡಿಯುವ ಪ್ರಬಲವಾದ ಇಚ್ಛೆ ಇಲ್ಲದಿದ್ದರೆ ಪ್ರಕರಣಗಳು ಮುಚ್ಚಿ ಹೋಗಿ ಮರುಕಳಿಸುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ಜಿಲ್ಲಾ ಆಡಳಿತವು ಕೂಡಲೇ ಯುವತಿಯನ್ನು ಅತ್ಯಾಚಾರಗೈದು ಕೊಲೆ ಮಾಡಿದವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ಕೆ ನೀಲಾ, ರಾಜ್ಯ ಉಪಾಧ್ಯಕ್ಷೆ, ಜೆ ಎಂ ಎಸ್., ಡಾ.ಮೀನಾಕ್ಷಿ ಬಾಳಿ, ರಾಜ್ಯ ಉಪಾಧ್ಯಕ್ಷೆ, ಜೆ ಎಂ ಎಸ್., ಅಮೀನಾ ಬೇಗಂ, ಜಿಲ್ಲಾ ಅಧ್ಯಕ್ಷೆ, ಜೆಎಂಎಸ್, ನಂದಾದೇವಿ ಮಂಗೊಂಡಿ, ಜಿಲ್ಲಾ ಕಾರ್ಯದರ್ಶಿ, ಜೆಎಂಎಸ್. ಕಲಬುರಗಿ, ಜಗದೇವಿ ನೂಲಕರ್, ಚಂದಮ್ಮ ಗೋಳಾ ಅಶ್ವಿನಿ ಮದನಕರ್ ಇದ್ದರು.

ಆರೋಗ್ಯ ಸಂರಕ್ಷಣೆಯಲ್ಲಿ ಜಾಗೃತಿ ಮತ್ತು ಜೀವನ ಮಟ್ಟದ ಸುಧಾರಣೆ ಅತಿ ಅವಶ್ಯಕ

-ಆರೋಗ್ಯ ಶಿಬಿರದಲ್ಲಿ ವ್ಯಕ್ತಗೊಂಡ ಅಭಿಪ್ರಾಯ



'ಆರೋಗ್ಯದ ಸಂರಕ್ಷಣೆಯ ನಿಟ್ಟಿನಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಅತ್ಯವಶ್ಯಕವಾಗಿದೆ' ಎಂದು ಬುಡಕಟ್ಟು ಸಂಸ್ಕೃತಿಯಗಳ ಚಿಂತಕ ಹಾಗೂ ಪಶುಸಂಗೋಪನಾ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಾದ ಡಾ. ಇಂದ್ರ ನಾಯಕ್ ದಂಗಾವತ್ ರವರು ನುಡಿದರು.

ಅವರು ಇದೇ ಮಾರ್ಚ್ 15, 2020 ರಂದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕು ನಿಟ್ಟೂರು ಪ್ರದೇಶದ ಕೊರೆಕೊಳ್ಳಿ ಗ್ರಾಮದಲ್ಲಿ ಆದಿವಾಸಿಗಳ ಆರೋಗ್ಯ ತಪಾಸಣೆ ಹಾಗೂ ಕೊರೋನ ವೈರಸ್ ನ ಅಪಾಯಗಳ ಕುರಿತ ಜಾಗೃತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಆಧುನಿಕ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆ ಬಹುತೇಕ ನಗರ ಕೇಂದ್ರಿತವಾಗಿದ್ದು ಗ್ರಾಮೀಣ ಪ್ರದೇಶದ ಮತ್ತು ಆದಿವಾಸಿ ಸಮುದಾಯಗಳು ವಾಸಿಸುವ ಕಟ್ಟಕಡೆಯ ಪ್ರದೇಶಗಳಿಗೂ ಲಭ್ಯವಾಗುವುದು ಅತ್ಯವಶ್ಯಕ. ಸಮುದಾಯಗಳು ಮತ್ತು ಸರಕಾರದ ಪರಸ್ಪರ ಸಮಾಲೋಚನೆ ಹಾಗೂ ಸಂಯೋಜನೆಯಿಂದ ಮುಂದುವರಿಯುವ ಅವಶ್ಯಕತೆ ಇದೆ. ಸರಕಾರದ ಸೌಲಭ್ಯಗಳ ಸದುಪಯೋಗ ಆಗಬೇಕಿದೆ. ಇದಕ್ಕಾಗಿ ಹೆಚ್ಚಿನ ಮುತುವರ್ಜಿ ವಹಿಸಬೇಕು' ಎಂದು ತಿಳಿಸಿದರು.

ಇಂದು ಎಲ್ಲೆಡೆಗಳಲ್ಲಿ ಕೊರೋನಾ ವೈರಸ್ಸಿನ ಭೀತಿಯಿದ್ದು ಸೋಂಕಿನ ಕುರಿತು ಸೂಕ್ತ ಮಾಹಿತಿ ಮತ್ತು ಜಾಗೃತಿ ಅಗತ್ಯ. ಅಂದಾಗ ಮಾತ್ರ ಭೀತಿ ಮತ್ತು ಅಪಾಯದಿಂದ ಹೊರಬರಬಹುದು' ಎಂದರು.

ಶಿಬಿರಕ್ಕೆ ಚಾಲನೆ ನೀಡಿದ ಬಾಗೇಪಲ್ಲಿಯ ಪೀಪಲ್ಸ್ ಸರ್ಜಿಕಲ್ ಹಾಸ್ಪಿಟಲ್ ನ ಮುಖ್ಯಸ್ಥರಾದ ಡಾ.ಎ. ಅನಿಲ್ ಕುಮಾರ್ ರವರು ಕಾಯಿಲೆಗಳು ಬಂದಾಗ ಚಿಕಿತ್ಸೆ ಪಡೆಯುವುದು ಒಂದೆಡೆಯಾದರೆ ಅದಕ್ಕಿಂತಲೂ ಮುಖ್ಯ ಕಾಯಿಲೆಗಳು ಬರದಂತೆ ತಡೆಯುವ ಪ್ರಾಥಮಿಕ ಕ್ರಮಗಳು ಹಾಗೂ ಜಾಗೃತಿ ಅತಿಮುಖ್ಯ' ಎಂದು ತಿಳಿಸಿದರು. ಸಿಹಿಮೂತ್ರ ರೋಗ, ರಕ್ತದೊತ್ತಡದಂತಹ ಇಡೀ ಜೀವನವನ್ನೇ ಬಾಧಿಸುವ ಖಾಯಿಲೆಗಳು ಬಂದರೆ ಬುಡಕಟ್ಟು ಸಮುದಾಯಗಳಲ್ಲಿ ಹೆಚ್ಚುತ್ತಿರುವುದು ಹೃದಯ ಮತ್ತು ಕಿಡ್ನಿ ಸಂಬಂಧಿತ ಕಾಯಿಲೆಗಳಿಗೆ ಬಲಿಯಾಗುತ್ತಿರುವುದು ಜನರಲ್ಲಿ ಹೆಚ್ಚುತ್ತಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ. ವೈದ್ಯಕೀಯ ಕ್ಷೇತ್ರವನ್ನು ವಾಣಿಜ್ಯೀಕರಣದಿಂದ ಮುಕ್ತಗೊಳಿಸುವುದು ಕೂಡ ಅತಿ ಮುಖ್ಯ ಎಲ್ಲರಿಗೂ ಆರೋಗ್ಯ ಎಲ್ಲರ ಸಂರಕ್ಷಣೆಗಾಗಿ ಎನ್ನುವ ಧ್ಯೇಯ ದಿಂದ ಪ್ರತಿಯೊಬ್ಬರು ಸಹಕಾರ ಪಡೆದು ಮುನ್ನಡೆಯಬೇಕು' ಎಂದರು.

'ಆದಿವಾಸಿ ಸಮುದಾಯಗಳಲ್ಲಿ ಬಹುತೇಕ ಇಂದು ಕಂಡುಬರುವ ಅತಿ ದೊಡ್ಡ ಸಮಸ್ಯೆಯೆಂದರೆ ಅಪೌಷ್ಟಿಕತೆ. ಅಪೌಷ್ಟಿಕತೆಯೂ ಹಲವಾರು ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತದೆ. ಸ್ವಚ್ಛ, ಸುಂದರ, ಪರಿಸರದಲ್ಲಿ ಬದುಕಿ ಬಾಳುತ್ತಿದ್ದರೂ ಆದಿವಾಸಿಗಳು ಅನೇಕ ಕಾಯಿಲೆಗಳಿಗೆ ತುತ್ತಾಗುವುದು ಯಾಕೆ ಎನ್ನುವುದು ಕಾಡುತ್ತಿರುವ ಪ್ರಶ್ನೆ . ಆಹಾರ ಮತ್ತು ಆರೋಗ್ಯ ಅರಿವು ಇವು ಪ್ರತಿಯೊಬ್ಬರಲ್ಲೂ ಹೊಸ ಸುಧಾರಣೆಯನ್ನು ತರಬಲ್ಲವು. ಕೆಲವು ವಿಶಿಷ್ಟ ಕಾಯಿಲೆಗಳು ಒಂದೊಂದು ಸಮುದಾಯಕ್ಕೆ ಅತಿಯಾಗಿ ಬಾಧಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಖಾತ್ರಿಯಾದ, ಕಾಯಂ ಪರಿಹಾರ ರೂಪಿಸಬೇಕಿದೆ. ನಮ್ಮ ಆರೋಗ್ಯ ವ್ಯವಸ್ಥೆಗಳು ಜನರತ್ತ ಹರಿದು ಬರುವಂತಾಗಬೇಕು. ಜನತೆಯತ್ತ ಮುಖಮಾಡಿದ ನೀತಿಗಳು ಬದಲಾವಣೆಯನ್ನು ತರಬಲ್ಲವು ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕ ಎಸ್ ವೈ ಗುರುಶಾಂತ್ ನುಡಿದರು.

'ಪ್ರತಿ ಆದಿವಾಸಿ ಸಮುದಾಯಗಳು ನಿಸರ್ಗದ ಬಗ್ಗೆ ಮತ್ತು ಗಿಡಮೂಲಿಕೆ ಔಷಧೋಪಚಾರ ದಂತಹ ಹಲವು ಸಂಗತಿಗಳ ಬಗ್ಗೆ ಅಪಾರವಾದ ಜ್ಞಾನ ಹೊಂದಿದ್ದು, ಈ ಪರಂಪರೆಯನ್ನು ಸಂರಕ್ಷಿಸುವ, ಅದನ್ನು ಆರೋಗ್ಯ ಸಂರಕ್ಷಣೆಯಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನಗಳು ಅತಿಮುಖ್ಯ' ಎಂದೂ ತಿಳಿಸಿದರು. ಈ ಶಿಬಿರದಲ್ಲಿ ಆರೋಗ್ಯ ಸಂರಕ್ಷಣೆ ಮತ್ತು ಜಾಗೃತಿ ಕುರಿತು ವಿಚಾರ ಮಂಡಿಸಿ ಅವರು ಮಾತನಾಡಿದರು. 'ಆರ್ಥಿಕ ಮುಗ್ಗಟ್ಟು, ಅರಿವಿನ ಕೊರತೆ ಮತ್ತು ಮೂಢನಂಬಿಕೆಗಳು ಆದಿವಾಸಿಗಳನ್ನು ಮತ್ತಷ್ಟು ಕಷ್ಟಕ್ಕೆ ತಳ್ಳಿವೆ. ಅದರಿಂದ ಹೊರ ಬರಬೇಕಾಗಿದೆ' ಎಂದರು.

ಶಿಬಿರದ ಉದ್ದೇಶ ಮತ್ತು ಆದಿವಾಸಿಗಳ ಬದುಕಿನ ಕ್ರಮ ಕುರಿತು ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದ ಆದಿವಾಸಿ ಸಂಘಟನೆಯ ರಾಜ್ಯ ಸಹಸಂಚಾಲಕ ಹಾಗೂ ಜಿಲ್ಲಾ ಪ್ರಧಾನ ಸಂಚಾಲಕರಾದ ಶ್ರೀಧರ್ ನಾಡ ಅವರು ವಿವರಿಸಿ ತಮ್ಮ ಪ್ರಯತ್ನಕ್ಕೆ ಆರೋಗ್ಯ ಇಲಾಖೆ ಮತ್ತು ಪಂಚಾಯತ್ ಆಡಳಿತ ಸಕಾರಾತ್ಮಕವಾಗಿ ಸ್ಪಂದಿಸಿದ್ದನ್ನು ಸ್ಮರಿಸಿದರು.

ಈ ಕಾರ್ಯಕ್ರಮದಲ್ಲಿ ಆರೋಗ್ಯ ಜಾಗೃತಿ ಮತ್ತು ತಪಾಸಣೆಗೆ ಸಹಕರಿಸಿದ ಆರೋಗ್ಯ ಇಲಾಖೆಯ ಪರವಾಗಿ ಪ್ರಶಾಂತ ರವರು ಮಾತನಾಡಿ 'ಸೌಲಭ್ಯಗಳನ್ನು ಪಡೆದುಕೊಳ್ಳಲು ಆದಿವಾಸಿಗಳು ಹಿಂದೇಟು ಹಾಕಬಾರದು ಮತ್ತು ವೈದ್ಯರ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಾಯಿಲೆ ಗುಣ ಪಡಿಸಿಕೊಳ್ಳಬೇಕು' ಎಂದು ತಿಳಿಸಿದರು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀಮತಿ ಗಾಯತ್ರಿ ಅಶೋಕ್ ರವರು, ಗ್ರಾಮದ ಪ್ರಮುಖರಾದ ಅಶೋಕ್ ರವರು ಹಾಗೂ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಂಬಳೆ, ಮುಖಂಡರಾದ ಮಂಜುಳಾ, ಲಕ್ಷ್ಮಿದೇವಿ, ಜಯಲಕ್ಷ್ಮಿ ಸಂಪೇಕಟ್ಟೆ, ಕುರೇಕೊಳ್ಳಿಯ ಮಂಜುನಾಥ ಮತ್ತು ಇತರೆ ಆದಿವಾಸಿ ಮುಖಂಡರು ಉಪಸ್ಥಿತರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಕ.ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಶಿವಮೊಗ್ಗ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಮಂಜುನಾಥ್ ಕಪದೂರು ವಹಿಸಿದ್ದರು. ಆರಂಭದಲ್ಲಿ ಗ್ರಾಮದ ಮಕ್ಕಳು ಸ್ವಾಗತ ಗೀತೆ ಹಾಡಿದರು. ಸಂಘದ ಉಪಾಧ್ಯಕ್ಷೆ ಸವಿತಾ ವಂದಿಸಿದರು.

ಇದು ಪ್ರಥಮ ಆರೋಗ್ಯ ಶಿಬಿರ ವಾಗಿದ್ದು ಪ್ರತಿ ತಿಂಗಳು ಇಂತಹ ಶಿಬಿರ ಒಂದು ಯೋಜಿಸಲಾಗುತ್ತಿದೆ.

ಕನಿಷ್ಠ ವೇತನಕ್ಕೆ ಬಿಸಿಯೂಟ ನೌಕರರ ಆಗ್ರಹ

ಯಲಬುರ್ಗಾ: ರಾಜ್ಯ ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ನೀಡುವಂತೆ ಒತ್ತಾಯಿಸಿ ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ತಾಲೂಕು ನೌಕರರ ಸಂಘ, ಸಿಐಟಿಯು ಹಾಗೂ ಎಸ್‌ಎಫ್‌ಐ ತಾಲೂಕು ಸಮಿತಿಯಿಂದ ಮಂಗಳವಾರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಸಿಐಟಿಯು ತಾಲೂಕು ಅಧ್ಯಕ್ಷ ಶಿವನಗೌಡ ಮಾಲಿಪಾಟೀಲ್ ಮಾತನಾಡಿ, ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ಜಾರಿಗೊಳಿಸುವಂತೆ ಒತ್ತಾಯಿಸಿ, ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ ನಡೆಸಲಾಗಿತ್ತು. ಆ ವೇಳೆ ಸರ್ಕಾರ ವೇತನ ಹೆಚ್ಚಳ ಮಾಡುವ ಕುರಿತು ಭರವಸೆ ನೀಡಿತ್ತು. ಆದರೆ ಪ್ರಸ್ತುತ ಮಂಡಿಸಿದ ಬಜೆಟ್‌ನಲ್ಲಿ ಭರವಸೆ ಈಡೇರಲಿಲ್ಲ. ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಸಂಘದ ಮುಖಂಡರನ್ನು ಹತ್ತಿಕ್ಕುವ ಮೂಲಕ ಮಲತಾಯಿ ಧೋರಣೆ ಮಾಡುತ್ತಿದೆ. ಕೂಡಲೇ ರಾಜ್ಯದ ಎಲ್ಲ ಬಿಸಿಯೂಟ ನೌಕರರಿಗೆ ಕನಿಷ್ಠ 21 ಸಾವಿರ ರೂ. ಹೆಚ್ಚಳಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ, ಮುಂದಿನ ದಿನದಲ್ಲಿ ರಾಜ್ಯಾದ್ಯಂತ ಸಂಘದಿಂದ ಹೋರಾಟ ಆರಂಭಿಸಲಾಗುವುದು ಎಂದು ಆಗ್ರಹಿಸಿದರು. ಎಸ್‌ಎಫ್‌ಐ ತಾಲೂಕು ಸಂಚಾಲಕ ಎಂ.ಸಿದ್ದಪ್ಪ, ಬಿಸಿಯೂಟ ನೌಕರರ ಸಂಘದ ಶಿವನಗೌಡ್ರು, ಮಹಾಂತಮ್ಮ, ಉಮೇಶ ಗುಡದಪ್ಪನವರ್, ಗೌರಮ್ಮ ಮತ್ತಿತರರಿದ್ದರು.



STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	G.N.NAGARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.N.NAGARAJ, here by declare that the particulars given above are true to the best of my knowledge and belief.

Sd/-
G.N.NAGARAJ
Publisher

Date : March 21, 2020
Bangalore



ನಾಡ: ಮನೆ ತೆರಿಗೆ ಏರಿಕೆ ಪ್ರತಿಭಟಿಸಿ ಸಿಪಿಐ(ಎಂ) ಮನವಿ

ಬೈಂದೂರು ತಾಲೂಕು ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಡ, ಹಡವು, ಬಡಾಕೆರೆ ಮತ್ತು ಸೇನಾಪುರ ಗ್ರಾಮಗಳ ಸ್ಥಳೀಯ ನಿವಾಸಿಗಳ ಮನೆ ಕಟ್ಟಡ ತೆರಿಗಯನ್ನು ಗ್ರಾಮ ಪಂಚಾಯತ್ ಏಕಪಕ್ಷೀಯವಾಗಿ ವಿಪರೀತ ಹೆಚ್ಚಳ ಮಾಡಿರುವುದನ್ನು ಪುನರ್ ಪರಿಶೀಲಿಸಿ ಕಡಿಮೆ ಮಾಡಬೇಕು. ಮನೆ ತೆರಿಗೆ ವಿಧಿಸುವಲ್ಲಿ ತಾರತಮ್ಯ ಧೋರಣೆ ಅನುಸರಿಸಿರುವ ಗ್ರಾಮ ಪಂಚಾಯತ್ ತೆರಿಗೆ ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ನಿಯೋಗ ಸಾರ್ವಜನಿಕರೊಡಗೂಡಿ ಸಾಮೂಹಿಕವಾಗಿ ಮನವಿ ಅರ್ಪಿಸಲಾಯಿತು. ಮನವಿ ಸ್ವೀಕರಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹರೀಶ್ ಮೊಗವೀರ, ಮನೆ ತೆರಿಗೆ ತಾರತಮ್ಯದ ಬಗ್ಗೆ ಮನೆ, ಮನೆ ಬೇಟಿ ಮಾಡಿ ಪುನರ್ ಸಮೀಕ್ಷೆ ಮಾಡುವುದಾಗಿ ಭರವಸೆ ನೀಡಿದರು. ಸಿಪಿಐ(ಎಂ) ಪಕ್ಷದ ಮುಖಂಡರಾದ ರಾಜೀವ ಪಡುಕೋಣೆ, ಸುರೇಶ ಕಲ್ಲಾಗರ, ಫಿಲಿಪ್ ಡಿ.ಸಿಲ್ವ, ವೆಂಕಟೇಶ ಕೋಣಿ, ಶೀಲಾವತಿ, ಗ್ರಾಮ ಪಂಚಾಯತ್ ಸದಸ್ಯರಾದ ನಾಗರತ್ನ ನಾಡ, ರಾಜೇಶ್ ಪಡುಕೋಣೆ, ಮನೋರಮ ಭಂಡಾರಿ, ಸ್ಥಳೀಯ ಮುಖಂಡರಾದ ರಾಜೀವ ಭಂಡಾರಿ, ಲಯನ್ಸ್ ರಬೆಲ್ಲೊ, ಶಂಕರ ಬೆದ್ರಾಡಿ ಮೊದಲಾದವರು ನೇತೃತ್ವ ವಹಿಸಿದ್ದರು.

ಹಕ್ಲಾಡಿ: ಕೃಷಿ ಕೂಲಿಕಾರರ ಬೃಹತ್ ಸಮಾವೇಶ

ಹಕ್ಲಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಗ್ವಾಡಿ ಪ್ರದೇಶದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೃಷಿ ಕೂಲಿ ಕಾರ್ಮಿಕರ ಬೃಹತ್ ಸಮಾವೇಶ ಯಶಸ್ವಿಯಾಗಿ ಜರಗಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಕರೆಯಂತೆ 31 ಮಾರ್ಚ್ 2020 ಮಂಗಳವಾರ ರಾಜ್ಯ ವ್ಯಾಪಿ ಎಲ್ಲಾ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ "ಕೂಲಿಕಾರರ ಬೇಡಿಕೆ ದಿನಾಚರಣೆ "ಹೋರಾಟ ಜರಗಲಿರುವುದು. ಇದರ ಅಂಗವಾಗಿ ಅಂದು ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಎದುರು ಕೂಲಿಕಾರರ ಸಾಮೂಹಿಕ ಧರಣಿ ಮುಷ್ಕರದ ಪ್ರತಿಭಟನಾ ಕಾರ್ಯಕ್ರಮ ಜರಗಲಿದೆ, ನರೇಗಾ ಕೂಲಿ, ದಿನ ಒಂದರ ರೂಪಾಯಿ 600 ರೂ. ವಾರ್ಷಿಕ 250 ದಿನ ಕೂಲಿ ಕೆಲಸ, ಹಾಗೂ ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ಸರಕಾರವನ್ನು ಒತ್ತಾಯಿಸುವ ಹೋರಾಟ ಕಾರ್ಯಕ್ರಮದಲ್ಲಿ ಕೂಲಿಕಾರರೆಲ್ಲರೂ ಸಕ್ರೀಯವಾಗಿ ಭಾಗವಹಿಸಬೇಕು ಎಂದು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕರೆ ನೀಡಿದರು. ಕೃಷಿಕೂಲಿಕಾರರ ಸಂಘದ ಮುಖಂಡರಾದ ನಾಗರತ್ನ ನಾಡ, ಶೀಲಾವತಿ ಹಡವು ಇವರು ಸಭೆಯಲ್ಲಿ ಉಪಸ್ಥಿತರಿದ್ದರು.

ವರದಿ: ವೆಂಕಟೇಶ ಕೋಣಿ





109ನೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ತಾಲ್ಲೂಕು ಮಟ್ಟದ ಸಮಾವೇಶ

ದಲಿತ ಮಹಿಳೆಯರ ಹಕ್ಕುಗಳ ಸಮಿತಿ ಕರ್ನಾಟಕ ಸಂಘವೂ ಹಗರಿಬೊಮ್ಮನಹಳ್ಳಿ ತಾಲ್ಲೂಕು ಸಮಿತಿ ವತಿಯಿಂದ ದಲಿತ ಮಹಿಳೆಯರ ಸಾಮಾಜಿಕ ನ್ಯಾಯಕ್ಕಾಗಿ ಹಾಗೂ ಇತರೇ ಬೇಡಿಕೆಗಳಿಗಾಗಿ ಒತ್ತಾಯಿಸಿ.

109ನೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಾಲ್ಲೂಕು ಮಟ್ಟದ ಸಮಾವೇಶವನ್ನು 15 ಮಾರ್ಚ್ 2020 ರಂದು ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಸಾಹಿತಿಗಳಾದ ಶ್ರೀಮತಿ ಸುಧಾ ಚಿದಾನಂದ ಗೌಡ ಮಾಡಿದರು. ಅಧ್ಯಕ್ಷತೆಯನ್ನು ಪಿ. ಚಾಂದಬೀ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಯು. ಬಸವರಾಜ ರಾಜ್ಯ ಗೌರವ ಅಧ್ಯಕ್ಷರು, ಮೇಟಿ ಕೊಟ್ರಪ್ಪ ಹಿರಿಯ ಸಾಹಿತಿಗಳು, ಬಿ. ಮಾಳಮ್ಮ ರಾಜ್ಯ ಪ್ರಧಾನ ಕಾರ್ಯದರ್ಶಿ, ಸೈಯದ್ ಇರ್ಫಾನ್ ಅಧ್ಯಕ್ಷರು ಟಿಪ್ಪು ಸುಲ್ತಾನ್ ಅಭಿಮಾನಿಗಳ ಸಂಘ, ಕೆ. ನಾಗರತ್ನಮ್ಮ ಜಿಲ್ಲಾ ಅಧ್ಯಕ್ಷರು, ದೆ.ಮ.ವಿ.ಸಂಘದ ಈರಮ್ಮ ಜಿಲ್ಲಾ ಮುಖಂಡರು, ಎಸ್. ಜಗನ್ನಾಥ ಸಿಐಟಿಯು ಸ್ವಾಗತ, ವಂದನಾರ್ಪಣೆಯನ್ನು ಪುಷ್ಪಾ ಮಾಡಿದರು. ಸುಮಾರು ನೂರಕ್ಕು ಹೆಚ್ಚು ಮಹಿಳೆಯರು ಭಾಗವಹಿದ್ದರು.





ನಮ್ಮ ನೆಲದಲ್ಲಿ ನಮ್ಮನ್ನು ಪರಕೀಯರಾನ್ನಾಕಿಸುವ ಎನ್‌ಪಿಆರ್–ಎನ್‌ಆರ್‌ಸಿ–ಸಿಎಎ ವಾಪಾಸ್ಸಾಗಲು ಸಿಪಿಎಂ. ಪಕ್ಷದಿಂದ 15 ಮಾರ್ಚ್ 2020 ರಂದು ಕರಪತ್ರ ಹಂಚುವುದರ ಮೂಲಕ ಹಗರಿಬೊಮ್ಮನಹಳ್ಳಿಯಲ್ಲಿ ಪ್ರಚಾರಾಭಿಯಾನ ಪ್ರಾರಂಭ ಮಾಡಲಾಯಿತು. ಉದ್ಘಾಟನೆಯನ್ನು ಹಿರಿಯ ಸಾಹಿತಿಗಳಾದ ಮೇಟಿ ಕೊಟ್ರಪ್ಪ ಮಾಡಿದರು. ಸೈಯದ್ ಇರ್ಫಾನ್ ಅಧ್ಯಕ್ಷರು ಟಿಪ್ಪು ಸುಲ್ತಾನ್ ಅಭಿಮಾನಿ ಗಳ ಸಂಘ, ಬಿ. ಮಾಳಮ್ಮ ರಾಜ್ಯ ಸಮಿತಿ ಸದಸ್ಯರು, ಎಸ್. ಜಗನ್ನಾಥ, ಕೊಟಗಿ ಮಲ್ಲಿಕಾರ್ಜುನ, ಜಿ. ಸರೋಜಮ್ಮ, ಸಿ. ಹನುಮಂತ, ಕೆ. ರಾಮಣ್ಣ ಇದ್ದರು.

ಅಡಿಕೆ ಕೊಯ್ಯುವ ಆದಿವಾಸಿಗಳ ಸಂರಕ್ಷಣೆ ಆಗಬೇಕು

ಮತ್ತಿಮನೆಯಲ್ಲಿ ಸಮಾಲೋಚನಾ ಸಭೆ

ಅಡಿಕೆ ಕೊಯ್ಯುವ ಆದಿವಾಸಿಗಳ ಸಂರಕ್ಷಣೆಗಾಗಿ ಹೊಸನಗರ ತಾಲೂಕಿನ ಮತ್ತಿಮನೆಯಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಅವರ ವೃತ್ತಿ ಸಮಸ್ಯೆಗಳ ಕುರಿತು ಸಮಾಲೋಚನಾ ಸಭೆಯನ್ನು ನಡೆಸಿತು.

2020 ಮಾರ್ಚ್ 4 ರಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಈ ಸಭೆಯನ್ನು ವ್ಯವಸ್ಥೆಗೊಳಿಸಿತ್ತು. ವೃತ್ತಿಯಲ್ಲಿನ ಅವರ ಸಮಸ್ಯೆಗಳನ್ನು ಪರಿಹರಿಸಲು, ಭದ್ರತೆ ಒದಗಿಸಲು ಸರ್ಕಾರಕ್ಕೆ ಮನವಿ ಮಾಡಲು ನಿರ್ಧರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಂಬ್ಳೆ ಅವರು ವಹಿಸಿದ್ದರು.



ಆರಂಭದಲ್ಲಿ ಈ ಸಭೆಯ ಮೂಲ ಉದ್ದೇಶ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿನ ವಸ್ತುಸ್ಥಿತಿಯ ಕುರಿತಾದಂತೆ ಸಂಘಟನೆಯ ರಾಜ್ಯ ಸಹ ಸಂಚಾಲಕರು ಮತ್ತು ಜಿಲ್ಲಾ ಪ್ರಧಾನ ಸಂಚಾಲಕ ರಾಗಿರುವ ಶ್ರೀಧರ ನಾಡ ಅವರು ವಿವರಿಸಿದರು. ಅಡಿಕೆ ಬೆಳೆ ಮತ್ತು ಅದರ ವಾಣಿಜ್ಯ ವಹಿವಾಟು ಮಾರುಕಟ್ಟೆಯ ಸ್ಥಿತಿಗತಿ ಹಾಗೂ ಅಡಿಕೆ ಕೊಯ್ಯುವ ಆದಿವಾಸಿಗಳ ವೃತ್ತಿಯ ಸಮಸ್ಯೆಗಳು ಇತ್ಯಾದಿಗಳ ವಿವರ ವಿಶ್ಲೇಷಣೆಯನ್ನು ಸಂಘದ ರಾಜ್ಯ ಸಂಚಾಲಕರಾದ ಎಸ್. ವೈ. ಗುರುಶಾಂತ್ ನೀಡಿದರು. ವೃತ್ತಿಯಲ್ಲಿ ಬಹುತೇಕ ತೊಡಗಿರುವವರು ಹಸಲರು ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಬಳಿಕ ವಿವಿಧ ಪ್ರದೇಶಗಳಿಂದ ಬಂದ ಪ್ರತಿನಿಧಿಗಳು ವಸ್ತುಸ್ಥಿತಿಯನ್ನು ಮತ್ತು ವೃತ್ತಿಯಲ್ಲಿ ಎದುರಿಸುತ್ತಿರುವ ಸಮಸ್ಯೆ, ಅಪಘಾತಗಳ ಘಟನೆಗಳು ಇತ್ಯಾದಿಗಳ ಅನುಭವಗಳನ್ನು ಸಭೆಯಲ್ಲಿ ಹಂಚಿಕೊಂಡರು. ಬಳಿಕ ಇವೆಲ್ಲವನ್ನೂ ಕ್ರೋಢೀಕರಿಸಿ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಧರಿಸಲಾಯಿತು. ಕೊನೆಯಲ್ಲಿ ವಂದನಾರ್ಪಣೆಯನ್ನು ನರಸಿಂಹ ಸಂಪೇಕಟ್ಟೆ ಇವರು ನೆರವೇರಿಸಿದರು. ಸಭೆಯಲ್ಲಿ ರಾಜ್ಯ ಸಂಘಟನಾ ಸಮಿತಿಯ ಸದಸ್ಯರಾದ ಸವಿತಾ ರವರು ಉಪಸ್ಥಿತರಿದ್ದರು.

ಇತ್ತೀಚೆಗೆ ಡಿಸೆಂಬರ್ 21–22 ರಂದು ಹೊಸನಗರದಲ್ಲಿ ನಡೆದ ಆದಿವಾಸಿಗಳ ರಾಜ್ಯ ಸಮ್ಮೇಳನದಲ್ಲಿ ಪ್ರತಿನಿಧಿಗಳು ವಿಷಯಗಳನ್ನು ಚರ್ಚಿಸಿದ ಬಳಿಕ ಕೈಗೊಂಡ ನಿರ್ಣಯದಂತೆ ಕೈಗೊಂಡ ಮುಂದುವರಿದ ಪ್ರಯತ್ನ ಇದಾಗಿದೆ.

ಕೇರಳ ಮತ್ತು ಕೊರೊನಾ ಬಿಕ್ಕಟ್ಟು

ಇದೊಂದು ಬೆಚ್ಚಿಬೀಳಿಸುವ ಹೋಲಿಕೆಯಾಗಿರಬಹುದು. ಆರೋಗ್ಯ ಸೇವೆಯಲ್ಲಿ ಕ್ಯೂಬಾ ಅಮೆರಿಕಕ್ಕೆ ಮಾಡಿದಂತೆ, ಕೇರಳವು ದೆಹಲಿಯ ಮತ್ತು ಇತರ ರಾಜ್ಯಗಳ ಮನಸಾಕ್ಷಿಯನ್ನು ಚುಚ್ಚುತ್ತಿರುವಂತೆ ಕಾಣುತ್ತದೆ. ಇದನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ, ಕ್ಯೂಬಾದ ಆರೋಗ್ಯಸೇವೆ ಸೇರಿದಂತೆ ಕಿರೀಟಪ್ರಾಯ ಕಲ್ಯಾಣ ಯೋಜನೆಗಳು ಅಮೆರಿಕವನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುವ, 2007ರಲ್ಲಿ ಮೈಕೇಲ್ ಮೂರ್ ತಯಾರಿಸಿದ 'ಸಿಕೊ' ಡಾಕ್ಯುಮೆಂಟರಿ ಫಿಲಮನ್ನು ನೋಡಬೇಕು.



ಮಾಧ್ಯಮದ ಮುಂದೆ ಕೇರಳ ಸಿಎಂ

1. ಕೊರೋನಾ ತಡೆಗಟ್ಟಲು 20 ಸಾವಿರ ಕೋಟಿಯ ಯೋಜನೆ
2. ಮಕ್ಕಳಿಗೆ ಬಿಸಿಯೂಟ
3. ಸರ್ಕಾರದ ಉಸ್ತುವಾರಿಯಲ್ಲಿ ಹ್ಯಾಂಡ್ ಸಾನಿಟೈಸರ್ ಉತ್ಪಾದನೆ.
4. ಕೈದಿಗಳಿಂದ ಮಾಸ್ಕ್ ಉತ್ಪಾದನೆ.
5. ವಿದೇಶದಿಂದ ಬಂದವರು ಮತ್ತು ಬರುತ್ತಿರುವವರ ಪತ್ತೆಗೆ ವಿಶೇಷತಂಡ
6. ಇಂಟರ್ ನೆಟ್ ವೇಗದ ಸಮಸ್ಯೆಗೆ ಪರಿಹಾರ
7. ಕೊರೋನಾಬಾಧಿತರಿಗೆ ಸಾಮಾಜಿಕ ಭದ್ರತೆ ಪಿಂಚಣಿ ವಿತರಣೆ
8. ರಾಜ್ಯದ ಜನರಿಗೆ ತೊಂದರೆ ಆದರೆ ಆಹಾರ ಪೂರೈಕೆಯ ಭರವಸೆ
9. ಐಸೋಲೇಷನಲ್ಲಿದ್ದವರಿಗೆ ಪುಸ್ತಕಗಳ ವಿತರಣೆ
10. 1000 ಅಧಿಕ ಹೋಟೆಲ್ ಗಳಿಂದ ಕೇವಲ 20 ರುಪಾಯಿಗೆ ಆಹಾರ
11. ಆರೋಗ್ಯ ಪ್ಯಾಕೇಜ್‌ಗಳು



ಮಾಧ್ಯಮದ ಮುಂದೆ ಪ್ರಧಾನಿ

"ಮಾರ್ಚ್ 22 ರಂದು ಮನೆಯ ಹೊರಗೆ ಬರದಿರೋಣ"

ಕಳೆದ 9 ದಿವಸಗಳಿಂದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವೈಯಕ್ತಿಕ ಟ್ವಿಟರ್ ಖಾತೆ ಕೊವಿಡ್-19 ಮಹಾಮಾರಿ ಮತ್ತು ಅದರ ದೈತ್ಯನರ್ತನದ ಮೇಲೆ ಕೇಂದ್ರೀಕೃತವಾಗಿದೆ. ಅವರ ಟ್ವೀಟುಗಳಲ್ಲಿ ಸಲಹೆಗಳು, ಭರವಸೆಗಳು, ಮನವಿಗಳು, ಕಾರ್ಯಾಚರಣೆಗಳು, ನಿರ್ಣಯಗಳು, ಮಾಹಿತಿ ಇರುತ್ತವೆ. ಅವರ ಮುಖ್ಯಮಂತ್ರಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಸಹ ಅದೇ ಒತ್ತು ಇದೆ. ಸಾಮಾಜಿಕ ಮಾಧ್ಯಮದ ಅಕೌಂಟುಗಳು ಹೆಚ್ಚಾಗಿ ಸರಳೀಕೃತ ಸೂಚಕಗಳಷ್ಟೇ. ಆದರೆ ಅವರ ಸರಕಾರ ತಳಮಟ್ಟದಲ್ಲಿ ಮಾಡಿದ ಕೆಲಸಗಳು ಇನ್ನಷ್ಟು ಅಗಾಧವಾಗಿವೆ.

ಒಬ್ಬ ಕಮ್ಯುನಿಸ್ಟನಿಗೆ ಕಾರ್ಪೊರೆಟ್ ಮಾನಕಗಳನ್ನು ಅಳವಡಿಸುವುದು ವಕ್ರದೃಷ್ಟಿ ಎನ್ನಿಸಿಕೊಳ್ಳಬಹುದು. ಆದರೆ ಯಾರಾದರೂ ಅದನ್ನು ಮಾಡಲೇಬೇಕೆಂದು ಹಟ ತೊಟ್ಟಿದ್ದರೆ, ವಿಜಯನ್ ಅವರ ಸ್ಪಂದನದ ಅವಧಿ, ವ್ಯೂಹಾತ್ಮಕ ಚಿಂತನೆ, ಸಂವಹನ, ಸಂಯೋಜನೆ ಮತ್ತು ಕೆಲಸದ ನಿಯೋಜನೆ ಯಾವುದೇ ಸಿಇಓ ಗಿಂತ ಉತ್ತಮವಾದ್ದು ವೇಗವಾದ್ದು ಎಂದು ಅವರಿಗೆ ತಕ್ಷಣ ಗೋಚರಿಸುತ್ತದೆ. ಒಂದು ವರದಿಯ ಪ್ರಕಾರ ಮಾರ್ಚ್ 16ರ ಹೊತ್ತಿಗೆ ಕೇರಳದಲ್ಲಿ ಭಾರತದ ರಾಜ್ಯಗಳಲ್ಲೇ ಅತಿ ಹೆಚ್ಚು (1867) ಕೊರೊನಾವೈರಸ್

– ಸುಗತ ಶ್ರೀನಿವಾಸ ರಾಜು –
(ಅನು: ವಸಂತರಾಜ ಎನ್.ಕೆ.)
ಮೂಲ ಕೃಪೆ: ಮುಂಬಯಿ ಮಿರರ್ ಮಾ.18. 2020

ಪರೀಕ್ಷೆ ನಡೆದಿದೆ. ಇದು, ಮೊದಲ ಕೊರೊನಾ ಸಾವು ಸಂಭವಿಸಿದ ಪರೀಕ್ಷೆಗಳಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ನಡೆದ ಪರೀಕ್ಷೆಗಳ ಎರಡು ಪಟ್ಟು. ವಿಜಯನ್ ಅವರ ದಕ್ಷತೆಗೆ ಕಾರ್ಪೊರೆಟ್ ಜಗತ್ತಿನಲ್ಲಿ ಸಹ ಸಾಟಿಯಿಲ್ಲ. ಯಾಕೆಂದರೆ, ಕಾರ್ಪೊರೇಟುಗಳು ಸಾಂಕ್ರಾಮಿಕಗಳ ವಿರುದ್ಧ ಹೋರಾಡಬೇಕಿಲ್ಲ; ಅವು ಸಮ್ಮಿಶ್ರ ಸರಕಾರಗಳನ್ನು ನಡೆಸುವುದಿಲ್ಲ; ವೈವಿಧ್ಯಮಯ ಜನರೊಂದಿಗೆ ಅವು ವ್ಯವಹರಿಸಬೇಕಾಗಿಲ್ಲ.

ಆದರೆ ಸಾಮಾಜಿಕ ದೂರ ಸಾಧಿಸುವ ತಮ್ಮದೇ ಸರಕಾರದ ನಿರ್ದೇಶನಗಳನ್ನು ಗಾಳಿಗೆ ತೂರಿ, ಮಾ. 15ರಂದು ಬಿಜೆಪಿ ಶಾಸಕನ ಮಗನ ಅದ್ದೂರಿ ಮದುವೆಗೆ ಹಾಜರಿದ್ದ, ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಅವರೊಂದಿಗೆ ವಿಜಯನ್ ಅವರನ್ನು ಖಂಡಿತ ಹೋಲಿಸಬಹುದು! ದೆಹಲಿಯಲ್ಲಿನ ಪ್ರಧಾನ ಮಂತ್ರಿಯವರು ಇಂತಹ ಸ್ವಚ್ಛಂದ ಭಂಡತನ ತೋರಿಸಿಲ್ಲ. ಆದರೆ ಅವರು ಖಂಡಿತ ವಿಚಲಿತರಾದಂತೆ ಕಂಡರು. ಮಾ.14ರಂದು ವಿಜಯನ್ ಬರೆದ ಪತ್ರ ಇದನ್ನು ಸೂಚಿಸುತ್ತದೆ. ಆ ದಿನ ಗೃಹ ಸಚಿವಾಲಯದಿಂದ ಪತ್ರ ರಾಜ್ಯ ಪ್ರಕೋಪ ಪರಿಹಾರ ನಿಧಿಯಿಂದ (ಎಸ್.ಡಿ.ಆರ್.ಎಫ್) ಕೊವಿಡ್-19 ಪರಿಹಾರಕ್ಕೆ ಹಣ ಬಳಸಿಕೊಳ್ಳಬಹುದು ಎಂದು ತಿಳಿಸಿತ್ತು. ಅದೇ ದಿನ ಸಂಜೆ ಬಂದ ಇನ್ನೊಂದು ಪತ್ರದಲ್ಲಿ ನಿಧಿಯನ್ನು ಕೆಲವು ಸವಲತ್ತುಗಳನ್ನು ಕೊಡಲು ಬಳಸುವ ಎರಡು ಕಲಮುಗಳನ್ನು ಕಿತ್ತು ಹಾಕಲಾಗಿತ್ತು. ಕೂಡಲೇ ವಿಜಯನ್ ಅದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ಕೊಟ್ಟಿದ್ದರು : "ಈ ಕಲಮುಗಳನ್ನು ಕಿತ್ತು ಹಾಕುವ ಮೂಲಕ ಎಸ್.ಡಿ.ಆರ್.ಎಫ್ ಕೊಡಬಹುದಾಗಿದ್ದ ಪರಿಹಾರ/ನೆರವಿನ ಆಶಯಕ್ಕೆ ತಿಲಾಂಜಲಿ ಇತ್ತಂತಾಗಿದೆ. ಈ ಎರಡು ಕಲಮುಗಳನ್ನು.. .. ತಕ್ಷಣ ಮತ್ತೆ ತರಬೇಕು." ಮರುದಿನ, ಮಾ.15ರಂದು ಪ್ರಧಾನಿಯವರು ಸಾರ್ಕ್ ದೇಶಗಳೊಂದಿಗೆ 'ಸಕಾಲಿಕ ಕಾರ್ಯಾಚರಣೆ'ಯ ಕುರಿತು ಚರ್ಚೆಯಲ್ಲಿ ವ್ಯಸ್ತರಾದರು. ಆದರೆ ಅದಕ್ಕೆ ಕೇರಳದಲ್ಲಿ ತಿಲಾಂಜಲಿ ಕೊಡಲಾಗಿತ್ತು ಎಂಬುದು ಚೋದ್ಯದ ಸಂಗತಿ.

ಹಲವು ದಶಕಗಳಿಂದ ಕೇರಳ ಸಾಮಾಜಿಕ ಮತ್ತು ಸಾರ್ವಜನಿಕ ಆರೋಗ್ಯದ ತನ್ನ ಹೆಗ್ಗುರುತನ್ನು ಉಳಿಸಿಕೊಂಡಿದೆ. ಅದು 'ಪ್ರಗತಿಪರ' ಎಂದು ಸತತವಾಗಿ ಗುರುತಿಸಲ್ಪಟ್ಟಿರುವುದು ಬರಿಯ ಗ್ರಹಿಕೆಯ ಆಧಾರದ ಮೇಲೆ ಮಾತ್ರವಲ್ಲ. ವಾಸ್ತವ ಸಾಧನೆ ಮತ್ತು ದತ್ತಾಂಶಗಳ ಆಧಾರದ ಮೇಲೆ. ನಿಫಾ ವೈರಸ್, ಮಹಾಪೂರದ ನಂತರ ಪುನರ್ವಸತಿ ಮತ್ತು ಪುನರ್ರಚನೆ, ಲಿಂಗ ಸಮಾನತೆಯ ಹಕ್ಕುಗಳು, ಮಾಧ್ಯಮ ಸ್ವಾಯತ್ತತೆ, ಹಣಕಾಸು ಫೆಡರಲಿಸಂ ಅಥವಾ ಸ್ಥಳೀಯ ಆಡಳಿತ – ಇವೆಲ್ಲವನ್ನು ನಿಭಾಯಿಸುವುದರಲ್ಲಿ ಪ್ರಗತಿಯಲ್ಲಿ ಅದು ಯಾವಾಗಲೂ ಮುಂದಿತ್ತು. ಒಂದು ಕಾಲಾವಧಿಯಲ್ಲಿ ಕರ್ನಾಟಕ ಸಹ ಪ್ರಗತಿಪರ ಸಾಮಾಜಿಕ ಕಾನೂನುಗಳು, ಮತ್ತು ಆಡಳಿತದ ವಿಕೇಂದ್ರೀಕರಣಕ್ಕೆ ಪ್ರಸಿದ್ಧವಾಗಿತ್ತು. ಆದರೆ ಇತ್ತೀಚೆಗೆ ಅದು ರೆಸಾರ್ಟುಗಳಲ್ಲಿ ರಾಜಕೀಯ ಸರ್ಜರಿ ಮತ್ತು ಕಾಂಚಾಣದ ಪೂಜೆಗೆ ಮಾತ್ರ ಸುದ್ದಿಯಲ್ಲಿದೆ.

ಕೇರಳದ ಸಫಲತೆಗಳಿಗೆ ಅದರ ಸಾಕ್ಷರತೆ ಕಾರಣ ಎಂದು ಹೆಚ್ಚಾಗಿ ಭಾವಿಸಲಾಗಿದೆ. ಅದೊಂದು ಅಂಶವಾಗಿರಬಹುದು. ಆದರೆ ಸಾಮೂಹಿಕ ಸಾಮಾನ್ಯ ಪ್ರಜ್ಞೆ ಮತ್ತು ನಿರ್ದಿಷ್ಟ ರಾಜಕೀಯ ಸಂಸ್ಕೃತಿಗಳಿಗೆ ಸಾಕ್ಷರತೆ ಬದಲಿಯಾಗಲಾರದು. ಕರ್ನಾಟಕದ ಸಾಕ್ಷರತೆ ದರ ಸಹ ಉತ್ತಮವಾಗಿಯೇ ಇದೆ. ಆದರೆ ಅದರ ಟೆಕ್ಕಿಗಳೂ ಸಾಮಾಜಿಕವಾಗಿ ಸಂಪ್ರದಾಯಸ್ಥರು ಮತ್ತು ಪ್ರಾದೇಶಿಕ ಅಸಮಾನತೆ ಅಗಾಧವಾಗಿದೆ ಎಂದು ಸಮೀಕ್ಷೆಗಳು ತಿಳಿಸಿವೆ.


ಕೆಲವರು ಕೇರಳದ ಸಫಲತೆಗೆ ಕಮ್ಯುನಿಸ್ಟರು ಕಾರಣ ಎಂದು ಹೇಳಬಹುದು. ಆದರೆ ಇದು ಸಹ ಪೂರ್ಣ ನಿಜವಲ್ಲ. ಕಾಂಗ್ರೆಸ್ ಸಹ ಕೇರಳದಲ್ಲಿ ಬೇರೆ ರೀತಿಯಲ್ಲಿ ವರ್ತಿಸುತ್ತದೆ. ವೈನಾಡಿನಿಂದ ಚುನಾಯಿತರಾದ ಒಬ್ಬರು ಉತ್ತರ ಭಾರತದ ಸಂಸದರಿಗೆ ಈ ಸಾಂಸ್ಕೃತಿಕ ವ್ಯತ್ಯಾಸದ ಅನುಭವವಾಗಿರಬೇಕು. ಬೇರೆಲ್ಲೂ ಇಲ್ಲದ ಆಡಳಿತದ ಸಾತತ್ಯ ಅಲ್ಲಿದೆ. ಅದೇ ರೀತಿ ಹಲವು ಪಕ್ಷಗಳ ಮೈತ್ರಿಕೂಟಗಳು ರಾಜ್ಯಕ್ಕೆ ವರವಾಗಿವೆ. ಬೇರೆ ರಾಜ್ಯಗಳಲ್ಲಿ ಒಂದು ಆಡಳಿತದ ಕಾರ್ಯಕ್ರಮಗಳು ಇನ್ನೊಂದು ಆಡಳಿತದ ಬದಲಾವಣೆಗಳಿಂದ ಬುಡಮೇಲಾಗುತ್ತವೆ. ಆದರೆ ಕೇರಳದಲ್ಲಿ ಹಾಗಾಗುವುದಿಲ್ಲ. ಇದು ಆರೋಗ್ಯ ಮೂಲಸೌಕರ್ಯದ ಬೆಳವಣಿಗೆಯಲ್ಲಿ ಮತ್ತು ಗ್ರಾಮ ಪಂಚಾಯತ್ ನ ಸ್ವಾಯತ್ತತೆಗೆ ಇರುವ ಖಾತ್ರಿಯಲ್ಲಿ ಕಂಡು ಬರುತ್ತದೆ. ಕೇರಳದಲ್ಲಿ ಪ್ರತಿ 3.95 ಕಿ.ಮಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ರಾಷ್ಟ್ರೀಯ ಸರಾಸರಿ 7.3 ಕಿ.ಮಿ. ಕರ್ನಾಟಕ ಬಹಳ ಮೊದಲೇ ಸ್ಥಾಪಿಸಿದ್ದ ಸ್ಥಳೀಯ ಆಡಳಿತದಲ್ಲಿನ ಮುನ್ನಡೆಯನ್ನು, ಶಾಸಕನನ್ನು ತನ್ನ ಅಭಿವೃದ್ಧಿ ಮಾದರಿಯ ಕೇಂದ್ರ ಮಾಡುವ ಮೂಲಕ ಚೆಲ್ಲಿಬಿಟ್ಟಿದೆ

ಗೇಟ್ಸ್ ಫೌಂಡೇಶನ್ ನಾಯಕತ್ವದಲ್ಲಿ ವಿಶ್ವ ಆರೋಗ್ಯ ಸಂಘಟನೆ, ವಿಶ್ವ ಬ್ಯಾಂಕ್ ಮತ್ತು ಯುನಿಸೆಫ್ ಗಳ ಸಾಮೂಹಿಕ ಪ್ರಯತ್ನದಲ್ಲಿ ತಯಾರಿಸಲಾದ ವರದಿಯಲ್ಲಿ, ಕೇರಳ ಆರೋಗ್ಯದಲ್ಲಿ ಮಾಡಿದ ಸಾಧನೆಗಳಿಗೆ ಕಾರಣಗಳನ್ನು ವಿಶ್ಲೇಷಿಸಲಾಗಿದೆ. ಸಾರ್ವಜನಿಕ ಆರೋಗ್ಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಮೂಲಸೌಕರ್ಯ, ಹಣಕಾಸು ಯೋಜನೆ, ಹೆಣ್ಣು ಮಕ್ಕಳ ಶಿಕ್ಷಣ, ಸಾಮೂಹಿಕ ಭಾಗವಹಿಸುವಿಕೆ, ಮತ್ತು ಆಡಳಿತದ ವಿಕೇಂದ್ರೀಕರಣ – ಇವುಗಳ ಮೇಲೆ ಸತತ ಒತ್ತು ಸಾಧನೆಗೆ ಕಾರಣಗಳು ಎನ್ನಲಾಗಿದೆ. ಇವಲ್ಲದೆ "ಗುರುತಿಸಲಾದ ನ್ಯೂನತೆಗಳಿಗೆ ಸ್ಪಂದಿಸಿ ವ್ಯವಸ್ಥೆಯನ್ನು ಉತ್ತಮ ಪಡಿಸುವ ಇಚ್ಛಾಶಕ್ತಿ" ಸಹ ಕಾರಣ ಎನ್ನಲಾಗಿದೆ.

ಕೊರೊನಾ ಬಿಕ್ಕಟ್ಟಿನ ಈ ಸಂದಿಗ್ದ ಗಳಿಗೆಯಲ್ಲಿ ಕೇರಳ ಅದಕ್ಕೆ ಮಾಡಿದ ಸ್ಪಂದನೆಯಲ್ಲಿ ಮಾಡಿದ ಮೂರು ಸೃಜನಶೀಲ ಅಂಶಗಳಿಗೆ ಬರಿಯ ಹಳಸಲು ಮೆಚ್ಚುಗೆ ಸಾಲದು. ಮೊದಲನೆಯದಾಗಿ, ಮುಖಗವಸುಗಳ ಕೊರತೆ ಕಂಡು ಬಂದಾಗ, ಸಮರೋಪಾದಿಯಲ್ಲಿ ಜೈಲಿನ ಕೈದಿಗಳಿಂದ ಅವನ್ನು ತಯಾರಿಸಲಾಯಿತು. ಎರಡನೇಯದಾಗಿ, ಶಾಲೆಗಳು ಮುಚ್ಚಿದಾಗ ಬಿಸಿಯೂಟವನ್ನು ಮಕ್ಕಳಿಗೆ ಮನೆಗಳಿಗೆ ಹೋಗಿ ಕೊಡಲಾಯಿತು. ಮೂರನೆಯದಾಗಿ, ಕೊವಿಡ್ ಸೋಂಕು ದೃಢಪಟ್ಟವರ ಚಲನೆಯನ್ನು ಗಂಟಾವಾರಾಗಿ ಕಂಡು ಹಿಡಿದು 'ಫ್ಲೋ ಚಾರ್ಟ್' ರೂಪದಲ್ಲಿ ದಾಖಲಿಸಲಾಯಿತು. ಭಾರೀ ಜಾಣತನದ ಕೆಲಸ. ಇದು ಸೋಂಕು ಹರಡುವಿಕೆಯ ಕೇಂದ್ರವಾಗಿದ್ದ ಪತ್ತನಮಿತ್ತದಲ್ಲಿ ಸೋಂಕು ಹರಡುವಿಕೆಯನ್ನು ತಡೆಗಟ್ಟುವಲ್ಲಿ ಬಹಳ ಪ್ರಯೋಜನಕಾರಿಯಾಯಿತು. ಆರೋಗ್ಯ ಮಂತ್ರಿ ಶೈಲಜ ಟೀಚರ್ ಅವರ ಕರ್ತವ್ಯಪರತೆಯಂತೂ ಈಗ ದಂತಕತೆಯಾಗಿ ಬಿಟ್ಟಿದೆ.

ಇದೊಂದು ಬೆಚ್ಚಿಬೀಳಿಸುವ ಹೋಲಿಕೆಯಾಗಿರಬಹುದು. ಆರೋಗ್ಯ ಸೇವೆಯಲ್ಲಿ ಕ್ಯೂಬಾ ಅಮೆರಿಕಕ್ಕೆ ಮಾಡಿದಂತೆ, ಕೇರಳವು ದೆಹಲಿಯ ಮತ್ತು ಇತರ ರಾಜ್ಯಗಳ ಮನಸಾಕ್ಷಿಯನ್ನು ಚುಚ್ಚುತ್ತಿರುವಂತೆ ಕಾಣುತ್ತದೆ. ಇದನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ, ಕ್ಯೂಬಾದ ಆರೋಗ್ಯಸೇವೆ ಸೇರಿದಂತೆ ಕಿರೀಟಪ್ರಾಯ ಕಲ್ಯಾಣ ಯೋಜನೆಗಳು ಅಮೆರಿಕವನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುವ 2007ರಲ್ಲಿ ಮೈಕೇಲ್ ಮೂರ್ ತಯಾರಿಸಿದ 'ಸಿಕೊ' ಡಾಕ್ಯುಮೆಂಟರಿ ಸಿನೆಮಾವನ್ನು ನೋಡಬೇಕು. ●





ಕೊರೊನ ಮಹಾಮಾರಿ ಮತ್ತು ಆರ್ಥಿಕ ಹಿಂಜರಿತ ವಿರುದ್ಧ ಹೋರಾಟಕ್ಕೆ ಸಮಗ್ರ ಕ್ರಮಗಳ ಅಗತ್ಯವಿದೆ

ಭಾರತದಲ್ಲಿ ಕೊರೊನ ವೈರಸ್ ಮಹಾಮಾರಿ ನಮ್ಮ ಆರೋಗ್ಯ ವ್ಯವಸ್ಥೆಯ ಹಾಗೂ ನವ–ಉದಾರವಾದಿ ಆರ್ಥಿಕ ಚೌಕಟ್ಟಿನ ಸುತ್ತ ಬೆಳೆದ ವ್ಯವಸ್ಥೆಯ ಅಸಮರ್ಪಕತೆಯನ್ನು, ಈ ವ್ಯವಸ್ಥೆಯ ವಿಚಾರಹೀನತೆ ಮತ್ತು ಭಂಗುರತೆಯನ್ನು ಬಯಲಿಗೆ ತಂದಿದೆ. ಸರಕಾರ ತನ್ನ ಯೋಜನೆಗಳನ್ನು ಮತ್ತು ಕ್ರಮಗಳನ್ನು ಪಾರದರ್ಶಕವಾಗಿ ತಿಳಿಯಪಡಿಸಿ ಸಾರ್ವಜನಿಕರ ನಡುವೆ ವಿಶ್ವಾಸವನ್ನು ಉತ್ತಮಪಡಿಸಬೇಕು. ಈ ಸವಾಲಿನ ಕ್ಲಿಷ್ಟ ಸ್ವರೂಪ ಮತ್ತು ಇದು ಸಮಾಜದ ವಿವಿಧ ವಿಭಾಗಗಳ ಮೇಲೆ ಬೀರಬಹುದಾದದ ವಿಭಿನ್ನ ರೀತಿಯ ದುಷ್ಪರಿಣಾಮಗಳನ್ನು ಗಮನಿಸುವಾಗ, ಈ ಸವಾಲಿಗೆ ಸರಕಾರದ ಸ್ಪಂದನೆ ಸಮರ್ಪಕವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಈ ಬಿಕ್ಕಟ್ಟಿಗೆ ತ್ವರಿತವಾದ ಮತ್ತು ಆರೋಗ್ಯ ಹಾಗೂ ಆರ್ಥಿಕ ರಂಗಗಳೆರಡನ್ನೂ ಗಮನಕ್ಕೆ ತಗೊಂಡ ಒಂದು ಸಮಗ್ರವಾದ ಸ್ಪಂದನೆಯ ಅಗತ್ಯ ಇದೆ.



ಪ್ರಕಾಶ ಕಾರಟ್

ಕೊವಿಡ್–19 ಮಹಾಮಾರಿ ಜಾಗತಿಕ ಅರ್ಥವ್ಯವಸ್ಥೆಗೆ ಭಾರೀ ಹೊಡೆತ ಕೊಟ್ಟಿದೆ, ಅದರ ಪರಿಣಾಮಗಳು ಇನ್ನೂ ಅನಾವರಣಗೊಳ್ಳುತ್ತಿವೆ. ವಿಶ್ವ ಆರೋಗ್ಯ ಸಂಘಟನೆ(ಡಬ್ಲುಹೆಚ್‌ಒ)ಯ ಪ್ರಕಾರ ಮಾರ್ಚ್ 18ರ ವೇಳೆಗೆ ಈ ಮಹಾಮಾರಿ 164 ದೇಶಗಳಿಗೆ ಮತ್ತು ಪ್ರದೇಶಗಳಿಗೆ ಹರಡಿದೆ, 1,94,000 ಜನಗಳನ್ನು ಬಾಧಿಸಿದೆ, ಮತ್ತು 7800 ಮಂದಿಯ ಸಾವು ಸಂಭವಿಸಿದೆ.

ಜಾಗತಿಕ ಅರ್ಥವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಖಂಡಿತವಾಗಿಯೂ ಒಂದು ಹಿಂಜರಿತ ಉಂಟಾಗುತ್ತದೆ. ವಿವಿಧ ವಲಯಗಳಲ್ಲಿ, ನಿರ್ದಿಷ್ಟವಾಗಿ, ಪ್ರಯಾಣ, ಪ್ರಸೋದ್ಯಮ, ತೈಲ ಮತ್ತು ಸೇವಾ ವಲಯಗಳಲ್ಲಿ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡಿವೆ. ಜಗತ್ತಿನಾದ್ಯಂತ ಉತ್ಪಾದನಾ ಸರಪಳಿಗಳನ್ನು ಇದು ಮುರಿದಿದೆ. ಇದು ಉತ್ಪಾದನೆ, ವ್ಯಾಪಾರ ಮತ್ತು ಹೂಡಿಕೆಗಳ ಮೇಲೆ ನೇರ ಪರಿಣಾಮ ಬೀರುತ್ತದೆ.

ಶೇರು ಮಾರುಕಟ್ಟೆಗಳು ಪಾತಾಳಕ್ಕೆ ಕುಸಿದಿವೆ. ನವ–ಉದಾರವಾದಿ ಹಣ ವ್ಯವಸ್ಥೆಯ ಧೋರಣೆ ಒದಗಿಸಿದ ಅಗ್ಗದ ಹಣದಿಂದ ಸ್ಫುರಿಸಿದ ಆರ್ಥಿಕ ತೇಜಿಯ ಗುಳ್ಳೆ ಈಗ ಒಡೆದಿದೆ. ಹಣಕಾಸು ಮಾರುಕಟ್ಟೆ ತೀವ್ರ ಪ್ರಮಾಣದಲ್ಲಿ ಬಿದ್ದಿರುವುದು ನಿಜ ಆರ್ಥಿಕವನ್ನೂ ತೀವ್ರವಾಗಿ ತಟ್ಟಲಿದೆ ಮತ್ತು ಹಿಂಜರಿತವನ್ನು ಆಳಗೊಳಿಸಲಿದೆ. ಇದು ಅಗಾಧ ಮಟ್ಟದ ಕಾರ್ಪೊರೇಟ್ ಸಾಲಗಳ ಜತೆಗೂಡಿ ಹಣಕಾಸು ಮಾರುಕಟ್ಟೆಯಲ್ಲಿ ಒಂದು ಅಂಟುಜಾಢ್ಯಕ್ಕೆ ಕಾರಣವಾಗಬಹುದು; 2008ಕ್ಕಿಂತಲೂ ಹೆಚ್ಚಿನ ಮಟ್ಟದ ಕುಸಿತದ ಬೆದರಿಕೆ ಉಂಟಾಗಬಹುದು.

ಈ ಸಾಂಕ್ರಾಮಿಕ ಆರಂಭವಾದ ಚೀನಾದಲ್ಲಿ ಸೋಂಕಿನ ದರ ತೀವ್ರವಾಗಿ ಇಳಿದಿದೆ. ಈಗ ಚೀನಾಗಿಂತ ಇತರೆಡೆಗಳಲ್ಲೇ ಹೆಚ್ಚು ಕೊರೊನ ವೈರಸ್ ಪ್ರಕರಣಗಳು ವರದಿಯಾಗುತ್ತಿವೆ, ಜಗತ್ತಿನಾದ್ಯಂತ ಸೋಂಕಿನ ದರ ಏರುತ್ತಿದೆ.

ಸಮಗ್ರವಾದ ಸ್ಪಂದನೆ

ಭಾರತದಲ್ಲಿ ಕೊರೊನ ವೈರಸ್ ಮಹಾಮಾರಿ ನಮ್ಮ ಆರೋಗ್ಯ ವ್ಯವಸ್ಥೆಯ ಹಾಗೂ ನವ–ಉದಾರವಾದಿ ಆರ್ಥಿಕ ಚೌಕಟ್ಟಿನ ಸುತ್ತ ಬೆಳೆದ ವ್ಯವಸ್ಥೆಯ ಅಸಮರ್ಪಕತೆಯನ್ನು ಬಯಲಿಗೆ ತಂದಿದೆ. ಸರಕಾರ ಬೇರೆ ದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟಿನ ಪರಿಣಾಮಕಾರೀ ನಿರ್ವಹಣೆಯ (ಮತ್ತು ಸರಿಯಾದ ನಿರ್ವಹಣೆಯ ಕೊರತೆಯ) ಅನುಭವಗಳಿಂದ ಪಾಠ ಕಲಿಯಬೇಕು ಮತ್ತು ತನ್ನ ಯೋಜನೆಗಳನ್ನು ಮತ್ತು ಕ್ರಮಗಳನ್ನು ಪಾರದರ್ಶಕವಾಗಿ ತಿಳಿಯಪಡಿಸಿ ಸಾರ್ವಜನಿಕರ ನಡುವೆ ವಿಶ್ವಾಸವನ್ನು ಉತ್ತಮಪಡಿಸಬೇಕು. ಈ ಸವಾಲಿನ ಕ್ಲಿಷ್ಟ ಸ್ವರೂಪ ಮತ್ತು ಇದು ಸಮಾಜದ ವಿವಿಧ ವಿಭಾಗಗಳ ಮೇಲೆ ಬೀರಬಹುದಾದದ ವಿಭಿನ್ನ ರೀತಿಯ ದುಷ್ಪರಿಣಾಮಗಳನ್ನು ಗಮನಿಸುವಾಗ, ಈ ಸವಾಲಿಗೆ ಸರಕಾರದ ಸ್ಪಂದನೆ ಸಮರ್ಪಕವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಈ ಬಿಕ್ಕಟ್ಟಿಗೆ ತ್ವರಿತವಾದ ಮತ್ತು ಆರೋಗ್ಯ ಹಾಗೂ ಆರ್ಥಿಕ ರಂಗಗಳೆರಡನ್ನೂ ಗಮನಕ್ಕೆ ತಗೊಂಡ ಒಂದು ಸಮಗ್ರವಾದ ಸ್ಪಂದನೆಯ ಅಗತ್ಯ ಇದೆ.

ಈ ಮಹಾಮಾರಿ ಎರಗುವ ಮೊದಲೂ ಭಾರತದಂತಹ ಹಲವು ದೇಶಗಳು ಆರ್ಥಿಕ ಮಂದಗತಿಯನ್ನು, ಕೆಲವಂತೂ ಉತ್ಪಾದನೆಯ ಇಳಿಕೆಯನ್ನೂ ಎದುರಿಸುತ್ತಿದ್ದುವು. ಆದ್ದರಿಂದ ಈಗ ಭಾರತವನ್ನೂ ತಟ್ಟಿರುವ ಕೊರೊನ ವೈರಸ್ ಖಂಡಿತವಾಗಿಯೂ ಆರ್ಥಿಕ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ, ಇದರ ಫಲಿತಾಂಶವಾಗಿ ಹಿಂಜರಿತ ಉಂಟಾಗುತ್ತದೆ. ಭಾರತದಲ್ಲಿ ಪರೀಕ್ಷಣಾ ಸೌಲಭ್ಯ ಸಮರ್ಪಕವಾಗಿಲ್ಲ ಸೋಂಕಿನ ಹರಡಿಕೆ, ಅಧಿಕೃತವಾಗಿ ಹೇಳಿರುವ ಸಂಖ್ಯೆ(ಮಾರ್ಚ್ 18ರಂದು 151)ಗಿಂತ ಬಹುಪಾಲು ಹೆಚ್ಚಿರುತ್ತದೆ.

ಪ್ರಯಾಣದ ಮೇಲೆ ನಿರ್ಬಂಧಗಳು, ಪ್ರವಾಸಿಗಳು ಬರಲು ನಿಷೇಧ', ಮುಚ್ಚಿದ ಶಾಲೆಗಳು ಮತ್ತು ಸಾಮಾಜಿಕವಾಗಿ ದೂರವಿಡುವ ಕ್ರಮಗಳು ಹೆಚ್ಚುತ್ತಿರುವುದರಿಂದ ಅರ್ಥವ್ಯವಸ್ಥೆಯ ಮೇಲೆ ಅದರ ಪರಿಣಾಮಗಳು ಆಗಲೇ ಕಾಣಲಾರಂಭಿಸಿವೆ. ವಲಸೆ ಕಾರ್ಮಿಕರು ನಿರುದ್ಯೋಗವನ್ನು ಎದುರಿಸುತ್ತಿದ್ದಾರೆ, ಅನೌಪಚಾರಿಕ ವಲಯದ ಕಾರ್ಮಿಕರು ತಮ್ಮ ಜೀವನೋಪಾಯಗಳನ್ನು ಕಳಕೊಳ್ಳುತ್ತಿದ್ದಾರೆ, ಪ್ರಯಾಣ, ಪ್ರವಾಸೋದ್ಯಮ, ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳು, ಕಟ್ಟಡ ನಿರ್ಮಾಣ, ಮತ್ತಿತರ ವಲಯಗಳಲ್ಲಿ ಲೇ–ಆಫ್‌ಗಳು ನಡೆಯುತ್ತಿವೆ.

ಕೊವಿಡ್–19 ಹರಡುತ್ತ ಹೋದಂತೆ ಸಾಮಾನ್ಯ ಜೀವನ ಸ್ಥಗಿತಗೊಳ್ಳಲಾರಂಭಿಸು ವುದರೊಂದಿಗೆ ಹೆಚ್ಚೆಚ್ಚು ಉದ್ದಿಮೆಗಳು, ಕಾರ್ಖಾನೆಗಳು ಮುಚ್ಚಲಾರಂಭಿಸುತ್ತವೆ. ಕಾರ್ಮಿಕರ, ಅದರಲ್ಲೂ ಕಾಂಟ್ರಾಕ್ಟ್ ಕಾರ್ಮಿಕರ ಲೇ–ಆಫ್‌ಗಳು ಹೆಚ್ಚುತ್ತವೆ. ಗ್ರಾಮೀಣ ಅರ್ಥವ್ಯವಸ್ಥೆಯೂ ಅಸ್ತವ್ಯಸ್ತಗೊಳ್ಳುತ್ತದೆ, ಇದರಿಂದಾಗಿ ಗ್ರಾಮೀಣ ನಿರುದ್ಯೋಗವೂ ದೊಡ್ಡ ಪ್ರಮಾಣದಲ್ಲಿ ಏರಬಹುದು.


ಸಮಗ್ರ ಯೋಜನೆಯನ್ನು ರೂಪಿಸಿಲ್ಲ

ಕೇಂದ್ರ ಸರಕಾರ ಇಂತಹ ಒಂದು ಸನ್ನಿವೇಶವನ್ನು ಎದುರಿಸಲು ಯಾವುದೇ ಸಮಗ್ರ ಯೋಜನೆಯನ್ನು ರೂಪಿಸಿಲ್ಲ. ಇದುವರೆಗೆ ಕೇವಲ 'ರಾಜ್ಯ ಅನಾಹುತ ಪರಿಹಾರ ನಿಧಿ'ಯಿಂದ ವೆಚ್ಚ ಮಾಡಲು ಮಾತ್ರವೇ ಮಂಜೂರಾತಿ ನೀಡಿದೆ. ಅದು ಏನಿದ್ದರೂ ರಾಜ್ಯಗಳು ಉಪಯೋಗಿಸಲೇಂದೇ ಇರುವಂತದ್ದು. ರಿಝರ್ವ್ ಬ್ಯಾಂಕ್ ಮಾರುಕಟ್ಟೆ ವಿಶ್ವಾಸ ಮತ್ತು ಹಣಕಾಸು ಸ್ಥಿರತೆಯನ್ನು ಕಾಯ್ದುಕೊಳ್ಳಲೆಂದು ಎಪ್ರಿಲ್ ತಿಂಗಳಲ್ಲಿ 1 ಲಕ್ಷ ಕೋಟಿ ರೂ.ಗಳ ವರೆಗೆ ಸೇರಿಸುವ ಬಗ್ಗೆ ಯೋಚಿಸುತ್ತಿದೆ ಎಂಬ ವರದಿಗಳಿವೆ.

ಈ ನವ–ಉದಾರವಾದಿ ನಿಲುವು ಕೊರೊನ ವೈರಸ್ ಬಿಕ್ಕಟ್ಟನ್ನು ನಿಭಾಯಿಸಲು ಸಿದ್ಧವಾಗಿರದಿರುವುದಕ್ಕೆ ಮತ್ತು ಈಗಿನ ಪರಿಸ್ಥಿತಿಗೆ ಬಹಳಷ್ಟು ಕಾರಣವಾಗಿದೆ. ವಿತ್ತೀಯ ಸಂಪ್ರದಾಯಶರಣತೆ ಮತ್ತು ವಿತ್ತೀಯ ಕೊರತೆಯನ್ನು ಸೀಮಿತಗೊಳಿಸುವ ನವ–ಉದಾರವಾದಿ ಸರ್ವೌಷಧಿಯನ್ನು ತಿರಸ್ಕರಿಸಬೇಕಾಗುತ್ತದೆ.

ಈಗ ಮಾಡಬೇಕಾದ್ದೇನು?

ಮೊದಲಿಗೆ, ಸರಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಪರೀಕ್ಷಣಾ ವ್ಯವಸ್ಥೆಯನ್ನು ವಿಸ್ತರಿಸಲು ಹಾಗೂ ಸೋಂಕುಪೀಡಿತ ರೋಗಿಗಳಿಗೆ ಶುಶ್ರೂಷೆ ಒದಗಿಸಲು ಆಸ್ಪತ್ರೆ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ನಿಧಿಗಳನ್ನು ಒದಗಿಸಬೇಕಾಗಿದೆ. ಇದನ್ನನುಸರಿಸಿ ಉದ್ಯೋಗಗಳನ್ನು, ಜೀವನೋಪಾಯಗಳನ್ನು ರಕ್ಷಿಸಲು ಸರಕಾರದ ಸಾರ್ವಜನಿಕ ವೆಚ್ಚಗಳನ್ನು ತುರ್ತಾಗಿ ಹೆಚ್ಚಿಸಬೇಕು. ಅರ್ಥವ್ಯವಸ್ಥೆಯ ಹಲವು ವಲಯಗಳಿಗೆ ಪುನರ್ರಚನೆಯ ಪ್ಯಾಕೇಜುಗಳ ತುರ್ತು ಅಗತ್ಯವಿದೆ. ಸರಕಾರ ಅವರಿಗೆ ರಿಯಾಯ್ತಿಗಳನ್ನು ಮತ್ತು ಸಬ್ಸಿಡಿಗಳನ್ನು ಒದಗಿಸುವ ಬಗ್ಗೆ ಪರಿಶೀಲಿಸಬೇಕಾಗಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಸರಕಾರ ಹಣಕಾಸು ಸಂಸ್ಥೆಗಳು ಮತ್ತು ದೊಡ್ಡ ಕಾರ್ಪೊರೇಟ್‌ಗಳನ್ನು ಪಾರು ಮಾಡುವ ಬಗ್ಗೆಯಷ್ಟೇ ಯೋಚಿಸಬಾರದು. ರಿಝರ್ವ್ ಬ್ಯಾಂಕ್ ಮತ್ತು ಇತರ ಬ್ಯಾಂಕುಗಳು ಮುಂದೆ ಬರುವಂತೆ, ಆಮೂಲಕ ನೆರವಿನ ಅಗತ್ಯವಿರುವ ವಲಯಗಳನ್ನು ಗುರುತಿಸಿ ಸಾಲಗಳನ್ನು ಒದಗಿಸಲು, ಸಾಲ ಪರಿಹಾರ ನೀಡಲು ಸಾಧ್ಯವಾಗಬೇಕು. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಸುಲಭ ಸಾಲಗಳನ್ನು ಲಭ್ಯಗೊಳಿಸಬೇಕು. ಚಿಲ್ಲರೆ ವ್ಯಾಪಾರ ಮತ್ತು ರಸ್ತೆ ವ್ಯಾಪಾರಿಗಳ ಹಿತಗಳನ್ನು ಕಾಪಾಡಬೇಕು.

ಕೇಂದ್ರ ಸರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಜ್ಯಗಳ ಸಾಲ ಪಡೆಯುವ ಮಿತಿಯನ್ನು ಕನಿಷ್ಠ 0.5ಶೇ.ದಷ್ಟಾದರೂ ಹೆಚ್ಚಿಸಬೇಕು. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸದ ದಿನಗಳನ್ನು ಮತ್ತು ಕೂಲಿ ದರಗಳನ್ನು ಏರಿಸಬೇಕು.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಮತ್ತು ವಿಸ್ತರಿಸಬೇಕು. ವೈರಸ್ ಸಾಂಕ್ರಾಮಿಕದ ಅವಧಿ ಇರುವ ವರೆಗೆ ವಲಸೆ ಕಾರ್ಮಿಕರಿಗೆ, ಮತ್ತು ಗ್ರಾಮೀಣ ಬಡವರಿಗೆ ಮುಕ್ತ ರೇಶನ್‌ಗಳನ್ನು ಒದಗಿಸಲು ಕೇಂದ್ರಗಳನ್ನು ತೆರೆಯಬೇಕು. ತಮ್ಮ ಜೀವನಾಧಾರಗಳನ್ನು ಕಳಕೊಳ್ಳುವ ಅನೌಪಚಾರಿಕ ವಲಯದ ಕಾರ್ಮಿಕರಿಗೆ ನೆರವು ಒದಗಿಸಲು ಕೇಂದ್ರ ಸರಕಾರ, ರಾಜ್ಯಸರಕಾರಗಳೊಡಗೂಡಿ ಒಂದು ನಿಧಿಯನ್ನು ನಿರ್ಮಿಸಬೇಕು. ಸಂಘಟಿತ ವಲಯದಲ್ಲಿ ಕಾರ್ಪೊರೇಟ್‌ಗಳು ಸಾಂಕ್ರಾಮಿಕದಿಂದಾಗಿ ಮುಚ್ಚಿಕೆಯಾಗುವುದರಿಂದ ಲೇ–ಆಫ್ ಮಾಡುವ ಕಾರ್ಮಿಕರಿಗೆ ಪೂರ್ಣ ವೇತನವನ್ನು ತೆರುವಂತೆ ಮಾಡಬೇಕು.

ಕೊವಿಡ್–19ರ ಪ್ರಸರಣದ ಅಭೂತಪೂರ್ವ ದರದ ಹಿನ್ನೆಲೆಯಲ್ಲಿ ಜಗತ್ತಿನಾದ್ಯಂತ ಸರಕಾರಗಳು ಈ ಮಹಾಮಾರಿಯನ್ನು ತಡೆಗಟ್ಟಲು ಮತ್ತು ಎಲ್ಲ ಜನವಿಭಾಗಗಳಿಗೆ, ವಿಶೇಷವಾಗಿ ದುಡಿಯುವ ಜನಗಳು, ಬಡವರು ಮತ್ತು ಬಹಳ ಹೆಚ್ಚಾಗಿ ಹಾನಿಗೀಡಾಗುವವರಿಗೆ ನೆರವು ನೀಡಲು ವೇಗವಾಗಿ ಸ್ಪಂದಿಸಬೇಕಾಗಿದೆ.

ಕೊವಿಡ್–19 ಮಹಾಮಾರಿ ನವ–ಉದಾರವಾದಿ ವ್ಯವಸ್ಥೆಯ ವಿಚಾರಹೀನತೆ ಮತ್ತು ಭಂಗುರತೆಯನ್ನು ಬಯಲಿಗೆ ತಂದಿದೆ. ಈ ಬಿಕ್ಕಟ್ಟನ್ನು ನಿಭಾಯಿಸುವ ಪ್ರಯತ್ನಗಳ ಫಲಿತಾಂಶವಾಗಿ ಪರ್ಯಾಯ ಧೋರಣೆಗಳನ್ನು ಅನುಸರಿಸುವಂತಾಗಬೇಕು. ಎಲ್ಲಕ್ಕೂ ಮಿಗಿಲಾಗಿ ಕೇಂದ್ರ ಸರಕಾರ ತುರ್ತಾಗಿ ರಾಜ್ಯಗಳು ಜನಗಳ ಜೀವನಾಧಾರಗಳನ್ನು ಕಾಪಾಡಲು ಮತ್ತು ಅವರಿಗೆ ಆದಾಯ ಬೆಂಬಲವನ್ನು ಒದಗಿಸಲು ಸಾಧ್ಯವಾಗುವಂತೆ ಸಾಕಷ್ಟು ಹಣಕಾಸು ಬೆಂಬಲದೊಂದಿಗೆ ದೊಡ್ಡ ಪ್ರಮಾಣದಲ್ಲಿ ಮಧ್ಯಪ್ರವೇಶಿಸುವುದು ಅಗತ್ಯವಾಗಿದೆ. ■

AIPSN ALL INDIA PEOPLE'S SCIENCE NETWORK

Jan Swasthya Abhiyan

ಕೊವಿಡ್–19 ಜಾಗತಿಕ ಮಹಾಮಾರಿ ವಿರುದ್ಧ ಹೋರಾಡಲು ಜನ ವಿಜ್ಞಾನ ಮತ್ತು ಜನಾರೋಗ್ಯ ಚಳುವಳಿಯ 'ಜನತಾ ಸನ್ನದು'

ಜನಸ್ವಾಸ್ಥ್ಯ ಅಭಿಯಾನ (JSA) ಮತ್ತು ಅಖಿಲ ಭಾರತ ಜನ ವಿಜ್ಞಾನ ಜಾಲ (AIPSN) ಕೊವಿಡ್–19 ಜಾಗತಿಕ ಮಹಾಮಾರಿಯ ವಿರುದ್ಧ ಹೋರಾಡಲು ಒಂದು ಜನತಾ ಸನ್ನದನ್ನು (ಪೀಪಲ್ಸ್ ಚಾರ್ಟರ್) ಬಿಡುಗಡೆ ಮಾಡಿದೆ. ಚಾರ್ಟರ್ ಮೂರು ಪ್ರಮುಖ ಆಯಾಮಗಳ ಸುತ್ತ ಹಲವು ಕ್ರಮಗಳನ್ನು ಸೂಚಿಸಿದೆ. ಆರೋಗ್ಯ ಸೇವೆಗೆ ಸಂಬಂಧಿತ, ಸಾಮಾಜಿಕ ದೂರಗೊಳಿಸುವಿಕೆ ಮತ್ತು ಮಾನವ ಹಕ್ಕುಗಳು, ಕಾರಣವಾಗಿ ಮತ್ತು ಪರಿಣಾಮವಾಗಿ ಆರ್ಥಿಕ ಅಸಮಾನತೆಯ ಪರಿಹಾರ – ಇವೇ ಆ ಮೂರು ಪ್ರಮುಖ ಆಯಾಮಗಳು.

ವಸಂತರಾಜ ಎನ್.ಕೆ.

ಜನಸ್ವಾಸ್ಥ್ಯ ಅಭಿಯಾನ (JSA) ಮತ್ತು ಅಖಿಲ ಭಾರತ ಜನ ವಿಜ್ಞಾನ ಜಾಲ (AIPSN) ಕೊವಿಡ್–19 ಜಾಗತಿಕ ಮಹಾಮಾರಿಯ ವಿರುದ್ಧ ಹೋರಾಡಲು ಒಂದು ಜನತಾ ಸನ್ನದನ್ನು (ಪೀಪಲ್ಸ್ ಚಾರ್ಟರ್) ಬಿಡುಗಡೆ ಮಾಡಿದೆ. ಇದಕ್ಕಾಗಿ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಸಮರೋಪಾದಿಯಲ್ಲಿ ಬಲಪಡಿಸಬೇಕೆಂದು ಅದು ಸರಕಾರವನ್ನು ಒತ್ತಾಯಿಸಿದೆ. ಸೋಂಕು ತಗಲಿದವರನ್ನು ಪ್ರತ್ಯೇಕಿಸುವುದು ಮತ್ತು ಅವರ ಆರೈಕೆ, ಸೋಂಕು ತಗಲಿದವರ ಜತೆ ಒಡನಾಡಿದ್ದವರ ಬೇರ್ಪಡಿಕೆ (ಕ್ವಾರಂಟೈನ್), ಸಾಮಾಜಿಕ ದೂರ ಸಾಧಿಸಲು ಪ್ರಭಾವಶಾಲಿ ಪ್ರಚಾರ ಮತ್ತಿತರ ಕ್ರಮಗಳು – ಇತ್ಯಾದಿ ಈ ವರೆಗೆ ತೆಗೆದುಕೊಳ್ಳಲಾಗಿರುವ ಕ್ರಮಗಳು ಸ್ವಾಗತಾರ್ಹ. ಆದರೆ ಇಂದಿನ ಅಂಕೆಸಂಖ್ಯೆಗಳಿಂದ ಸಮಾಧಾನ ಪಡುವಂತಿಲ್ಲ. ಸೋಂಕು ಪರೀಕ್ಷೆ ಒಳಪಟ್ಟವರ ಪ್ರಮಾಣ ತೀರಾ ಕಡಿಮೆ ಇರುವುದರಿಂದ, ಇವು ಇಂದಿನ ವಾಸ್ತವವನ್ನು ಸರಿಯಾಗಿ ಬಿಂಬಿಸುತ್ತವೆಯೇ ಎಂದು ಹೇಳುವಂತಿಲ್ಲ. ಸಾಮಾಜಿಕ ದೂರ ಸಾಧಿಸುವ ಕ್ರಮಗಳನ್ನು ದೀರ್ಘ ಕಾಲ ಜಾರಿ ಮಾಡುವುದು ಕಷ್ಟ. ಜನರ ಜೀವನೋಪಾಯ ಮತ್ತು ಜೀವನಾವಶ್ಯಕತೆಗಳ ಪೂರೈಕೆಯ ಮೇಲೆ ಅದರ ಪರಿಣಾಮವೇ ತೀವ್ರವಾಗಬಹುದು. ಸಮುದಾಯ ಹರಡುವಿಕೆಯ ಮುಂದಿನ ಹಂತಕ್ಕೆ ಹೋದರೆ ಅಥವಾ ಇತರ ರೀತಿಗಳಲ್ಲಿ ಮಹಾಮಾರಿ ಉಲ್ಬಣಗೊಂಡರೆ ಈ ಕ್ರಮಗಳು ಏನೇನೂ ಸಾಲುವುದಿಲ್ಲ ಎಂದು ಅದು ಎಚ್ಚರಿಸಿದೆ.

ಮುಂದಿನ ಹಂತದಲ್ಲಿ ಜನಸಂಖ್ಯೆಯ ಶೇ.30–50 ಜನರನ್ನು ಕೊವಿಡ್–19 ತಟ್ಟಬಹುದು. ಸೋಂಕು ತಗಲಿದವರಲ್ಲಿ ತೀವ್ರ ರೋಗ ಲಕ್ಷಣಗಳನ್ನು ತೋರುವ ಶೇ. 15 ಜನರನ್ನು ಆಸ್ಪತ್ರೆಗೆ ದಾಖಲಿಸಬೇಕಾಗುತ್ತದೆ, ಶೇ. 4ರಷ್ಟು ಜನರಿಗೆ ಐಸಿಯು ಸೇರಿದಂತೆ ತೀವ್ರ ಆರೈಕೆ ಬೇಕಾಗುತ್ತದೆ. ಶೇ.1ರಷ್ಟು ಸಾವುಗಳು ಸಂಭವಿಸಬಹುದು. ಈ ಅಂಕೆಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಹಂತದ ಯೋಜನೆಗೆ ತಯಾರಾಗಬೇಕು. ಇಲ್ಲದಿದ್ದರೆ ವಿಪರೀತ ಸಾವು–ನೋವುಗಳಾಗಬಹುದು ಈ ಮುಂದಿನ ಹಂತ ಹಲವು ತಿಂಗಳುಗಳ ನಂತರ ಸಹ ಬರಬಹುದು. ಆದ್ದರಿಂದ ಈಗಲೇ ದೂರಗಾಮಿ ಕ್ರಮಗಳನ್ನು ಆರಂಭಿಸಬೇಕು ಎಂದು ಚಾರ್ಟರ್ ಕರೆ ನೀಡಿದೆ.

ಸಾರ್ವಜನಿಕ ಆರೋಗ್ಯ ಸೇವೆಗಳ ಸತತ ನಿರ್ಲಕ್ಷ, ಆರೋಗ್ಯ ಸೇವೆಗಳ ವ್ಯಾಪಕ ಖಾಸಗೀಕರಣದಿಂದಾಗಿ ದೇಶದ ಆರೋಗ್ಯ ವ್ಯವಸ್ಥೆ ಇಂತಹ ಪರಿಸ್ಥಿತಿಯನ್ನು ನಿಭಾಯಿಸುವ ಸ್ಥಿತಿಯಲ್ಲಿ ಇಲ್ಲ. ಇದಲ್ಲದೆ ದೇಶದ ಬಹುಸಂಖ್ಯಾತ ಜನತೆ ಕಳೆದ ದಶಕಗಳ ಆರ್ಥಿಕ–ಸಾಮಾಜಿಕ ನೀತಿಗಳಿಂದಾಗಿ ತಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಲು ಒದ್ದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೊವಿಡ್–19 ಮಹಾಮಾರಿ ಮುಂದಿನ ಹಂತಕ್ಕೆ ಹೋದರೆ ಅತಿ ದೊಡ್ಡ ದುರಂತವಾಗಬಹುದು.

ಚಾರ್ಟರ್ ಮೂರು ಪ್ರಮುಖ ಆಯಾಮಗಳ ಸುತ್ತ ಹಲವು ಕ್ರಮಗಳನ್ನು ಸೂಚಿಸಿದೆ. ಆರೋಗ್ಯ ಸೇವೆಗೆ ಸಂಬಂಧಿತ, ಸಾಮಾಜಿಕ ದೂರಗೊಳಿಸುವಿಕೆ ಮತ್ತು ಮಾನವ ಹಕ್ಕುಗಳು, ಕಾರಣವಾಗಿ ಮತ್ತು ಪರಿಣಾಮವಾಗಿ ಆರ್ಥಿಕ ಅಸಮಾನತೆಯ ಪರಿಹಾರ– ಇವೇ ಆ ಮೂರು ಪ್ರಮುಖ ಆಯಾಮಗಳು.

ಆರೋಗ್ಯ ಸೇವೆಗೆ ಸಂಬಂಧಿತ ಕ್ರಮಗಳು

ಚಾರ್ಟರ್ ಈ ಕೆಳಗಿನ ಆರೋಗ್ಯ ಸೇವೆಗೆ ಸಂಬಂಧಿತ ಕ್ರಮಗಳನ್ನು ಸೂಚಿಸಿದೆ:

* ಪ್ರತಿ 5–10 ಲಕ್ಷ ಜನಸಂಖ್ಯೆಗೆ ಕನಿಷ್ಠ ಒಂದು ಸಾರ್ವಜನಿಕ ಆಸ್ಪತ್ರೆ ಸ್ಥಾಪಿಸಿ ಸಜ್ಜುಗೊಳಿಸಬೇಕು. ಇದರಲ್ಲಿ ಪ್ರತ್ಯೇಕಿತ (ಐಸೋಲೇಶನ್) ವಾರ್ಡುಗಳು, ಐಸಿಯು, ಸಾಕಷ್ಟು ಆಕ್ಸಿಜನ್ ಮತ್ತಿತರ ವೈದ್ಯಕೀಯ ಪರಿಕರಗಳ ಪೂರೈಕೆ, ಅಗತ್ಯ ಸಿಬ್ಬಂದಿ ಇರಬೇಕು. ಇಂತಹ ಪ್ರಬಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಯಾವುದೇ ಪರಿಸ್ಥಿತಿ ಎದುರಿಸಲು ಯಾವಾಗಲೂ ಅಗತ್ಯವಾಗಿದ್ದು ಅದನ್ನು ಈಗ ಸಮರೋಪಾದಿಯಲ್ಲಿ ಮಾಡಬೇಕು.
* ಮಹಾಮಾರಿ ದೇಶದ ಯಾವುದೇ ಭಾಗದಲ್ಲಿ ತೀವ್ರಗೊಂಡರೆ ಅದನ್ನು ಎದುರಿಸಲು ಆ ಜಿಲ್ಲೆಯಲ್ಲಿರುವ ಎಲ್ಲ ವೈದ್ಯಕೀಯ ಸವಲತ್ತುಗಳನ್ನು (ಖಾಸಗಿ ಆಸ್ಪತ್ರೆಗಳು ಸೇರಿದಂತೆ) ಒಂದು ಕೇಂದ್ರೀಕೃತ ಜಿಲ್ಲಾ ಪ್ರಾಧಿಕಾರದಡಿಯಲ್ಲಿ ತರಬೇಕು. ಅಂತಹ ಪರಿಸ್ಥಿತಿ ಬಂದಾಗ ಯಾರು ಎಲ್ಲಿ ಚಿಕಿತ್ಸೆ ಪಡೆಯಬೇಕು ಎಂಬುದನ್ನು ಈ ಪ್ರಾಧಿಕಾರ ನಿರ್ಧರಿಸಬೇಕು. ರೋಗಿಯ ಆರ್ಥಿಕ ಸಾಮರ್ಥ್ಯ ಅಥವಾ ಆಸ್ಪತ್ರೆಯ ಆಡಳಿತ ಅಲ್ಲ. ಇದನ್ನು ಜಾರಿ ಮಾಡಲು ಬೇಕಾದ ಕಾನೂನಾತ್ಮಕ, ಆಡಳಿತಾತ್ಮಕ, ಹಣಕಾಸು ಕ್ರಮಗಳನ್ನು ಈಗಿನಿಂದಲೇ ಕೈಗೊಳ್ಳಬೇಕು
* ಸೋಂಕು ತಗಲಿದವರನ್ನು ಮತ್ತು ಅವರ ಜೊತೆ ಒಡನಾಡಿದವರನ್ನು ಬೇರ್ಪಡಿಸುವುದು ದೀರ್ಘ ಕಾಲ ಮುಂದುವರೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸಮುದಾಯ ಹರಡುವಿಕೆಯ ಹಂತದಲ್ಲಿ ರೋಗ ಲಕ್ಷಣಗಳನ್ನು ತೋರ್ಪಡಿಸುವ ಮತ್ತು ಅದು ಅಗತ್ಯ ಎಂದು ಭಾವಿಸಲಾಗುವ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಲು ಪರೀಕ್ಷಾ ವ್ಯವಸ್ಥೆಯನ್ನು ವಿಸ್ತರಿಸಬೇಕು.
* ಸಮಗ್ರ ರೋಗ ಕಣ್ಗಾವಲು ವ್ಯವಸ್ಥೆಯನ್ನು ಬಲಪಡಿಸಿ, ಎಲ್ಲ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಆಗಿರುವ ಎಲ್ಲ ಫ್ಲೂ ಮತ್ತು ಜ್ವರ ಸಂಬಂಧಿ ಸಾವುಗಳ ವರದಿ ತಯಾರಿಸಿ ಅದನ್ನು ವಿಶ್ಲೇಷಿಸಬೇಕು. ಇಲ್ಲದಿದ್ದರೆ ಕೋವಿಡ್–19 ಪ್ರಕರಣಗಳು ಇತರ ರೋಗಗಳ ಜತೆ ಸೇರಿಕೊಂಡು ಅದು ಸಾಂಕ್ರಾಮಿಕವಾದರೂ ಸಹ ಗಮನಕ್ಕೆ ಬಾರದೆ ಹೋಗಬಹುದು.
* ಪ್ರತಿ ಜಿಲ್ಲೆಯಲ್ಲಿ ರೋಗ ನಿಯಂತ್ರಣ ಕೇಂದ್ರಗಳನ್ನು ದೂರಗಾಮಿ ಕ್ರಮವಾಗಿ ತೆರೆಯಬೇಕು. ಈ ಕೇಂದ್ರ ಪರೀಕ್ಷೆಗಳನ್ನು ನಡೆಸಿ, ರೋಗಗಳನ್ನು ಗುರುತಿಸಿ ಎಚ್ಚರಿಕೆ ನೀಡಿ ಮುಂಜಾಗ್ರತಾ ಕ್ರಮಗಳನ್ನು ಸೂಚಿಸಲು ಅಗತ್ಯ ಸಿಬ್ಬಂದಿ ಮತ್ತು ಸವಲತ್ತುಗಳಿಂದ ಸಜ್ಜಾಗಿರಬೇಕು.
* ಆರೋಗ್ಯ ಸೇವೆ ಮತ್ತು ಸಹಾಯಕ ಸಿಬ್ಬಂದಿಗೆ ಸುರಕ್ಷಿತ ಕೆಲಸದ ಪರಿಸ್ಥಿತಿ ಮತ್ತು ಸುರಕ್ಷತಾ ಉಪಕರಣಗಳನ್ನು ಒದಗಿಸಬೇಕು. ಇದನ್ನು ಆಸ್ಪತ್ರೆಯಲ್ಲಿ ಮಾತ್ರವಲ್ಲ, ಬೇರ್ಪಡಿಸಿದ ಮನೆ ಮತ್ತು ಪ್ರತ್ಯೇಕಿತ ಸ್ಥಾವರಗಳಲ್ಲೂ ಒದಗಿಸಬೇಕು. ಮುಖಗವುಸು ಮತ್ತು ವೈರಾಣುನಾಶಕಗಳನ್ನು ಕ್ಷೇತ್ರ ಸಿಬ್ಬಂದಿ ಮತ್ತು ರೋಗಿಗಳಿಗೆ ಆದ್ಯತೆಯಲ್ಲಿ ದೊರೆಯುವಂತೆ ಮಾಡಬೇಕು.
* ವ್ಯಾಪಕ ಸಾಂಕ್ರಾಮಿಕದ ಪರಿಸ್ಥಿತಿಯಲ್ಲಿ ಆರೋಗ್ಯ ವ್ಯವಸ್ಥೆಯ ಸೀಮಿತ ಸಂಪನ್ಮೂಲಗಳನ್ನು ಸಾರ್ವಜನಿಕ ಆರೋಗ್ಯದ ಅಗತ್ಯಗಳ ಆಧಾರದ ಮೇಲೆ ಹಂಚಬೇಕು. ಅತಿ ಹೆಚ್ಚು ಹರಾಜು ಬೆಲೆ ಕಟ್ಟುವವರಿಗೆ ಅಲ್ಲ. (2009ರ ಎಚ್1–ಎನ್1 ಸಾಂಕ್ರಾಮಿಕದ ಸಂದರ್ಭದಲ್ಲಿ ತಮಿಫ್ಲೂ ಮಾತ್ರೆಯ ಸಂದರ್ಭದಲ್ಲಿ ಹೀಗೆ ಆಗಿತ್ತು. ಅದು ಮರುಕಳಿಸದಂತೆ ಎಚ್ಚರವಹಿಸಬೇಕು.)
* ಕೊವಿಡ್–19 ರೋಗ ನಿವಾರಕ ಔಷಧಿ ಮತ್ತು ಲಸಿಕೆಯ ಅಭಿವೃದ್ಧಿಗೆ ಅಂತರ್ರಾಷ್ಟ್ರೀಯ ಸಹಕಾರ ಅಗತ್ಯ. ಆದರೆ ಇಂತಹ ಔಷಧಿ ಮತ್ತು ಲಸಿಕೆಯ ಮೇಲೆ ಪೇಟೆಂಟಿನಿಂದಾಗಿ ಅವುಗಳ ಉತ್ಪಾದನೆ ಮತ್ತು ವಿತರಣೆಯನ್ನು ಮಿತಗೊಳಿಸುವುದರ ವಿರುದ್ಧ ಎಚ್ಚರಿಕೆ ವಹಿಸಬೇಕು.



ಸಾಮಾಜಿಕ ದೂರ ಸಾಧಿಸುವುದು ಮತ್ತು ಮಾನವ ಹಕ್ಕುಗಳು

ಚಾರ್ಟರ್ ಈ ಕೆಳಗಿನ "ಸಾಮಾಜಿಕ ದೂರ ಸಾಧಿಸುವುದು ಮತ್ತು ಮಾನವ ಹಕ್ಕುಗಳು"ಗೆ ಸಂಬಂಧಿತ ಕ್ರಮಗಳನ್ನು ಸೂಚಿಸಿದೆ:

* ಸಾಮಾಜಿಕ ದೂರವನ್ನು ಸಾರ್ವಜನಿಕ ಶಿಕ್ಷಣ ಮತ್ತು ಮನವೊಲಿಕೆಯಿಂದಲೇ ಸಾಧಿಸಬೇಕು. ಇದಕ್ಕಾಗಿ ದಮನ ಕ್ರಮಗಳು ನಿಷ್ಪ್ರಯೋಜಕ ಮತ್ತು ಅನುಚಿತ. ಧಾರ್ಮಿಕ, ಸಾಮಾಜಿಕ, ಕ್ರೀಡೆ, ಸಾಂಸ್ಕೃತಿಕ, ರಾಜಕೀಯ ಸಂಬಂಧಿತ ದೊಡ್ಡ ಸಾರ್ವಜನಿಕ ಸಭೆಗಳು, ಸಮಾರಂಭಗಳನ್ನು ಹಮ್ಮಿಕೊಳ್ಳದಂತೆ ಮನವೊಲಿಸಬೇಕು, ಆದರೆ ನಿಷೇಧಿಸಬಾರದು
* ಮನೆಯಲ್ಲೇ ಬೇರ್ಪಡಿಸುವಿಕೆಗೆ (ಕ್ವಾರಂಟೈನ್) ಒಳಗಾದವರಿಗೆ, ಅದರಲ್ಲೂ ವಿಶೇಷವಾಗಿ ಅಗತ್ಯ ಸೇವೆಗಳು ಮತ್ತು ಸಾಮಾಜಿಕ ಭದ್ರತಾ ಕ್ರಮಗಳು ಯಾವುದೇ ಕಾರಣಕ್ಕಾಗಿ ಲಭ್ಯವಿಲ್ಲದಿರುವವರಿಗೆ, ಸಾಮುದಾಯಿಕ ಸೇವೆಗಳನ್ನು ಅವರಿದ್ದಲ್ಲೇ ಒದಗಿಸಲು ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಶಾಲೆಗಳು ಮುಚ್ಚಿದ್ದರಿಂದ, ಬಿಸಿಯೂಟ ಸೇವೆ ಬಂದಾಗಿದ್ದರಿಂದ, ಪಾಲಕರು ಜೀವನೋಪಾಯ ಕಳೆದುಕೊಂಡಿದ್ದರಿಂದ ಅಥವಾ ಓಡಾಟದ ನಿರ್ಬಂಧಗಳಿಂದಾಗಿ ಹಲವು ಮಕ್ಕಳಿಗೆ ಆಹಾರದ, ಪೋಷಕಾಂಶಗಳ ಕೊರತೆ ಉಂಟಾಗಬಹುದು.
* ದೊಡ್ಡ ಪ್ರಮಾಣದಲ್ಲಿ ಬೇರ್ಪಡಿಸುವಿಕೆ ಅಥವಾ ಸಂಚಾರ ನಿರ್ಬಂಧದಂತಹ ವಿಶೇಷ ಕ್ರಮಗಳಿಗೆ ತುತ್ತಾದ ಜನ ಅದರಲ್ಲೂ ದಮನಿತ ಕೆಳವರ್ಗದ ಜನತೆಯ ಪ್ರಾಥಮಿಕ ಮಾನವ ಹಕ್ಕುಗಳ ಹರಣವಾಗದಂತೆ ಎಚ್ಚರವಹಿಸಬೇಕು. ಇದಕ್ಕಾಗಿ ಜನ ಸಂಘಟನೆಗಳು, ಮಾನವ ಹಕ್ಕು ಸಂಘಟನೆಗಳು, ರೈತ–ಕಾರ್ಮಿಕ–ಕೂಲಿಕಾರ ಸಂಘಟನೆಗಳು ಅಗತ್ಯ ಸೇವೆಗಳ ಪೂರೈಕೆ ಮತ್ತಿತರ ಆರೈಕೆಗಳಲ್ಲಿ ನ್ಯೂನತೆ ಇಲ್ಲದಂತೆ ನಿಗಾ ಇಡಬೇಕು. ಅವರ ವರದಿ ಆಧಾರದ ಮೇಲೆ ಅಗತ್ಯ ಬಿದ್ದಲ್ಲಿ ನ್ಯೂನತೆಗಳನ್ನು ಸರಿಪಡಿಸುವಂತೆ ಸರಕಾರ ಎಚ್ಚರವಹಿಸಬೇಕು.
* ಸಾಂಕ್ರಾಮಿಕ ಹರಡುವಿಕೆ ಮತ್ತು ಅದರ ಪರಿಣಾಮಗಳನ್ನು ವರದಿ ಮಾಡುವುದಕ್ಕೆ ಮಾಧ್ಯಮಗಳ ಸ್ವಾತಂತ್ರ್ಯವನ್ನು ಕಾಪಾಡಬೇಕು. ಆದರೆ ಸೋಂಕಿನ ಮೂಲ, ಅದಕ್ಕೆ ಆರೈಕೆ, ಹರಡುವ ರೀತಿ ಮುಂತಾದವುಗಳ ಮಾಹಿತಿಯನ್ನು ಆದಷ್ಟು ಸರಕಾರ ನಿಯೋಜಿಸಿದ ಅಧಿಕೃತ ಆರೋಗ್ಯ ಪರಿಣತರು, ಅಂತರ್ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮುಂತಾದ ನಂಬಲರ್ಹ ಮೂಲಗಳಿಂದ ಪಡೆಯಲು ಉತ್ತೇಜಿಸಬೇಕು. ಇತರ ಯಾವುದೇ ಮೂಲಗಳ ಮಾಹಿತಿ ಉಲ್ಲೇಖಿಸುವುದಾದರೆ ಅದು ಅಧಿಕೃತ ಮಾಹಿತಿಯಲ್ಲ, ಅದು ತಪ್ಪಿರಬಹುದು ಎಂಬುದನ್ನು ಸೂಚಿಸಲು ನಿರ್ದೇಶಿಸಬೇಕು. ಆದರೆ ಮಾಧ್ಯಮಗಳ ಸ್ವಾತಂತ್ರ್ಯದ ಮೇಲೆ ಸಾರಾಸಗಟು ನಿಷೇಧ ಹೇರಬಾರದು.

ಕಾರಣವಾಗಿ ಮತ್ತು ಪರಿಣಾಮವಾಗಿ ಆರ್ಥಿಕ ಅಸಮಾನತೆಯ ಪರಿಹಾರ

ಚಾರ್ಟರ್ ಈ ಕೆಳಗಿನ "ಕಾರಣವಾಗಿ ಮತ್ತು ಪರಿಣಾಮವಾಗಿ ಆರ್ಥಿಕ ಅಸಮಾನತೆಯ ಪರಿಹಾರ" ಕ್ರಮಗಳನ್ನು ಸೂಚಿಸಿದೆ :

* ಬಹುಸಂಖ್ಯಾತ ಜನತೆಯ ಜೀವನೋಪಾಯವನ್ನು ರಕ್ಷಿಸುವುದು ಸಾರ್ವಜನಿಕ ಆರೋಗ್ಯ ಸಂರಕ್ಷಣೆಯ ಆದ್ಯ ಕರ್ತವ್ಯ ಎಂದು ಪರಿಗಣಿಸಬೇಕು. ಈ ವಿಶೇಷ ಪರಿಸ್ಥಿತಿ ಎದುರಿಸಲು ಸೌಹಾರ್ದ ಬೆಂಬಲ ಅಣಿನೆರೆಸಲು ಸಾರ್ವಜನಿಕ ಶಿಕ್ಷಣ ಕೈಗೊಳ್ಳಬೇಕು. ನಿಯಮಿತ ವೇತನ ಪಡೆಯುವರು ಮತ್ತು ಶ್ರೀಮಂತರಿಗಿಂತ, ದುಡಿಯುವ ಜನರೂ ಬಡವರೂ ಜೀವನೋಪಾಯಗಳು ಅಸ್ತವ್ಯಸ್ತವಾಗುವುದರಿಂದ ಹೆಚ್ಚಿನ ದುಷ್ಪರಿಣಾಮಗಳನ್ನು ಎದುರಿಸುತ್ತಾರೆ. ಇಂತಹ ದುಷ್ಪರಿಣಾಮಗಳನ್ನು ಎದುರಿಸುವ ದುರ್ಬಲರಿಗೆ ಸಾಮುದಾಯಿಕ ಮತ್ತು ಮಾಲಕರ ಬೆಂಬಲ ಬೇಕಾಗುತ್ತದೆ.
* ಸಾರ್ವಜನಿಕ ಉದ್ಯೋಗಗಳು, ಸಾಮಾಜಿಕ ಭದ್ರತೆ, ಸಾರ್ವತ್ರಿಕ ಪ್ರಾಥಮಿಕ ಆದಾಯ ಖಚಿತಪಡಿಸುವಂತಹ ವ್ಯಾಪಕ ಬೇಡಿಕೆ ಹೆಚ್ಚಿಸುವ ಕ್ರಮಗಳನ್ನು ಜಾರಿಗೊಳಿಸಲು ಸಾರ್ವಜನಿಕ ವೆಚ್ಚವನ್ನು ಸರಕಾರ ತಕ್ಷಣವೇ ಹೆಚ್ಚಿಸಬೇಕು. ಇದು ಬಹುಸಂಖ್ಯಾತ ಜನತೆಯ ಜೀವನೋಪಾಯಗಳ ಮೇಲೆ ದಾಳಿಯಿಂದಾಗಿ ಅಗತ್ಯವಾಗಿದೆ. ಕಾರ್ಪೊರೇಟುಗಳಿಗೆ ಇನ್ನಷ್ಟು ಸವಲತ್ತುಗಳು ಅನುದಾನಗಳು ಮತ್ತು ದುಡಿಯುವ ಜನತೆಯ ಮೇಲೆ ಮಿತವ್ಯಯದ ಹೇರಿಕೆ ಇದಕ್ಕೆ ಮಾರಕವಾಗಿರುತ್ತದೆ.

ಕೊವಿಡ್-19ರ ಬೃಹತ್ ಸವಾಲನ್ನು ಎದುರಿಸಲು ರಾಷ್ಟ್ರೀಯ ನಿಧಿ ಸ್ಥಾಪಿಸಿ-ಸೀತಾರಾಂ ಯೆಚುರಿ



ಜನಗಳ ಜ್ವಲಂತ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನಗಳು –ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧಾರ

ಕೋವಿಡ್ 19ರ ಭಾರೀ ಸವಾಲನ್ನು ಎದುರಿಸಲು ಒಂದು 'ರಾಷ್ಟ್ರೀಯ ಆನುಷಂಗಿಕ ನಿಧಿ'(ನ್ಯಾಶನಲ್ ಕಂಟಿನ್ಜೆನ್ಸಿ ಫಂಡ್)ಯನ್ನು ನಿರ್ಮಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಸೂಚಿಸಿದ್ದಾರೆ. ಈ ಕೋವಿಡ್–19ರಿಂದಾಗಿ ಒಂದು ಜಾಗತಿಕ ಆರ್ಥಿಕ ವಿರೂಪತೆ ಅನಿವಾರ್ಯ ಎಂಬಂತೆ ಕಾಣುತ್ತಿದೆ. ಇದು ಜಗತ್ತಿನಾದ್ಯಂತ ದುಡಿಯುವ ಜನಗಳ ಜೀವನಾಧಾರಗಳ ಮೇಲೆ ಒಂದು ಭಾರೀ ಹೊಡೆತ ನೀಡಲಿದೆ. ನಗರಗಳಲ್ಲಿನ 93ಶೇ. ದುಡಿಮೆಗಾರರು ಅನೌಪಚಾರಿಕ ವಲಯದಲ್ಲಿರುವ ಭಾರತದಲ್ಲಂತೂ ಈ ಹೊಡೆತ ಬೃಹತ್ ಸ್ವರೂಪ ಪಡೆಯುತ್ತದೆ ಎಂದು ಅವರು ಎಚ್ಚರಿಸಿದರು.

ಯೆಚುರಿಯವರು ಮಾರ್ಚ್ 14–15ರಂದು ನಡೆದ ಪೊಲಿಟ್‌ಬ್ಯುರೊ ಸಭೆಯ ನಂತರ ಕರೆದ ಪತ್ರಿಕಾಗೋಷ್ಠಿಯಲ್ಲಿ ಅದರ ನಿರ್ಧಾರಗಳನ್ನು ತಿಳಿಸುತ್ತ ಈ ಮಾತುಗಳನ್ನಾಡಿದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊದ ಈ ಸಭೆ ಕಳೆದ ಸಭೆಯ ನಂತರದ ಬೆಳವಣಿಗೆಗಳನ್ನು, ಮುಖ್ಯವಾಗಿ, ಕೊರೊನ ವೈರಸ್ ಉಂಟು ಮಾಡಿರುವ ಪರಿಸ್ಥಿತಿ, ಸಿಎಎ ಇತ್ಯಾದಿಗಳ ವಿರುದ್ಧ ಸತತವಾಗಿ ನಡೆಯುತ್ತಿರುವ ಪ್ರತಿಭಟನೆಗಳು, ದಿಲ್ಲಿಯ ಕೋಮುವಾದಿ ಹಿಂಸಾಚಾರ, ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿ, ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಪಾತ್ರದ ಬಗ್ಗೆ ಟೀಕೆಗಳು, ರಾಜ್ಯ ಸರಕಾರಗಳನ್ನು ಉರುಳಿಸುವ ಭಂಡ ಪ್ರಜಾಪ್ರಭುತ್ವ–ವಿರೋಧಿ ನಡೆಗಳು ಹಾಗೂ ಆರ್ಥಿಕ ಹಿಂಜರಿತದ ದಿನಗಳಲ್ಲಿ ಏರುತ್ತಿರುವ ಜನಗಳ ಮೇಲಿನ ಹೊರೆಗಳ ಬಗ್ಗೆ ಚರ್ಚಿಸಿತು.

ಜನಗಳ ಮೇಲೆ ಮೋದಿ ಸರಕಾರ ಹೇರುತ್ತಿರುವ ಎಲ್ಲ ಸಮಸ್ಯೆಗಳ ಮೇಲೆ ಸಾರ್ವಜನಿಕ ಪ್ರಚಾರಾಂದೋಲನಗಳನ್ನು ನಡೆಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧರಿಸಿದೆ. ಹೀಗೆ ಮಾಡುವಾಗ ಸರ್ವವ್ಯಾಪಿಯಾಗಿರುವ ಕೊರೊನ ವೈರಸ್ ರೋಗ ಉಂಟು ಮಾಡಿರುವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಎಂದು ಅದು ಹೇಳಿದೆ. ನಮ್ಮ ಜನತೆಯ ಎಲ್ಲ ವಿಭಾಗಗಳೊಂದಿಗೆ ಸಂಯೋಜಿಸಿ ಈ ಪ್ರತಿಭಟನೆಗಳನ್ನು ನಡೆಸಲಾಗುವದು– ನಿರುದ್ಯೋಗದ ವಿರುದ್ಧ ಯುವಜನರೊಂದಿಗೆ, ಕಾರ್ಮಿಕರೊಂದಿಗೆ ಕ್ಲೋಶರ್‌ಗಳು, ರಾಷ್ಟ್ರೀಯ ಆಸ್ತಿಗಳ ಲೂಟಿಗಳು, ಸಾರ್ವಜನಿಕ ವಲಯದ ಖಾಸಗೀಕರಣ, ರಿಟ್ರೆಂಚ್‌ಮೆಂಟ್ ವಿರುದ್ಧ ಮತ್ತು ಕನಿಷ್ಟ ಕೂಲಿಗಾಗಿ, ಮಹಿಳೆಯರೊಂದಿಗೆ, ಅವರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು, ಅತ್ಯಾಚಾರ'ಗಳ ವಿರುದ್ಧ, ಆರ್ಥಿಕ ಹಿಂಜರಿತ ಉಂಟು ಮಾಡಿರುವ ಹೊರೆಗಳ ವಿರುದ್ಧ, ರೈತರು ಮತ್ತು ಕೃಷಿಕೂಲಿಕಾರರೊಂದಿಗೆ ತೀಕ್ಷ್ಣಗೊಳ್ಳುತ್ತಿರುವ ಕೃಷಿ ಸಂಕಟದ ವಿರುದ್ಧ, ವಿದ್ಯಾರ್ಥಿಗಳು, ದಲಿತರು, ಬುಡಕಟ್ಟು ಜನಗಳು ಮುಂತಾದ ಜನವಿಭಾಗಗಳೊಂದಿಗೆ ಈ ಪ್ರತಿಭಟನೆಗಳನ್ನು ನಡೆಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕೊವಿಡ್–19 ದೇಶದಲ್ಲಿ ಮೂರನೇ ಹಂತ ತಲುಪದಂತೆ ಕ್ರಮಗಳನ್ನು ಕೈಗೊಳ್ಳಬೇಕು

ಕೊರೊನ ವೈರಸ್ ಸರ್ವವ್ಯಾಪಿ ಕಾಯಿಲೆ ಈಗ ಭಾರತದಲ್ಲಿ ಎರಡನೇ ಹಂತದಲ್ಲಿದೆ. ಆರೋಗ್ಯ ಮಂತ್ರಾಲಯ ಈ ವೈರಸ್ 13 ರಾಜ್ಯಗಳಲ್ಲಿ ಕಂಡು ಬಂದಿದೆ ಎಂದು ಅಧಿಕೃತವಾಗಿ ಹೇಳಿದೆ; ದೇಶದಲ್ಲಿ ಒಟ್ಟು ಅಧಿಕೃತವಾಗಿ ದೃಢಪಡಿಸಿರುವ ಸಂಖ್ಯೆ 110 ಆಗಿದ್ದು, ಅದು ಹೆಚ್ಚುತ್ತಿದೆ. ಇವರಲ್ಲಿ ಇಬ್ಬರು ರೋಗಿಗಳು ಮೃತಪಟ್ಟಿದ್ದಾರೆ, ಹತ್ತು ಮಂದಿ ಮಾತ್ರ ಗುಣಮುಖರಾಗಿದ್ದಾರೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ(ಐಸಿಎಂಆರ್) ಈ ಸರ್ವವ್ಯಾಪೀ ರೋಗ ಭಾರತದಲ್ಲಿ ಮೂರನೇ ಹಂತ ತಲುಪದಂತೆ ತಡೆಯಲು 30ದಿನಗಳ ಕಾಲಾವಕಾಶ ಇದೆ ಎಂದು ಎಚ್ಚರಿಸಿದೆ. ಮೂರನೇ ಹಂತ ಭೀಕರ ಪರಿಣಾಮಗಳನ್ನು ಹೊಂದಿದೆ.

ಈ ಸರ್ವವ್ಯಾಪೀ ರೋಗವನ್ನು ತಡೆದು ನಿಲ್ಲಿಸಲು ಅಗತ್ಯವಾದ ಮುನ್ನೆಚ್ಚರಿಕೆಗಳನ್ನು ಪಾಲಿಸುವಂತೆ ಜನಗಳ ನಡುವೆ ಜಾಗೃತಿಯನ್ನು ಮತ್ತು ವೈಜ್ಞಾನಿಕ ಮನೋಭಾವವನ್ನು ನಿರ್ಮಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪಕ್ಷದ ಎಲ್ಲ ಘಟಕಗಳಿಗೆ ಮತ್ತು ಕಾರ್ಯಕರ್ತರಿಗೆ ಕರೆ ನೀಡಿದೆ. ಹಲವರು ಅವೈಜ್ಞಾನಿಕ, ಮೂಢ ನಂಬಿಕೆಯ ತಡೆ ವಿಧಾನಗಳನ್ನು ಹರಡುತ್ತಿರುವುದನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಎದುರಿಸಿ ನಿಲ್ಲಬೇಕು ಎಂದೂ ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕೇರಳದ ಎಲ್‌ಡಿಎಫ್ ಸರಕಾರ ಮತ್ತೊಮ್ಮೆ, ತನ್ನ ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯ ಮೂಲಕ ಈ ಸರ್ವವ್ಯಾಪೀ ರೋಗವನ್ನು ತಡೆಗಟ್ಟುವಲ್ಲಿ ಮತ್ತು ಹಾನಿಗಳನ್ನು ಸೀಮಿತಗೊಳಿಸುವಲ್ಲಿ ತೋರಿರುವ ದಕ್ಷತೆಯನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ.

ಸೋಂಕು ಶಂಕಿತರನ್ನು ಪತ್ತೆ ಹಚ್ಚುವಲ್ಲಿ ಭಾರತ ಈಗಲೂ ಬಾಧಿತ ದೇಶಗಳ ಪೈಕಿ ತಳಮಟ್ಟದಲ್ಲೇ ಉಳಿದಿದೆ. ಹೆಚ್ಚೆಚ್ಚು ಪರೀಕ್ಷಣಾ ಕೇಂದ್ರಗಳನ್ನು ಯುದ್ಧೋಪಾದಿಯಲ್ಲಿ ಲಭ್ಯಗೊಳಿಸಬೇಕು, ಇಲ್ಲಿ ಎಲ್ಲ ಸೋಂಕು ಶಂಕಿತ ವ್ಯಕ್ತಿಗಳನ್ನು ತಕ್ಷಣವೇ ಪರೀಕ್ಷಿಸಲು ಮತ್ತು ಅದಕ್ಕನುಗುಣವಾದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಮಾಡಬೇಕಾಗಿದೆ. ಇಂದೂ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಬಹಳ ಅಸಮರ್ಪಕವಾಗಿರುವ ನಮ್ಮ ಗ್ರಾಮೀಣ ಪ್ರದೇಶಗಳನ್ನು ಈ ಸೌಕರ್ಯಗಳಿಂದ ಸಜ್ಜುಗೊಳಿಸಬೇಕಾಗಿದೆ.

ಭಾರತ ಸರಕಾರ ಈ ಸರ್ವವ್ಯಾಪೀ ರೋಗವನ್ನು ತಡೆಗಟ್ಟಲು ಇಂತಹ ಒಂದು ಮೂಲರಚನೆಯನ್ನು ತಕ್ಷಣವೇ ಒದಗಿಸುವಂತೆ ಮಾಡಲು ಎಲ್ಲ ರಾಜ್ಯಗಳಿಗೆ ನೆರವು ನೀಡಬೇಕಾಗಿದೆ. ಆರೋಗ್ಯಕ್ಕೆ ಹಣನೀಡಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸುವ ಮೂಲಕ ದೇಶದಲ್ಲಿ ಒಂದು ಸರಿಯಾದ ಆರೋಗ್ಯಪಾಲನೆ ವ್ಯವಸ್ಥೆ ಏರ್ಪಡುವಂತೆ ಖಾತ್ರಿಪಡಿಸಬೇಕು. ಈ ಸಂದರ್ಭದಲ್ಲಿ, ಕೇಂದ್ರ ಸರಕಾರ ಈ ಸರ್ವವ್ಯಾಪೀ ರೋಗವನ್ನು ನಿಭಾಯಿಸುವಲ್ಲಿ 'ರಾಜ್ಯ ಅನಾಹುತ ಸ್ಪಂದನೆ ನಿಧಿ'(ಎಸ್‌ಡಿಆರ್‌ಎಫ್) ಯನ್ನು ಬಳಸಿಕೊಳ್ಳಲು ರಾಜ್ಯಗಳಿಗೆ ಅನುಮತಿ ನೀಡಿದ ಆದೇಶವನ್ನು, ಅದನ್ನು ನೀಡಿದ ಕೆಲವೇ ಗಂಟೆಗಳಲ್ಲಿ, 'ಭಾಗಶಃ ಮಾರ್ಪಾಡು' ಮಾಡಿರುವುದನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಈ ಮಾರ್ಪಾಡಿನ ಮೂಲಕ ಈ ವೈರಸ್‌ನಿಂದ ತಮ್ಮ ಸದಸ್ಯನೊಬ್ಬನನ್ನು ಕಳಕೊಂಡ ಕುಟುಂಬಗಳಿಗೆ ಮತ್ತು ಸೋಂಕು ತಟ್ಟಿದವರ ಶುಶ್ರೂಷೆಗೆ ಪರಿಹಾರವನ್ನು ಹಿಂತೆಗೆದುಕೊಳ್ಳಲಾಗಿದೆ. ಇದನ್ನು ತಕ್ಷಣವೇ ಬದಲಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕೇಂದ್ರ ಸರಕಾರ ಈ ಸರ್ವವ್ಯಾಪೀ ರೋಗ ಹರಡಿರುವುದರಿಂದಾಗಿ ಆಗಿರುವ ಮುಚ್ಚಿಕೆಗಳಿಂದಾಗಿ ಕೆಲಸ ಕಳಕೊಳ್ಳಬಹುದಾದ ಅಥವ ಲೆ–ಆಫ್ ಆಗಬಹುದಾದ ಅನೌಪಚಾರಿಕ ವಲಯದ ಮತ್ತು ಸಂಘಟಿತ ವಲಯದ ಕಾರ್ಮಿಕರಿಗೆ ನೆರವು ಒದಗಿಸಲು ಅನುವಾಗುವಂತೆ ಒಂದು ನಿಧಿಯನ್ನು ನಿರ್ಮಿಸಲು ಆನುಷಂಗಿಕ ಯೋಜನೆಗಳನ್ನು ರೂಪಿಸಬೇಕು ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಿಎಎ/ಎನ್‌ಪಿಆರ್/ಎನ್‌ಆರ್‌ಸಿ ಪ್ರತಿಭಟನಾ ಚಳುವಳಿ ಮುಂದುವರೆಯುತ್ತದೆ

ಸಿಎಎ/ಎನ್‌ಪಿಆರ್/ ಎನ್‌ಆರ್‌ಸಿ ವಿರುದ್ಧ ಎಡೆಬಿಡದೆ ನಡೆಯುತ್ತಿರುವ ಶಾಂತಿಯುತ ಸಾಮೂಹಿಕ ಪ್ರತಿಬಟನೆಗಳು ದೇಶದೆಲ್ಲೆಡೆಗಳಲ್ಲಿ ಮುಂದುವರೆದಿವೆ. ಕೇರಳ ರಾಜ್ಯ ಸರಕಾರದ ಕ್ರಮವನ್ನು ಅನುಸರಿಸಿ ಹೆಚ್ಚೆಚ್ಚು ರಾಜ್ಯ ಸರಕಾರಗಳು ಮುಂದೆ ಬಂದು ಎನ್‌ಪಿಆರ್ ಮತ್ತು ಎನ್‌ಆರ್‌ಸಿಗಳನ್ನು ವಿವಿಧ ಮಟ್ಟಗಳ ವರೆಗೆ ವಿರೋಧಿಸಿವೆ. ಕೇರಳ, ಪಂಜಾಬ್, ಪಶ್ಚಿಮ ಬಂಗಾಲ, ಮಧ್ಯಪ್ರದೇಶ, ಛತ್ತೀಸ್‌ಗಡ, ಪಾಂಡಿಚೇರಿ ಮತ್ತು ರಾಜಸ್ಥಾನ ಎನ್‌ಪಿಆರ್ ನಡೆಸುವುದಿಲ್ಲ ಎಂದು ಪ್ರಕಟಿಸಿವೆ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ದಿಲ್ಲಿ, ಒಡಿಶ ಮತ್ತು ಬಿಹಾರ್ ಎನ್‌ಪಿಆರ್‌ನ್ನು 2010ರ ವಿಧಾನಕ್ಕೆ ಬದ್ಧಗೊಳಿಸದಿದ್ದರೆ ಅದನ್ನು ಜಾರಿಗೊಳಿಸುವುದಿಲ್ಲ ಎಂದಿವೆ. ಮಹಾರಾಷ್ಟ್ರದಲ್ಲಿ ಒಂದು ಮಂತ್ರಿಮಂಡಳೀಯ ಸಮಿತಿ ಈ ವಿಷಯವನ್ನು ಪರಿಶೀಲಿಸುತ್ತಿದೆ.

ಎನ್‌ಪಿಆರ್ ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಯಾರನ್ನೂ ಸಂದೇಹಾಸ್ಪದ ವ್ಯಕ್ತಿ ಎಂದು ಗುರುತಿಸುವುದಿಲ್ಲ ಎಂದು ಕೇಂದ್ರ ಗೃಹಮಂತ್ರಿ ಅಮಿತ್ ಷಾ ಸಂಸತ್ತಿನಲ್ಲಿ ನೀಡಿರುವ ಹೇಳಿಕೆ ಪೌರತ್ವ ತಿದ್ದುಪಡಿ ಕಾಯ್ದೆ 2003ರ ಅಡಿಯಲ್ಲಿನ ನಿಬಂಧನೆಗಳು ಇರುವ ವರೆಗೆ ನಿಷ್ಪ್ರಯೋಜಕ. ಗೃಹಮಂತ್ರಿಗಳು ತಮ್ಮ ಮಾತುಗಳ ಬಗ್ಗೆ ಪ್ರಾಮಾಣಿಕರಾಗಿದ್ದರೆ, ಈ ನಿಬಂಧನೆಗಳನ್ನು, ಮುಖ್ಯವಾಗಿ ನಿಬಂಧನೆ ಸಂಖ್ಯೆ 3,4,5,6 ಮತ್ತು 7ನ್ನು ರದ್ದುಗೊಳಿಸಬೇಕು. ಪರಿಣಾಮವಾಗಿ, ತಿದ್ದುಪಡಿಗೊಳಿಸಿದ ನಿರ್ಣಯದಲ್ಲಿ ಎನ್‌ಆರ್‌ಸಿಗೆ ಅವಕಾಶ ನೀಡಿರುವುದು ನಿರರ್ಥಕಗೊಳ್ಳುತ್ತದೆ. ಅದರಿಂದಾಗಿ 2003ರ ಪೌರತ್ವ 'ತಿದ್ದುಪಡಿ ಕಾಯ್ದೆಯನ್ನೂ ತಿದ್ದುಪಡಿ ಮಾಡಬೇಕಾಗುತ್ತದೆ. ಈ ಕ್ರಮಗಳನ್ನು ಭಾರತ ಸರಕಾರ ಕೈಗೊಳ್ಳದಿದ್ದರೆ ಶಾಂತಿಯುತ ಪ್ರತಿಭಟನೆಗಳು ಮುಂದುವರೆಯುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.


ಎಡಪಕ್ಷಗಳು ಮಾರ್ಚ್ 23ರಂದು, ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಹುತಾತ್ಮರಾದ ದಿನದ ವಾರ್ಷಿಕಾಚರಣೆಯ ಸಂದರ್ಭದಲ್ಲಿ ದೇಶಾದ್ಯಂತ ಸಿಎಎ/ಎನ್‌ಪಿಆರ್/ ಎನ್‌ಆರ್‌ಸಿಗೆ ವಿರೋಧವನ್ನು ಎತ್ತಿ ಹಿಡಿದು, ದಿಲ್ಲಿಯಲ್ಲಿ ಕೋಮುವಾದಿ ಹಿಂಸಾಚಾರವನ್ನು ಖಂಡಿಸಿ ಮತ್ತು ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳನ್ನು ಹೇರುತ್ತಿರುವುದರ ವಿರುದ್ಧ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಕರೆ ನೀಡಿವೆ. ಕೊರೊನ ವೈರಸ್ ಸರ್ವವ್ಯಾಪಿಯಾಗಿರುವ ಹಿನ್ನೆಲೆಯಲ್ಲಿ ದೊಡ್ಡ ಸಭೆಗಳು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸಲಾಗುವುದಿಲ್ಲ. ಆದರೆ ಪ್ರತಿವರ್ಷದಂತೆ ಈ ದಿನಾಚರಣೆಯನ್ನು ನಡೆಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ದಿಲ್ಲಿ ಕೋಮುವಾದಿ ಹಿಂಸಾಚಾರ–ಸಮಯಬದ್ಧ ಸ್ವತಂತ್ರ ತನಿಖೆ ಅಗತ್ಯ

ದಿಲ್ಲಿಯ ಭೀಷಣ ಕೋಮುವಾದಿ ಹಿಂಸಾಚಾರವನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ ಮತ್ತು ಈ ಅಪರಾಧಗಳ ಒಂದು ನ್ಯಾಯಾಲಯದ ಉಸ್ತುವಾರಿಯ ಸ್ವತಂತ್ರ ತನಿಖೆಯನ್ನು ಸಮಯಬದ್ಧವಾಗಿ ನಡೆಸಬೇಕು ಎಂದು ಆಗ್ರಹಿಸಿದೆ. ಈ ಹಿಂಸಾಚಾರ ಎಸಗಿದವರನ್ನು ಕಾನೂನಿನ ಅಡಿಯಲ್ಲಿ ತೀವ್ರವಾಗಿ ಶಿಕ್ಷಿಸಬೇಕು ಎಂದು ಅದು ಹೇಳಿದೆ.

ಪೋಲೀಸ್ ಪಡೆ ಇಂತಹ ಹಿಂಸಾತ್ಮಕ ಹಲ್ಲೆಗಳನ್ನು ನಡೆಸಿದವರಿಗೆ ಹೇಗೆ ನೆರವಾಯಿತು, ಮತ್ತು ಕುಮ್ಮಕ್ಕು ನೀಡಿತು ಎಂಬುದರ ವೀಡಿಯೋ ಚಿತ್ರಗಳು ವ್ಯಾಪಕವಾಗಿ ಹರಡಿದ ಉದಾಹರಣೆಗಳಿವೆ. ಇದನ್ನು ಒಂದು

ಪುಟ 11 ಕ್ಕೆ





ಶತಮಾನೋತ್ಸವ ಲೇಖನ ಮಾಲೆ-18

ಸಾಮ್ರಾಜ್ಯಶಾಹಿ ವಿರೋಧಿ ಯುದ್ಧ

"ಜಗತ್ತಿನ ಪ್ರತಿಗಾಮಿ ಶಕ್ತಿಗಳ ರಕ್ಷಕನಾಗಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ದುರ್ಬಲಗೊಳಿಸುವುದಕ್ಕಾಗಿ ಮತ್ತು ಆ ಮೂಲಕ ಜಾಗತಿಕ ಮಟ್ಟದಲ್ಲಿ ಕ್ರಾಂತಿಕಾರಿ ಶಕ್ತಿಗಳನ್ನು ಬಲಪಡಿಸುವ ಹಾಗೂ ತನ್ನ ವಿಮೋಚನೆ ಗಳಿಸುವ ಸಲುವಾಗಿ ಯಾವ ಷರತ್ತೂ ಇಲ್ಲದೇ ಯುದ್ಧವನ್ನು ಪ್ರತಿರೋಧಿಸುವುದು" ಭಾರತದ ಜನರ ಕರ್ತವ್ಯ ಎಂದು ವಿಶ್ಲೇಷಿಸಿದ ಭಾರತ ಕಮ್ಯುನಿಸ್ಟ್ ಪಕ್ಷ ದೇಶವ್ಯಾಪಿ ಯುದ್ಧವಿರೋಧಿ ಚಳುವಳಿಯ ನೆಲೆಯನ್ನು ವಿಸ್ತಾರಗೊಳಿಸಲು, ಕಾರ್ಮಿಕ ವರ್ಗದ ಜತೆಯಲ್ಲೇ ರೈತರು ಹಾಗೂ ವಿದ್ಯಾರ್ಥಿಗಳನ್ನೂ ಯುದ್ಧವಿರೋಧಿ ಮತಪ್ರದರ್ಶನಗಳಲ್ಲಿ ಅಣಿನೆರೆಸುವ ಕಾರ್ಯಕ್ಕೆ ಕೂಡ ಕಮ್ಯುನಿಸ್ಟರು ಒತ್ತುಕೊಟ್ಟಿತು. ಸಮರಶೀಲ ಕಾರ್ಯಾಚರಣೆಗಳ ಸ್ವರೂಪವನ್ನು ಜನಪ್ರಿಯಗೊಳಿಸುವುದು ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಖಾತ್ರಿಗೊಳಿಸುವುದು; ಇವುಗಳು ಎಷ್ಟು ಸಾಧ್ಯವೋ ಅಷ್ಟು ವಿಶಾಲ ನೆಲೆಯಲ್ಲಿ ರಾಷ್ಟ್ರೀಯ ಚಳುವಳಿಯ ಪ್ರಬಲ ಲಕ್ಷಣವಾಗಬೇಕು ಎನ್ನುವುದು ಈ ಎಲ್ಲಾ ಪ್ರಯತ್ನಗಳ ಹಿಂದಿನ ಮುಖ್ಯವಾದ ಉದ್ದೇಶವಾಗಿತ್ತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

1939ರಲ್ಲಿ ಎರಡನೇ ವಿಶ್ವ ಮಹಾಯುದ್ಧ ಪ್ರಾರಂಭ ಭಾರತದ ರಾಜಕೀಯ ಬೆಳವಣಿಗೆಗಳ ಮೇಲೆ ಭಾರಿ ಪ್ರಭಾವ ಬೀರಿತು. ಬ್ರಿಟಿಷ್ ವೈಸ್ ರಾಯ್ ಯಾವ ಭಾರತೀಯ ಪ್ರತಿನಿಧಿಗಳ ಜತೆಗೂ ಸಮಾಲೋಚನೆ ಮಾಡದೆ, ಆ ಯುದ್ಧದಲ್ಲಿ ಭಾರತ ಕೂಡ ಭಾಗವಹಿಸಲಿದೆ ಎಂದು ಘೋಷಣೆ ಮಾಡಿದ. ಯುದ್ಧ ಘೋಷಣೆಯಾದ ಕೂಡಲೇ ಜೀವನಾಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿದವು. ಅದರ ಪರಿಣಾಮವಾಗಿ ತಮ್ಮ ಜೀವನ ವೆಚ್ಚ ಹೆಚ್ಚಾಗಿದ್ದರ ಬಗ್ಗೆ ಜನರು ಅತೃಪ್ತರಾದರು. ಕಮ್ಯುನಿಸ್ಟ್ ಪಕ್ಷವು ಆ ಕೂಡಲೇ ಯುದ್ಧವನ್ನು ವಿರೋಧಿಸಿ ಹೇಳಿಕೆ ನೀಡಿತು. ಪಕ್ಷದ ಮುಖವಾಣಿಯಾದ 'ದಿ ಕಮ್ಯುನಿಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ ಹೇಳಿಕೆಯಲ್ಲಿ ಅದು ಜನತೆಯಲ್ಲಿ ವಿನಂತಿ ಮಾಡುತ್ತಾ 'ಈ ಗಂಭೀರ ರಾಷ್ಟ್ರೀಯ ಬಿಕ್ಕಟ್ಟಿನಲ್ಲಿ ನೀವೇ ಮುಂದಾಳುತ್ವ ವಹಿಸಿಕೊಂಡು ಕ್ರಿಯೆಗೆ ಇಳಿಯಿರಿ' ಎಂದು ಕರೆ ನೀಡಿತು.

ಕಮ್ಯುನಿಸ್ಟ್ ಪಕ್ಷದ ಮುಂದಾಳತ್ವದಲ್ಲಿ ಬೊಂಬಾಯಿಯ ಕಾರ್ಮಿಕ ವರ್ಗವು ಯುದ್ಧ ವಿರೋಧಿ ಮುಷ್ಕರವನ್ನು ಸಂಘಟಿಸಿತು ಮತ್ತು ಅದರಲ್ಲಿ 90000 ಕಾರ್ಮಿಕರು ಪಾಲ್ಗೊಂಡಿದ್ದರು. ಎರಡನೇ ಮಹಾಯುದ್ಧದ ಇತಿಹಾಸದಲ್ಲೇ ಮೊದಲ ಬಾರಿಗೆ ಇಂತಹ ಘಟನೆ ನಡೆಯಿತು. ಇದಾದ ಕೂಡಲೇ ಬೊಂಬಾಯಿಯ ಜವಳಿ ಗಿರಣಿಯ 175,000 ಕಾರ್ಮಿಕರು ತುಟ್ಟಿ ಭತ್ಯೆಗಾಗಿ ಮುಷ್ಕರಕ್ಕೆ ಇಳಿದರು. ತೀವ್ರ ದಾಳಿ ದಬ್ಬಾಳಿಕೆ ಮತ್ತು ಮುಖಂಡರೆಲ್ಲರ ಬಂಧನದ ನಡುವೆಯೂ ಮುಷ್ಕರವು 40 ದಿನಗಳ ಕಾಲ ನಡೆಯಿತು. ಆ ಮುಷ್ಕರಕ್ಕೆ ಬೆಂಬಲವಾಗಿ ಎಲ್ಲಾ ವಿಭಾಗದ ದುಡಿಯುವ ಜನರೂ ಒಂದು ದಿನದ ಸೌಹಾರ್ದ ಮುಷ್ಕರ ನಡೆಸಿದರು. ಈ ಬೊಂಬಾಯಿಯ ಮುಷ್ಕರದ ನಂತರ ದೇಶಾದ್ಯಂತ ಎಲ್ಲಾ ಕಡೆಗಳಲ್ಲಿಯೂ ಮುಷ್ಕರಗಳ ಅಲೆಯೇ ಎದ್ದು ಬಂತು.

"ಯುದ್ಧದ ಅವಧಿಯಲ್ಲಿ ಸಿಪಿಐ ನ ಧೋರಣೆ ಮತ್ತು ಕಾರ್ಯಭಾರಗಳು" ಎಂಬ ಶಿರೋನಾಮೆಯಡಿಯಲ್ಲಿ ಒಂದು ಹೇಳಿಕೆಯನ್ನು ಹೊರಡಿಸಿದ ಪಕ್ಷದ ಪೊಲಿಟ್‌ಬ್ಯೂರೋವು, ಇಂತಹ ಸಂದರ್ಭಗಳಲ್ಲಿ ಯಾವ ರೀತಿಯ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಿತು. "ಜಗತ್ತಿನ ಪ್ರತಿಗಾಮಿ ಶಕ್ತಿಗಳ ರಕ್ಷಕನಾಗಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ದುರ್ಬಲಗೊಳಿಸುವುದಕ್ಕಾಗಿ ಮತ್ತು ಆ ಮೂಲಕ ಜಾಗತಿಕ ಮಟ್ಟದಲ್ಲಿ ಕ್ರಾಂತಿಕಾರಿ ಶಕ್ತಿಗಳನ್ನು ಬಲಪಡಿಸುವ ಹಾಗೂ ತನ್ನ ವಿಮೋಚನೆ ಗಳಿಸುವ ಸಲುವಾಗಿ ಯಾವ ಷರತ್ತೂ ಇಲ್ಲದೇ ಯುದ್ಧವನ್ನು ಪ್ರತಿರೋಧಿಸುವುದು" ಭಾರತದ ಜನರ ಕರ್ತವ್ಯ ಎಂದು ಯಾವ ಮುಚ್ಚುಮರೆಯೂ ಇಲ್ಲದೇ ಪಕ್ಷ ಹೇಳಿತು.


ಕರಾಳ ಕಾನೂನು–ವಿರೋಧಿ ಮುಷ್ಕರ, 1939

ಅನೇಕ ಪ್ರಮುಖ ನಗರಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರು ಮುಷ್ಕರ ಮಾಡಿದರು ಮತ್ತು ಬಹಿರಂಗ ಸಭೆಗಳನ್ನು ನಡೆಸಿದರು; ಅವುಗಳಲ್ಲಿ ಹತ್ತಾರು ಸಾವಿರ ಕಾರ್ಮಿಕರು, ಮತ್ತು ಬಡ ಹಾಗೂ ಮಧ್ಯಮ ವರ್ಗದ ಜನರು ಪಾಲ್ಗೊಂಡಿದ್ದರು. ಕಮ್ಯುನಿಸ್ಟ್ ಪಕ್ಷ ಮತ್ತು ಎಡ ಸಂಘಟನೆಗಳು ಈ ಸಾಮೂಹಿಕ ಹೋರಾಟಗಳಿಗೆ ಸಂಘಟಿತ ನಾಯಕತ್ವ ಒದಗಿಸಿದವು ಹಾಗೂ ಯುದ್ಧ ವಿರೋಧಿ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸಿದವು. ಸಾಮಾನ್ಯ ಕಾಂಗ್ರೆಸ್ಸಿಗರು ಮತ್ತು ಕಾಂಗ್ರೆಸ್ ಸಮಿತಿಯ ಒಂದು ವಿಭಾಗ ಈ ಚಟುವಟಿಕೆಗಳಲ್ಲಿ ಸಹಕರಿಸಿದರು. ಕಮ್ಯುನಿಸ್ಟ್ ಪಕ್ಷವು ನಡೆಸಿದ ಈ ಶಕ್ತಿಯುತ ಚಳುವಳಿ ಮತ್ತು ಹೋರಾಟಗಳು, ಬಲಪಂಥೀಯ ಕಾಂಗ್ರೆಸ್ಸಿಗರ ಮೇಲೆ ಒತ್ತಡ ಹೇರಿದವು; ಬಿಕ್ಕಟ್ಟಿನಲ್ಲಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ತಮಗೇನಾದರೂ ಸೌಲಭ್ಯಗಳು ಸಿಗಬಹುದೇನೋ ಎಂಬ ನಿರೀಕ್ಷೆಯಲ್ಲಿದ್ದ ಈ ಬಲಪಂಥೀಯ ಕಾಂಗ್ರೆಸ್ಸಿಗರ ನೇತೃತ್ವದ ಸರ್ಕಾರಗಳು, ಕಮ್ಯುನಿಸ್ಟರ ಒತ್ತಡಗಳಿಂದಾಗಿ ರಾಜೀನಾಮೆ ನೀಡಲೇ ಬೇಕಾದ ಸ್ಥಿತಿಗೆ ಬಂದವು. 'ದಿ ಕಮ್ಯುನಿಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ(ನವಂಬರ್ 1939) ಲೇಖನವೊಂದರಲ್ಲಿ ಪಕ್ಷವು ನಿಚ್ಚಳವಾಗಿ "ಸಾಮ್ರಾಜ್ಯಶಾಹಿಯು ಯಾವುದೇ ರಿಯಾಯಿತಿ ನೀಡಲು ಸಿದ್ಧವಿಲ್ಲ" ಎಂದು ಹೇಳಿತು. ಈ ಸನ್ನಿವೇಶವನ್ನು ಬ್ರಿಟಿಷರು ಹೇಗೆ ಬಳಸಲು ಯತ್ನಿಸುತ್ತಾರೆ ಎನ್ನುವುದನ್ನು ಸರಿಯಾಗಿ ವಿವರಿಸಿತ್ತು: "ಪದೇ ಪದೇ ನಿಷೇಧಾಜ್ಞೆಯನ್ನು ಹೇರುವುದರ ಮೂಲಕ, ಕಾಂಗ್ರೆಸ್ಸಿಗರನ್ನು, ಸೋಶಿಯಲಿಸ್ಟರನ್ನು, ಕಮ್ಯುನಿಸ್ಟರನ್ನು, ಕಿಸಾನ್ ಸಭಾ ಮತ್ತು ಕಾರ್ಮಿಕ ಸಂಘಗಳ ಮುಖಂಡರನ್ನು ಬಂಧಿಸುವ ಮೂಲಕ, ತೀವ್ರವಾದಿಗಳ ಪತ್ರಿಕೆಗಳನ್ನು ನಿರ್ಬಂಧಿಸುವ ಮೂಲಕ, ರಾಷ್ಟ್ರೀಯ ಚಳುವಳಿಯ ಕ್ರಾಂತಿಕಾರಿ ಪಡೆಯನ್ನು ನಾಶಗೊಳಿಸಲು ಅವರು ಯತ್ನಿಸುತ್ತಾರೆ. ಕೋಮುವಾದಿ ಶಕ್ತಿಗಳಿಗೆ ಉತ್ತೇಜನ ನೀಡುವ ಮೂಲಕ ಕಾಂಗ್ರೆಸ್ಸಿಗರನ್ನು ಬ್ಲಾಕ್‌ಮೇಲ್ ಮಾಡಿ ಅವರನ್ನು ಧೃತಿಗೆಡಿಸುವ ತಂತ್ರ ಮಾಡುತ್ತಾರೆ. ಸ್ವಲ್ಪ ಸ್ವಲ್ಪವಾಗಿಯೇ ರಾಷ್ಟ್ರೀಯ ಶಕ್ತಿಗಳನ್ನು ಛಿದ್ರಗೊಳಿಸುತ್ತಾರೆ. ರಾಷ್ಟ್ರೀಯ ನಾಯಕತ್ವವನ್ನು ಹೋರಾಟ ಮಾಡದಂತೆ ತಡೆಹಿಡಿಯುವ, ಕಾನೂನಿನ ಚೌಕಟ್ಟಿನಡಿಯಲ್ಲೇ ಹೋರಾಟ ಮಾಡುವಂತೆ ಒತ್ತಡ ಹೇರಿ ರಾಷ್ಟ್ರೀಯ ರಂಗದೊಳಗೇ ನಾಯಕರುಗಳ ನಡುವೆ ತಿಕ್ಕಾಟ ಉಂಟಾಗುವಂತೆ ಮಾಡುವುದರ ಮೂಲಕ ರಾಷ್ಟ್ರೀಯ ಶಕ್ತಿಗಳನ್ನು ದುರ್ಬಲಗೊಳಿಸುತ್ತಾರೆ" ಎಂದು ವಿವರಿಸಲಾಗಿತ್ತು.


ಯುದ್ಧ–ವಿರೋಧಿ ಮುಷ್ಕರ, ಮುಂಬೈ, 1939

ಸಾಮೂಹಿಕ ಯುದ್ಧ ವಿರೋಧಿ ಮುಷ್ಕರಗಳು, ಬಹಿರಂಗ ಸಭೆಗಳು ಮತ್ತಿತರ ಪ್ರತಿಭಟನೆಗಳಲ್ಲದೇ, 'ಬೀದಿ ಬದಿ ಸಭೆಗಳು, ಕರಪತ್ರಗಳು, ಅಧ್ಯಯನ ಶಿಬಿರಗಳು, ಇತ್ಯಾದಿಗಳ ಮೂಲಕ ಜನರ ನಡುವೆ ವ್ಯಾಪಕ ಪ್ರಚಾರಾಂದೋಲನಗಳನ್ನು ನಡೆಸಲು ಪಕ್ಷ ನಿರ್ಧರಿಸಿತು; ಆ ಮೂಲಕ ಯುದ್ಧದ ನೈಜ ಸ್ವಭಾವ ಏನು ಎಂದು ಬಹಿರಂಗಗೊಳಿಸುತ್ತಾ ಕಾರ್ಮಿಕ ವರ್ಗದವರಿಗೆ ತಮ್ಮ ಪಾತ್ರ ಹಾಗೂ ಕೆಲಸಗಳ ಬಗ್ಗೆ ಪ್ರಜ್ಞೆ ಮೂಡಿಸಬೇಕೆಂದು ಪಕ್ಷ ತೀರ್ಮಾನಿಸಿತು. ಕಾರ್ಮಿಕ ವರ್ಗವು ತಮ್ಮ ಆರ್ಥಿಕ ಬೇಡಿಕೆಗಳಾದ ಕೂಲಿ ಹೆಚ್ಚಳ, ಬೆಲೆ ಏರಿಕೆಗಳಿಗೆ ಮಾತ್ರ ಸೀಮಿತವಾಗದೆ 'ಮುಂಬರುವ ರಾಜಕೀಯ ಹೋರಾಟಕ್ಕೆ ಶ್ರಮಜೀವಿಗಳ ಧೀರ ನಾಯಕತ್ವ ವಹಿಸಲೂ ಮುಂದಾಗಬೇಕೆಂದು' ಹೇಳಿತು. ಈ ತಿಳುವಳಿಕೆಯೊಂದಿಗೆ, ಕಾರ್ಮಿಕರನ್ನು ಸಂಘಟಿಸುವ, ಯುದ್ಧದ ಸಾಮ್ರಾಜ್ಯಶಾಹಿ ಸ್ವಭಾವ ಕುರಿತು ಅವರಿಗೆ ತಿಳಿಹೇಳುವ ಮತ್ತು ಅವರ ದಿನನಿತ್ಯದ ಬೇಡಿಕೆಗಳನ್ನು ಯುದ್ಧವಿರೋಧಿ ಪ್ರಚಾರಕ್ಕೆ ತಳಕು ಹಾಕುವ ಮೂಲಕ ಅವರ ಪ್ರಜ್ಞೆಯನ್ನು ಎತ್ತರಿಸುವ ನಿಟ್ಟಿನಲ್ಲಿ ಪಕ್ಷವು ನಿರಂತರವಾಗಿ ಕೆಲಸ ಮಾಡಿತು.

ಉದಾಹರಣೆಗೆ, ಯುದ್ಧಕ್ಕೆ ದೇಣಿಗೆ ನೀಡಬೇಕೆಂಬ ಸರ್ಕಾರದ ಬೇಡಿಕೆಯನ್ನು ಏರುತ್ತಿರುವ ಬೆಲೆಗಳು ಮತ್ತು ಅವರ ತೀರ ಕಡಿಮೆ ಕೂಲಿಗೆ ತಳಕು ಹಾಕಿ ಕಾರ್ಮಿಕರನ್ನು ಹೋರಾಟಗಳಿಗೆ ಇಳಿಸಲು ಸಣಬು ಮಿಲ್ಲುಗಳು, ರೈಲ್ವೇ, ಕಬ್ಬಿಣ ಕಾರ್ಖಾನೆ ಮುಂತಾದ ಉದ್ದಿಮೆಗಳ ಕಾರ್ಮಿಕರಿಗೆ ಸಿದ್ಧಪಡಿಸಿದ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ(1940)ಯಲ್ಲಿ ಹೇಳಲಾಗಿತ್ತು. ಗೃಹ ಇಲಾಖೆಯು ಕಮ್ಯುನಿಸ್ಟರ ಕುರಿತ ತನ್ನ ಗುಪ್ತ ವರದಿಯಲ್ಲಿ ಈ ಕಾರ್ಯವ್ಯೂಹ ಎಷ್ಟು ಫಲಪ್ರದವಾಗಬಹುದು ಎಂದು ಗುರುತಿಸಿತು: "ಕಮ್ಯುನಿಸ್ಟರು, ಸೋಶಿಯಲಿಸ್ಟರು, ಕಾರ್ಮಿಕರು ಮತ್ತು ರೈತರಿಗಾಗಿನ ಕಮ್ಯುನಿಸ್ಟರ ಈ ಸಮಾನ ಯೋಜನೆಗಳಲ್ಲಿ ಕಾರ್ಮಿಕರಿಗೆ 25% ಕೂಲಿ ಹೆಚ್ಚಳ ಮತ್ತು ಆಹಾರ ತುಟ್ಟಿ ಭತ್ಯೆಗಳು ಹಾಗೂ ರೈತರಿಗೆ ಗೇಣಿ ಮತ್ತು ಕಂದಾಯ ಕಡಿಮೆ ಮಾಡಬೇಕು ಎನ್ನುವ ಬೇಡಿಕೆಗಳನ್ನು ಈಡೇರಿಸಬೇಕೆಂಬ ಸಲಹೆಗಳನ್ನು ರೂಪಿಸಲಾಗಿದೆ. ಈ ಪ್ರಸ್ತಾಪಗಳ ಜತೆಯಲ್ಲೇ ಹಲವಾರು ಕೇಂದ್ರಗಳಿಗೆ ಕಳಿಸಿದ ರಾಜಕೀಯ ಸೂಚನೆಗಳಲ್ಲಿ 'ಈ ಬೇಡಿಕೆಗಳೊಂದಿಗೆ ಯುದ್ಧವಿರೋಧಿ ಪ್ರಚಾರವನ್ನು ಬೆರೆಸುವ ಮೂಲಕ ಕಾರ್ಮಿಕರನ್ನು ಮತ್ತು ರೈತರನ್ನು ಒಟ್ಟಿಗೇ ಅಣಿನೆರೆಸಲು ನಮಗೆ ಸಾಧ್ಯವಾಗುತ್ತದೆ' ಎಂದು ವಿವರಿಸಿದ್ದಾರೆ. ಈ ಸೂಚನೆಗಳು ಅವರ ಯೋಜನೆಯ ಸ್ಪಷ್ಟವಾದ ಸಾಮರ್ಥ್ಯವನ್ನು ಹೊರಗೆಡಹುತ್ತದೆ."

ದೇಶವ್ಯಾಪಿ ಯುದ್ಧವಿರೋಧಿ ಚಳುವಳಿಗಾಗಿ ನೆಲೆಯನ್ನು ವಿಸ್ತಾರಗೊಳಿಸಲು, ಕಾರ್ಮಿಕ ವರ್ಗದ ಜತೆಯಲ್ಲೇ ರೈತರು ಹಾಗೂ ವಿದ್ಯಾರ್ಥಿಗಳನ್ನೂ ಯುದ್ಧವಿರೋಧಿ ಮತಪ್ರದರ್ಶನಗಳಲ್ಲಿ ಅಣಿನೆರೆಸುವ ಕಾರ್ಯಕ್ಕೆ ಕೂಡ ಕಮ್ಯುನಿಸ್ಟರು ಒತ್ತುಕೊಟ್ಟರು. ಸಮರಶೀಲ ಕಾರ್ಯಾಚರಣೆಗಳ ಸ್ವರೂಪವನ್ನು ಜನಪ್ರಿಯಗೊಳಿಸುವುದು ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಖಾತ್ರಿಗೊಳಿಸುವುದು; ಇವುಗಳು 'ಎಷ್ಟು ಸಾಧ್ಯವೋ ಅಷ್ಟು ವಿಶಾಲ ನೆಲೆಯಲ್ಲಿ ರಾಷ್ಟ್ರೀಯ ಚಳುವಳಿಯ ಪ್ರಬಲ ಲಕ್ಷಣವಾಗಬೇಕು' ಎನ್ನುವುದು ಈ ಎಲ್ಲಾ ಪ್ರಯತ್ನಗಳ ಹಿಂದಿನ ಮುಖ್ಯವಾದ ಉದ್ದೇಶ. ಈ ಎಲ್ಲಾ ಪ್ರಯತ್ನಗಳ ಫಲವಾಗಿ, ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ(ಎ.ಐ.ಎಸ್.ಎಫ್)ವು ಅತ್ಯಂತ ಶಕ್ತಿಯುತ ಹಾಗೂ ಪ್ರಧಾನ ವಿದ್ಯಾರ್ಥಿ ಸಂಘಟನೆಯಾಗಿ ಹೊರಹೊಮ್ಮಿತು; ಅದು ಸಾಮ್ರಾಜ್ಯಶಾಹಿ–ವಿರೋಧಿ ವಿದ್ಯಾರ್ಥಿಗಳ ಹೋರಾಡುವ ಮತ್ತು ತೀವ್ರವಾದಿ ವಿಭಾಗಗಳ ಎಲ್ಲರನ್ನೂ ಒಂದುಗೂಡಿಸಿತು ಮತ್ತು ಬೆಂಬಲಿಸಿತು ಕೂಡ.

ಈ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷ ಮಾಡಿದ ಮತ್ತೊಂದು ಪ್ರಮುಖ ಪ್ರಯತ್ನವೆಂದರೆ ಕೋಮುವಾದದ ವಿರುದ್ಧ ಹೋರಾಟ ಮಾಡಿದ್ದು. ಯುದ್ಧ ಶುರುವಾಗುವಾಗಲೇ ಪಕ್ಷವು ಸ್ಪಷ್ಟವಾಗಿ ಎಚ್ಚರಿಸಿತ್ತು: "ಬ್ರಿಟಿಷ್ ಸಾಮ್ರಾಜ್ಯಶಾಹಿ ಕೋಮುವಾದಿ ಶಕ್ತಿಗಳನ್ನು ಉತ್ತೇಜಿಸುತ್ತದೆ, ಅದು ರಾಷ್ಟ್ರೀಯ ಚಳುವಳಿಯನ್ನು ಕೋಮುಗಲಭೆಗಳಲ್ಲಿ ಮುಳುಗಿಸುವ ಅಪಾಯವಿದೆ. "ಮುಸ್ಲಿಂ ಲೀಗ್, ಹಿಂದೂ ಮಹಾಸಭಾ, ಮುಂತಾದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪ್ರೋತ್ಸಾಹ ಪಡೆದಿರುವ ➚

ಜನಗಳ ಜ್ವಲಂತ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನಗಳು –ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧಾರ



ಪುಟ 9 ರಿಂದ

ಸಮಯಬದ್ಧ ನ್ಯಾಯಾಂಗ ವಿಚಾರಣೆಯ ಮೂಲಕ ಆಮೂಲಾಗ್ರವಾಗಿ ತನಿಖೆ ಮಾಡಬೇಕು.

ಈ ಕೋಮುವಾದಿ ಹಿಂಸಾಚಾರಕ್ಕೆ ಹೊಣೆಗಾರರಾದವರನ್ನು ಗುರುತಿಸಲು ಮುಖ ಗುರುತಿಸುವ ತಂತ್ರಜ್ಞಾನದ ಬಳಕೆಯ ಬಗ್ಗೆ ಗೃಹಮಂತ್ರಿಯ ದಾವೆಯನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಈ ತಂತ್ರಜ್ಞಾನದ ನಿಖರತೆ ಕೇವಲ 2ಶೇ. ಎಂದು 2018ರಲ್ಲಿ ಸರಕಾರವೇ ನ್ಯಾಯಾಲಯಗಳ ಮುಂದೆ ಒಪ್ಪಿಕೊಂಡಿದೆ. ಈ ನಿಖರತೆ 2019ರಲ್ಲಿ 1ಶೇ.ಕ್ಕೆ ಇಳಿದಿದೆ. ಇದು ಲಿಂಗ ವ್ಯತ್ಯಾಸವನ್ನು ಕೂಡ ಗುರುತಿಸಲಾರದು ಎಂದೂ ಹೇಳಲಾಗಿದೆ. ಹೀಗಿರುವಾಗ ಇದು ಅಮಾಯಕ ಜನಗಳಿಗೆ ಕಿರುಕುಳ ಮತ್ತು ಪೀಡನೆಯ ಸಾಧ್ಯತೆಗಳನ್ನು ತೆರೆದು ಕೊಡುತ್ತದೆ. ಅಲ್ಲದೆ, ಈ ರೀತಿ ಗುರುತಿಸಲು ಈ ತಂತ್ರಜ್ಞಾನವನ್ನು ಬಳಸುವುದಕ್ಕೆ ಯಾವುದೇ ಕಾನೂನು ಚೌಕಟ್ಟು ಅಥವ ನ್ಯಾಯಾಂಗ ಆದೇಶ ಕೂಡ ಇಲ್ಲ.

ಪರಿಹಾರ ಕಾರ್ಯ: ಕೋಮುವಾದಿ ಹಿಂಸಾಚಾರಕ್ಕೆ ತುತ್ತಾದವರಿಗೆ ಪರಿಹಾರ ನಿಧಿಗಳನ್ನು ಸಂಗ್ರಹಿಸಬೇಕು ಎಂಬ ಸಿಪಿಐ(ಎಂ) ಕರೆಗೆ ಸ್ಪಂದಿಸಿ ಇದುವರೆಗೆ ರೂ. ಆರು ಕೋಟಿಗಿಂತಲೂ ಹೆಚ್ಚು ಸಂಗ್ರಹವಾಗಿದೆ. ಜನಗಳಿಂದ ಎರಡು ದಿನಗಳ ಸಾಮೂಹಿಕ ಸಂಗ್ರಹದಲ್ಲಿ ರೂ.5,0,74,779 ಸಂಗ್ರಹಿಸಿ ಕೊಟ್ಟಿರುವ ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿಯನ್ನು ಪೊಲಿಟ್‌ಬ್ಯುರೊ ಅಭಿನಂದಿಸಿದೆ. ದೇಶಾದ್ಯಂತ ಸಂಗ್ರಹ ಮುಂದುವರೆದಿದೆ.

ದಿಲ್ಲಿ ರಾಜ್ಯ ಸಮಿತಿ ರಚಿಸಿದ ಒಂದು ಪರಿಹಾರ ಸಮಿತಿ ಪ್ರಾಣಹಾನಿ ಅನುಭವಿಸಿದ ಕುಟುಂಬಗಳಿಗೆ ಬಹಳ ಅಗತ್ಯವಾದ ಪರಿಹಾರ ಒದಗಿಸಲು, ಗಾಯಗೊಂಡವರ ಚಿಕಿತ್ಸೆಗೆ ಮತ್ತು ಮನೆಗಳು ಬೆಂಕಿಗಾಹುತಿಯಾದವರಿಗೆ ಹಾಗೂ ಜೀವನಾಧಾರಗಳು ಕಿತ್ತುಕೊಳ್ಳಲ್ಪಟ್ಟವರಿಗೆ ಮರುವಸತಿ ಕಲ್ಪಿಸಲು ಕೆಲಸ ಮಾಡುತ್ತಿದೆ.

ಜಮ್ಮು ಮತ್ತು ಕಾಶ್ಮೀರ –ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ತಕ್ಷಣದಿಂದಲೇ ಮತ್ತೆ ಸ್ಥಾಪಿಸಬೇಕು

ಕೊನೆಗೂ, ಏಳು ತಿಂಗಳು ಸಾರ್ವಜನಿಕ ಭದ್ರತಾ ಕಾಯ್ದೆಯ ಅಡಿಯಲ್ಲಿ ಬಂಧನದ ನಂತರ, ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಮಂತ್ರಿ ಮತ್ತು ಈಗ ಸಂಸತ್ ಸದಸ್ಯರಾಗಿರುವ ಫಾರುಕ್ ಅಬ್ದುಲ್ಲಾ ರವರ ಬಿಡುಗಡೆಯಾಗಿರುವುದನ್ನು ಪೊಲಿಟ್‌ಬ್ಯುರೊ ಸ್ವಾಗತಿಸಿದೆ.

ಆದರೆ ಕಾಶ್ಮೀರದ ಮೇಲೆ ಹೇರಿರುವ ನಿರ್ಬಂಧ ಮುಂದುವರೆಯುತ್ತಿದೆ. ಕರಾಳ ಸಾರ್ವಜನಿಕ ಭದ್ರತಾ ಕಾಯ್ದೆ(ಪಿಎಸ್‌ಎ)ಯನ್ನು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಒಮರ್ ಅಬ್ದುಲ್ಲ ಮತ್ತು ಮೆಹಬೂಬ ಮುಫ್ತಿಯವರ ಮೇಲೆ ಪ್ರಯೋಗಿಸಲಾಗಿದೆ. ಏಳು ತಿಂಗಳ ನಂತರವೂ ಸಾವಿರಾರು ಮಂದಿ ಬಂಧನದಲ್ಲಿದ್ದಾರೆ. ಲಕ್ಷಾಂತರ ಜೀವನಾಧಾರಗಳು ನಾಶವಾಗಿವೆ. ಸಾಮಾನ್ಯ ದೈನಂದಿನ ಚಟುವಟಿಕೆಗಳೇ ಇಲ್ಲವಾಗಿವೆ.

ಆಗಸ್ಟ್ 4/5, 2019ರಂದು ಬಂಧಿತರಾದ ಎಲ್ಲರನ್ನೂ ಈ ಕ್ಷಣವೇ ಬಿಡುಗಡೆ ಮಾಡಬೇಕು. ಸಂಪರ್ಕದ ಮೇಲಿನ ನಿರ್ಬಂಧಗಳನ್ನು ತೆಗೆಯಬೇಕು. ಜನಗಳ ಸಾಮಾನ್ಯ ಚಟುವಟಿಕೆಗಳ ಪರಿಸ್ಥಿತಿಯನ್ನು ಕೂಡಲೇ ನೆಲೆಗೊಳಿಸಬೇಕು. ಭಾರತೀಯ ಸಂವಿಧಾನದ ಅಡಿಯಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ತಕ್ಷಣದಿಂದಲೇ ಮತ್ತೆ ಸ್ಥಾಪಿಸಬೇಕು.

ಭಾರತೀಯ ಸಂವಿಧಾನದ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಹೊಂದಿದ್ದ ವಿಶೇಷ ರಾಜ್ಯದ ಸ್ಥಾನಮಾನವನ್ನು ತಕ್ಷಣವೇ ಮತ್ತೆ ನೆಲೆಗೊಳಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ನ್ಯಾಯಾಂಗದ ಬಗ್ಗೆ ಟೀಕೆಗಳು–ತುರ್ತಾಗಿ ಸರಿಪಡಿಸಬೇಕಾಗಿದೆ

ಸಂವಿಧಾನಿಕ ವ್ಯವಸ್ಥೆಯಲ್ಲಿ, ಭಾರತದಲ್ಲಿ ನ್ಯಾಯಾಂಗ ಸ್ವತಂತ್ರವಾಗಿದೆ ಮಾತ್ರವಲ್ಲ, ನಮ್ಮ ಸಂವಿಧಾನದ ಅಡಿಯಲ್ಲಿ ಕಾನೂನಿನ ಆಳ್ವಿಕೆಯನ್ನು ಕಾಪಾಡುವಲ್ಲಿ ಅದಕ್ಕೆ ಒಂದು ಅತ್ಯಂತ ಮಹತ್ವದ ಪಾತ್ರವಿದೆ. ನ್ಯಾಯ ನೀಡಿಕೆಯಲ್ಲಿ ವಿಳಂಬ, ಹೈಕೋರ್ಟ್ ನ್ಯಾಯಾಧೀಶರ ಮಧ್ಯರಾತ್ರಿ ವರ್ಗಾವಣೆಗಳು ಮತ್ತು ಕಲಮು 370 ರದ್ದತಿ ಹಾಗೂ ಸಿಎಎ ಗೆ ಸವಾಲುಗಳನ್ನು ವಿಚಾರಣೆಗೆ ಎತ್ತಿಕೊಳ್ಳುವಲ್ಲಿ ವಿಳಂಬ ಜನಗಳಲ್ಲಿ ವಿಶ್ವಾಸವನ್ನು ಉಂಟುಮಾಡುತ್ತಿಲ್ಲ ಮತ್ತು ಇವೆಲ್ಲ ಅವರ ಅತ್ಯುಚ್ಚ ನಿರೀಕ್ಷೆಗಳಿಗೆ ಅನುಗುಣವಾಗಿಲ್ಲ. ಕಾರ್ಯಾಂಗವು ನ್ಯಾಯಾಂಗದ ಮೇಲೆ ಒತ್ತಡ ಹಾಕುತ್ತಿದೆ ಮತ್ತು ನ್ಯಾಯಾಂಗ ತನ್ನ ಹೊಣೆಗಾರಿಕೆಯನ್ನು ಬಿಟ್ಟುಕೊಟ್ಟಿದೆ ಎಂಬ ಟೀಕೆಗಳು ಹಲವೆಡೆಗಳಿಂದ ಬರುತ್ತಿವೆ. ಇದು ದುರದೃಷ್ಟಕರ ಮತ್ತು ಇದನ್ನು ತುರ್ತಾಗಿ ಸರಿಪಡಿಸಬೇಕಾಗಿದೆ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ರಾಜ್ಯ ಸರಕಾರಗಳನ್ನು ಉರುಳಿಸುವ ಭಂಡ ಪ್ರಯತ್ನಗಳು

ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರಗಳನ್ನು ಉರುಳಿಸುವುದಕ್ಕಾಗಿ ಮತ್ತು ಜನಾದೇಶವನ್ನು ಉಲ್ಲಂಘಿಸುವುದಕ್ಕಾಗಿ ಭಂಡ ಕುದುರೆ ವ್ಯಾಪಾರ, ಶಾಸಕರ ಪಕ್ಷಾಂತರ ಮಾಡಿಸಲು ಬೆದರಿಕೆಗಳ ಬಳಕೆ ಇತ್ಯಾದಿಗಳನ್ನು ಪೊಲಿಟ್‌ಬ್ಯುರೊ ಬಲವಾಗಿ ಟೀಕಿಸಿದೆ. ಮಧ್ಯಪ್ರದೇಶದಲ್ಲಿ ಹೀಗಾಗುತ್ತಿದೆ. ಈ ಹಿಂದೆ ಕರ್ನಾಟಕದಲ್ಲೂ ಮತ್ತು ಇತರೆಡೆಗಳಲ್ಲೂ ಇಂತಹುದೇ ತಂತ್ರಗಳು ರಾಜ್ಯಗಳ ಜನಾದೇಶಗಳಿಗೆ ವಿಶ್ವಾಸಘಾತ ಬಗೆದಿವೆ. ಇವು ಪ್ರಜಾಪ್ರಭುತ್ವ–ವಿರೋಧಿ ಕೃತ್ಯಗಳು, ಜನತೆಯ ತೀರ್ಪಿನ ಮತ್ತು ಪ್ರಜಾಪ್ರಭುತ್ವದ ಅಪಹಾಸ್ಯ ಮಾಡುವಂತವುಗಳು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಜನತೆಯ ಮೇಲೆ ಎಡೆಬಿಡದ ಆರ್ಥಿಕ ದಾಳಿಗಳು

ಆರ್ಥಿಕ ಹಿಂಜರಿತ ನಮ್ಮ ಜನತೆಯ ಬಹುಪಾಲು ವಿಭಾಗಗಳಿಗೆ ಅಭೂತಪೂರ್ವ ಸಂಕಟಗಳನ್ನು ಉಂಟು ಮಾಡುತ್ತಿದೆ. ಅತ್ಯಂತ ಹೆಚ್ಚಿನ ನಿರುದ್ಯೋಗ, ಕೃಷಿ ಹತಾಶೆ, ಕಾರ್ಖಾನೆಗಳ ಮುಚ್ಚಿಕೆ, ಮತ್ತು ರಿಟ್ರೆಂಚ್‌ಮೆಂಟ್, ನಬೆಲೆಯೇರಿಕೆ ವಿಪರೀತ ಆರ್ಥಿಕ ಹೊರೆಗಳನ್ನು ಹೇರುತ್ತಿವೆ. ಈ ಸಂಕಟಗಳ ಮೇಲೆ, ಸರಕಾರ ಈಗ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸುಂಕಗಳನ್ನು ಬೃಹತ್ ಪ್ರಮಾಣದಲ್ಲಿ ಏರಿಸಿದೆ. ಇದು ಬೆಲೆಯೇರಿಕೆಗಳ ಮೇಲೆ ಪರಿಣಾಮ ಬೀರಲಿದೆ. ಅದೇ ವೇಳೆಗೆ, ದೇಶದ ರಾಷ್ಟ್ರೀಯ ಆಸ್ತಿಗಳನ್ನು ಮೂರು ಕಾಸಿಗೆ ಮಾರಲಾಗುತ್ತಿದೆ.

ಬಂಟ ಬಂಡವಾಳಶಾಹಿ: ಬಂಟ ಬಂಡವಾಳಶಾಹಿಯ ಅತ್ಯಂತ ಕೆಟ್ಟ ಉದಾಹರಣೆಯಾಗಿ, ಮತ್ತೊಂದು ಖಾಸಗಿ ಬ್ಯಾಂಕ್, ಯಸ್ ಬ್ಯಾಂಕ್ ಕುಸಿದಿದೆ. ಈ ಬ್ಯಾಂಕಿನ ಸಾಲಖಾತೆ 2014ರಲ್ಲಿ ರೂ.55,633 ಕೋಟಿ ಇದ್ದದ್ದು, ಮಾರ್ಚ್ 2019ರಲ್ಲಿ ರೂ.2,41,999 ಗೇರಿದೆ ಎಂದು ದಾಖಲೆಗಳು ತಿಳಿಸುತ್ತಿವೆ. ಈ ಬ್ಯಾಂಕಿನ ಮೇಲೆ ಆಳುವ ಸರಕಾರದ ಕೃಪಾಪಾತ್ರ ಕಾರ್ಪೊರೇಟ್‌ಗಳಿಗೆ ಕೊಟ್ಟ ಸಾಲಗಳ ಹೊರೆ ಇದೆ.

ಲಾಭಗಳ ಖಾಸಗೀಕರಣ ಮತ್ತು ನಷ್ಟಗಳ ರಾಷ್ಟ್ರೀಕರಣದ ಒಂದು ಜ್ವಲಂತ ಉದಾಹರಣೆಯಾಗಿ, ಈ ಬ್ಯಾಂಕನ್ನು ಪಾರು ಮಾಡುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಹೇಳಲಾಗಿದೆ. ಬ್ಯಾಂಕುಗಳು ಮೋದಿ ಸರಕಾರದ ಬಂಟರುಗಳಿಗೆ ನೀಡಿದ ಸಾಲಗಳನ್ನು ಮನ್ನಾ ಮಾಡಿದ್ದಲ್ಲದೆ (2014ರಿಂದ ರೂ.7,78,000 ಕೋಟಿ ಮತ್ತು 2018–19ರಲ್ಲೇ ರೂ.1.83 ಲಕ್ಷ ಕೋಟಿ), ಇತ್ತೀಚೆಗೆ 33 ಶ್ರೀಮಂತ ಸಾಲಗಾರರ ಇನ್ನೂ ರೂ.76,600 ಕೋಟಿ ರೂ.ಗಳನ್ನು ಬಿಟ್ಟು ಬಿಡಲಾಗಿದೆ. ಮಾಜಿ ರಿಝರ್ವ್ ಬ್ಯಾಂಕ್ ಗವರ್ನರ್ ರಘುರಾಮ ರಾಜನ್ ಪ್ರಧಾನ ಮಂತ್ರಿ ಮೋದಿಗೆ 2015ರಲ್ಲಿ ಕೊಟ್ಟ ಸಾರ್ವಜನಿಕ ಹಣವನ್ನು ಲೂಟಿ ಮಾಡಿದ ಅವರ ಶ್ರೀಮಂತ ಸುಸ್ತಿದಾರರ ಹೆಸರುಗಳನ್ನು ಇನ್ನೂ ಸಾರ್ವಜನಿಕಗೊಳಿಸಿಲ್ಲ.

ಪೊಲಿಟ್‌ಬ್ಯುರೊ ಕರೆ

ಜನಗಳ ಮೇಲೆ ಹೇರುತ್ತಿರುವ ಈ ಎಲ್ಲ ಪ್ರಶ್ನೆಗಳ ಮೇಲೆ ಸಾರ್ವಜನಿಕ ಪ್ರಚಾರಾಂದೋಲನಗಳನ್ನು ನಡೆಸಲು ಪೊಲಿಟ್‌ಬ್ಯುರೊ ನಿರ್ಧರಿಸಿದೆ. ಹೀಗೆ ಮಾಡುವಾಗ ಸರ್ವವ್ಯಾಪಿ ಕೊರೊನ ವೈರಸ್ ರೋಗ ಉಂಟು ಮಾಡಿರುವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಎಂದು ಅದು ಹೇಳಿದೆ. ನಮ್ಮ ಜನತೆಯ ಎಲ್ಲ ವಿಭಾಗಗಳೊಂದಿಗೆ ಸಂಯೋಜಿಸಿ ಈ ಪ್ರತಿಭಟನೆಗಳನ್ನು ನಡೆಸಲಾಗುವುದು– ನಿರುದ್ಯೋಗದ ವಿರುದ್ಧ ಯುವಜನರೊಂದಿಗೆ, ಕಾರ್ಮಿಕರೊಂದಿಗೆ ಕ್ಲೋಶರ್‌ಗಳು, ರಾಷ್ಟ್ರೀಯ ಆಸ್ತಿಗಳ ಲೂಟಿಗಳು, ಸಾರ್ವಜನಿಕ ವಲಯದ ಖಾಸಗೀಕರಣ, ರಿಟ್ರೆಂಚ್‌ಮೆಂಟ್ ವಿರುದ್ಧ ಮತ್ತು ಕನಿಷ್ಟ ಕೂಲಿಗಾಗಿ, ಮಹಿಳೆಯರೊಂದಿಗೆ, ಅವರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು, ಅತ್ಯಾಚಾರಗಳ ವಿರುದ್ಧ, ಆರ್ಥಿಕ ಹಿಂಜರಿತ ಉಂಟು ಮಾಡಿರುವ ಹೊರೆಗಳ ವಿರುದ್ಧ, ರೈತರು ಮತ್ತು ಕೃಷಿಕೂಲಿಕಾರರೊಂದಿಗೆ ತೀಕ್ಷ್ಣಗೊಳ್ಳುತ್ತಿರುವ ಕೃಷಿ ಸಂಕಟದ ವಿರುದ್ಧ, ವಿದ್ಯಾರ್ಥಿಗಳು, ದಲಿತರು, ಬುಡಕಟ್ಟು ಜನಗಳು ಮುಂತಾದ ಜನವಿಭಾಗಗಳೊಂದಿಗೆ ಈ ಪ್ರತಿಭಟನೆಗಳನ್ನು ನಡೆಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

➘ ಕೋಮುವಾದಿ ಸಂಘಟನೆಗಳು ಜನರಲ್ಲಿ ಕೋಮು ವಿಷವನ್ನು ಬಿತ್ತುವುದರ ವಿರುದ್ಧ ಪ್ರಬಲ ಪ್ರಚಾರಾಂದೋಲನ ಮಾಡುವುದರ ಮೂಲಕ ಜನರನ್ನು ಎಚ್ಚರಿಸಬೇಕು. ಜನ ಸಮುದಾಯದ ನಡುವೆ ನಡೆಸುವ ವರ್ಗ ಸಮರದ ಕ್ರಾಂತಿಕಾರಿ ಪ್ರಚಾರಾಂದೋಲನ ಮಾತ್ರವೇ ಕೋಮು ದ್ವೇಷದ ವಿಷಕಾರಿ ಕಳೆಗಳನ್ನು ಮೂಲೋತ್ಪಾಟನೆ ಮಾಡಲು ಸಾಧ್ಯ." ಎನ್ನುವ ಸ್ಪಷ್ಟ ವರ್ಗ ದೃಷ್ಟಿಕೋನದಲ್ಲಿ ಪಕ್ಷವು ನಿರ್ಧಾರ ಮಾಡಿತು.

ಕಮ್ಯುನಿಸ್ಟರ ಈ ಎಲ್ಲಾ ಪ್ರಯತ್ನಗಳು ತೀವ್ರ ದಮನವನ್ನು ಎದುರಿಸಬೇಕಾಗಿ ಬಂತು. ಸರ್ಕಾರವು ತನ್ನ ಬಲಾಢ್ಯ ಶಕ್ತಿಯನ್ನು ಬಳಸಿ ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆಯನ್ನು ಜಾರಿಮಾಡಿ ಕಮ್ಯುನಿಸ್ಟರನ್ನು ಬಂಧಿಸಿತು. ಬಹಿರಂಗ ಸಭೆಗಳ ನಿಷೇಧ ಮತ್ತು ಪತ್ರಿಕೆಗಳ ಸ್ವಾತಂತ್ರ್ಯ ಹರಣಗಳಲ್ಲದೇ, ತುರ್ತು ಕಾನೂನೊಂದನ್ನು ತಂದು ಸ್ವಯಂಸೇವಾ ಸಂಘಟನೆಗಳನ್ನು ನಿರ್ಬಂಧಿಸಿತು. ಜೂನ್ 1941ರಲ್ಲಿ, ಪಕ್ಷವು ನಿಷೇಧಕ್ಕೆ ಒಳಪಟ್ಟಿತು. ಈ ಅವಧಿಯಲ್ಲಿ ಬಂಧನಕ್ಕೊಳಗಾದ 700 ಜನರಲ್ಲಿ, 480 ಜನ ಕಮ್ಯುನಿಸ್ಟರಾಗಿದ್ದರು. ಕಮ್ಯುನಿಸ್ಟರು ಬಹಿರಂಗವಾಗಿ ಹಾಗೂ ಭೂಗತರಾಗಿ ಕಾರ್ಯನಿರ್ವಹಿಸಿದರು; ಯಾರು ಬಂಧನಕ್ಕೆ ಒಳಗಾಗಬಹುದು ಮತ್ತು ಯಾರು ಆಗಬಾರದು ಎಂಬುದನ್ನು ಎಚ್ಚರದಿಂದ ನಿರ್ವಹಿಸಿದರು. 1934ರಿಂದಲೇ ಪಕ್ಷವು ನಿಷೇಧಕ್ಕೆ ಒಳಪಟ್ಟಿದ್ದರೂ, ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ ಹಾಗೂ ಇತರ ಸಾಮಾಜಿಕ ಸಂಘಟನೆಗಳ ವೇದಿಕೆಗಳನ್ನು ಕಮ್ಯುನಿಸ್ಟರು ತಮ್ಮ ಕೆಲಸ ಕಾರ್ಯಗಳಿಗೆ ಬಳಸುತ್ತಿದ್ದರು. ಸಂಯುಕ್ತ ರಂಗ ಕಾರ್ಯತಂತ್ರ ಕಮ್ಯುನಿಸ್ಟ್ ಚಟುವಟಿಕೆಗಳನ್ನು ವಿಸ್ತರಿಸಲು ಬಹಳ ಸಹಾಯ ಮಾಡಿತು.

ಬ್ರಿಟಿಷರ ವಿರುದ್ಧ ಹೋರಾಡುತ್ತಿರುವ ಎಲ್ಲಾ ಶಕ್ತಿಗಳ ಐಕ್ಯತೆಯನ್ನು ಕಾಪಾಡಿಕೊಳ್ಳುವುದು ಮುಖ್ಯವಾದದ್ದೆಂದು ಕಮ್ಯುನಿಸ್ಟ್ ಪಕ್ಷ ಅರಿಯಿತು; ಸಾಮ್ರಾಜ್ಯಶಾಹಿ ಮತ್ತು ಯುದ್ಧದ ವಿರುದ್ಧ ಜನಸಮುದಾಯವನ್ನು ಅಣಿನೆರೆಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವು ತನ್ನ ನಿರ್ಣಾಯಕ ಪಾತ್ರ ವಹಿಸಬೇಕೆಂದು ಕಮ್ಯುನಿಸ್ಟ್ ಪಕ್ಷ ಆಲೋಚಿಸಿತು. ಆದರೆ ಹಲವಾರು ಪಕ್ಷಗಳ – ಬಲಪಂಥೀಯ ಮತ್ತು ಎಡಪಂಥೀಯ ಕಾಂಗ್ರೆಸ್ಸಿಗರು, ಸಿ.ಎಸ್.ಪಿ, ಫಾರ್ವರ್ಡ್ ಬ್ಲಾಕ್ ಮತ್ತು ಕಮ್ಯುನಿಸ್ಟ್ ಪಕ್ಷ – ನಡುವೆ ಯುದ್ಧ ಸಮಯದಲ್ಲಿ ಅನುಸರಿಸಬೇಕಾದ ತಂತ್ರಗಳ ಬಗ್ಗೆ ತೀವ್ರ ಅಭಿಪ್ರಾಯ ಭೇದಗಳಿದ್ದವು.

ಯುದ್ಧದ ಸ್ವರೂಪ ಮತ್ತು ಅದರಲ್ಲಿ ಬ್ರಿಟಿಷರ ಪಾತ್ರವನ್ನು ಕಮ್ಯುನಿಸ್ಟ್ ಪಕ್ಷವು ಪರಿಶೀಲಿಸಿತು; ಯುದ್ಧ ಆರಂಭವಾದಾಗಿನ ಅಂತರ್‌ರಾಷ್ಟ್ರೀಯ ಹಿನ್ನೆಲೆ, ಅದರ ಪರಿಣಾಮವಾದ ವರ್ಗ ಶಕ್ತಿಗಳು ಮತ್ತು ಅವುಗಳ ಅಂತರ್ ಸಂಬಂಧಗಳನ್ನು ವಸ್ತುನಿಷ್ಠವಾಗಿ ಅಂದಾಜು ಮಾಡಿತು. ಇದರ ಆಧಾರದಲ್ಲಿ, ಬಲಪಂಥೀಯ ಕಾಂಗ್ರೆಸ್ ನಾಯಕತ್ವ, ಸಿ.ಎಸ್.ಪಿ ಮತ್ತು ಫಾರ್ವರ್ಡ್ ಬ್ಲಾಕ್ ಈ ಗುಂಪುಗಳ ರಾಜಕೀಯ ಮತ್ತು ಧೋರಣೆಗಳನ್ನು ಪಕ್ಷವು ವಿಮರ್ಶಾತ್ಮಕವಾಗಿ ಪರೀಕ್ಷಿಸಿತು; ಕಾಂಗ್ರೆಸ್ ನಾಯಕತ್ವವು ಒಂದು ಕಡೆಯಲ್ಲಿ ಫ್ಯಾಸಿಸ್ಟ್ ವಿರೋಧಿ ಘೋಷಣೆಗಳನ್ನು ಕೊಡುತ್ತಲೇ, ಮತ್ತೊಂದೆಡೆ ಬ್ರಿಟಿಷರೊಂದಿಗೆ ಚೌಕಾಶಿ ಮಾಡಲು ಹೆಣಗಾಡುತ್ತಿತ್ತು; ಸಿ.ಎಸ್.ಪಿ. ನಾಯಕತ್ವವು ಕಾಂಗ್ರೆಸ್ಸನ್ನು ವಿರೋಧಿಸುವ ನಾಟಕವಾಡುತ್ತಲೇ ಅತ್ತ ಕಾಂಗ್ರೆಸ್ ನೀತಿಗಳನ್ನು ಅನುಮೋದಿಸುತ್ತಿತ್ತು; ಕಮ್ಯುನಿಸ್ಟ್ ಪಕ್ಷವು ಬ್ರಿಟಿಷ್ ಆಳರಸರ ನೈಜ ಸ್ವಭಾವವನ್ನು ಅದರ ಫ್ಯಾಸಿಸ್ಟ್ ವಿರೋಧಿ ಮುಖವಾಡವನ್ನು ಹರಿದುಹಾಕುವ ಮೂಲಕ ಬಯಲು ಮಾಡಲು ಪ್ರಯತ್ನಿಸುತ್ತಿತ್ತು; ಫಾರ್ವರ್ಡ್ ಬ್ಲಾಕ್ ಫ್ಯಾಸಿಸ್ಟ್ ಶಕ್ತಿಗಳ ಸಹಾಯ ಪಡೆದು ಭಾರತದಲ್ಲಿ ಕ್ರಾಂತಿಯನ್ನು ಸಂಘಟಿಸಲು ಯತ್ನಿಸುತ್ತಿತ್ತು.

ಈ ಭೇದಗಳ ಕಾರಣಗಳಿಂದಾಗಿ, ಶ್ರಮವಹಿಸಿ ಕಟ್ಟಿದ್ದ ಎಡ ಐಕ್ಯತೆಯ ಬಹುತೇಕ ಕುಸಿದುಬಿತ್ತು. ಮಾರ್ಚ್ 1940ರಲ್ಲಿ, ಸಿ.ಎಸ್.ಪಿ.ಯಿಂದ ಕಮ್ಯುನಿಸ್ಟರನ್ನು ಉಚ್ಚಾಟಿಸಲಾಯಿತು.

ಕಮ್ಯುನಿಸ್ಟ್ ಪಕ್ಷ ಎರಡು ಪ್ರಮುಖ ಪ್ರಕಾಶನಗಳು –ಸಮರಶೀಲ ಸಾಮೂಹಿಕ ಹೋರಾಟಗಳ ಕಾರ್ಯಕ್ರಮದ ರೂಪರೇಷೆಗಳನ್ನು ನೀಡಿದ್ದ 'ದಿ ಪ್ರೋಲೇಟೇರಿಯನ್ ಪಾಥ್'(ಶ್ರಮಜೀವಿ ಮಾರ್ಗ), ಮತ್ತು ಕಾಂಗ್ರೆಸ್, ಸಿ.ಎಸ್.ಪಿ ಮತ್ತು ಫಾರ್ವರ್ಡ್ ಬ್ಲಾಕ್ ನೀತಿಗಳ ಕಟು ವಿಮರ್ಶೆ ಮಾಡಿದ್ದ 'ಪಕ್ಷಗಳು ಮತ್ತು ರಾಜಕೀಯಗಳು' ಎಂಬ ಕಿರುಹೊತ್ತಿಗೆ– ಇವು ದೇಶದೆಲ್ಲೆಡೆಯ ಕಮ್ಯುನಿಸ್ಟರಿಗೆ ಸೈದ್ಧಾಂತಿಕ ಸಾಹಿತ್ಯವಾಗಿದ್ದವು; ಇವು ಸಮರಶೀಲ ರಾಷ್ಟ್ರೀಯವಾದ ಮತ್ತು ಶ್ರಮಜೀವಿ ಅಂತರ್‌ರಾಷ್ಟ್ರೀಯವಾದಗಳ ಅಂತರಾರ್ಥ ತಿಳಿಸುವ ಮೂಲಕ ತರಬೇತಿ ನೀಡಿದವು. ಈ ಎರಡೂ ದಸ್ತಾವೇಜುಗಳನ್ನು ಭಾಷಾಂತರಿಸಿ ವ್ಯಾಪಕವಾಗಿ ವಿತರಣೆ ಮಾಡಲಾಯಿತು. ಪ್ರತಿ ವಾರ ತಪ್ಪದೇ ಹೊರಬರುತ್ತಿದ್ದ ಪಕ್ಷದ ಪತ್ರ(ಪಾರ್ಟಿ ಲೆಟರ್)ವನ್ನು ಪಕ್ಷದ ಸಂಗಾತಿಗಳಿಗೆ ಶಿಕ್ಷಣ ನೀಡಲು ಬಳಸಲಾಗುತ್ತಿತ್ತು.

ಜೂನ್ 22, 1941ರಲ್ಲಿ ಸೋವಿಯತ್ ಯೂನಿಯನ್ನಿನ ಮೇಲೆ ನಾಜಿ ದಾಳಿ ಆರಂಭವಾಯಿತು ಮತ್ತು ಅದು ಯುದ್ಧದ ಮತ್ತು ವಿಶ್ವ ರಾಜಕೀಯದ ಮೂಲ ಚಹರೆಯನ್ನೇ ಆಮೂಲಾಗ್ರವಾಗಿ ಬದಲಾಯಿಸಿತು. ಇದು ಪಕ್ಷದ ರಾಜಕೀಯ ನಿಲುಮೆಯನ್ನೂ ಬದಲಾಯಿಸಿತು.

ಕೊವಿಡ್-19 ಎದುರಿಸುವ ಕೇರಳ ಮಾದರಿ 20,000 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್


ಎಲ್ಲರನ್ನೂ ಒಳಗೊಳ್ಳುವ, ಯಾರೂ ಹಿಂದೆ ಉಳಿಯದ ಕಣ್ಣೋಟ

ಮಾರ್ಚ್ 19 ರಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೊವಿಡ್-19ನ್ನು ಮೀರಿ ನಿಲ್ಲಲು 20,000 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜನ್ನು ಪ್ರಕಟಿಸಿದರು. ಇದು ಎಲ್ಲರನ್ನೂ ಒಳಗೊಳ್ಳುವ ಕಣ್ಣೋಟವನ್ನು ಹೊಂದಿದ್ದು, ಯಾರೂ ಹಿಂದೆಯೇ ಉಳಿದು ಬಿಡಬಾರದು ಎಂಬುದನ್ನು ಖಾತ್ರಿಗೊಳಿಸುತ್ತದೆ ಎಂದು ಹೇಳಲಾಗಿದೆ.

ವಿಶೇಷ ಕ್ರಮಗಳ ವಿವರ ಹೀಗಿದೆ:

1. ಕುಡುಂಬಶ್ರೀ ಮೂಲಕ ಕುಟುಂಬಗಳಿಗೆ 2000 ಕೋಟಿ ರೂ. ಮೌಲ್ಯದ ಸಾಲಗಳನ್ನು ಲಭ್ಯಗೊಳಿಸುವುದು.
2. ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ತಲಾ 1000ೋಟಿ ರೂ.ಗಳ, ಅಂದರೆ ಒಟ್ಟು 2000 ಕೋಟಿ ರೂ.ಗಳ ಗ್ರಾಮೀಣ ಉದ್ಯೋಗ ಖಾತ್ರಿ ಸ್ಕೀಮ್.
3. ಎಪ್ರಿಲ್ ತಿಂಗಳಲ್ಲಿ ಕೊಡಬೇಕಾದ ಸಾಮಾಜಿಕ ಭದ್ರತಾ ಪೆನ್ಶನ್‌ಗಳನ್ನು ಈ ತಿಂಗಳೇ ಕೊಡುವುದು. ಹೀಗೆ ಎರಡು ತಿಂಗಳ ಪೆನ್ಶನ್ ಮೊತ್ತವನ್ನು ಒಟ್ಟಿಗೇ ಕೊಡಲು 1320 ಕೋಟಿರೂ.ಗಳ ವೆಚ್ಚ ವಾಗುತ್ತದೆ.
4. ಸಾಮಾಜಿಕ ಕಲ್ಯಾಣ ಪೆನ್ಶನ್‌ಗಳಿಲ್ಲದ ಬಿಪಿಎಲ್ ಮತ್ತು ಅಂತ್ಯೋದಯ ಕುಟುಂಬಗಳಿಗೆ ತಲಾ1000ರೂ. ಇದಕ್ಕೆ ತಗಲುವ ಒಟ್ಟು ವೆಚ್ಚ 100 ಕೋಟಿ ರೂ.
5. ರಾಜ್ಯಾದ್ಯಂತ ಪ್ರತಿಯೊಬ್ಬರಿಗೂ, ಬಿಪಿಎಲ್-ಎಪಿಎಲ್ ಬೇಧವಿಲ್ಲದೆ, ಒಂದು ತಿಂಗಳ ಆಹಾರಧಾನ್ಯಗಳನ್ನು ಉಚಿತವಾಗಿ ಕೊಡಲಾಗುವುದು. ಬಿಪಿಎಲ್ಲೇತರ ಮತ್ತು ಅಂತ್ಯೋದಯೇತರ ಕುಟುಂಬಗಳಿಗೆ 10 ಕೆ.ಜಿ. ಆಹಾರಧಾನ್ಯಗಳು. ಇದಕ್ಕೆ 100 ಕೋಟಿ ರೂ. ತೆಗೆದಿಡಲಾಗಿದೆ
6. ಸಬ್ಸಿಡಿ ದರಗಳಲ್ಲಿ ಆಹಾರ ನೀಡುವ ರೆಸ್ಟೋರೆಂಟ್‌ಗಳನ್ನು ಮೂಲತಃ ಸಪ್ಟಂಬರ್ ವೇಳೆಗೆ ಆರಂಭಿಸಬೇಕೆಂದಿತ್ತು. ಈಗಿನ ಸನ್ನಿವೇಶವನ್ನು ಪರಿಗಣಿಸಿ ಎಪ್ರಿಲ್‌ನಿಂದಲೇ ಅವುಗಳ ಕಾರ್ಯಾರಂಭ. 1000 ಇಂತಹ ರೆಸ್ಟೋರೆಂಟ್‌ಗಳು 20ರೂ. ದರದಲ್ಲಿ ಊಟ ಒದಗಿಸುತ್ತವೆ. ಈ ಮದಲು ಇದಕ್ಕೆ 25ರೂ. ನಿಗದಿ ಮಾಡಲಾಗಿತ್ತು.
7. 500 ಕೋಟಿ ರೂ.ಗಳ ಒಂದು ಆರೋಗ್ಯ ಪ್ಯಾಕೇಜ್.
8. ಎಲ್ಲ ಸಂಸ್ಥೆಗಳ, ವ್ಯಕ್ತಿಗಳ ಬಾಕಿಗಳನ್ನು ಎಪ್ರಿಲ್‌ನಲ್ಲಿ ಚುಕ್ತಾ ಮಾಡಲಾಗುವುದು. ಇದಕ್ಕೆ 14,000 ಕೋಟಿ ರೂ. ಖರ್ಚು ಮಾಡಲಾಗುತ್ತದೆ.
9. ಇವಲ್ಲದೆ, ಆಟೋರಿಕ್ಷಾ ಮತ್ತು ಟ್ಯಾಕ್ಸಿಗಳಿಗೆ ಫಿಟ್‌ನೆಸ್ ಶುಲ್ಕಗಳನ್ನು ಪಾವತಿ; ಬಸ್‌ಗಳಿಗೂ ತೆರಿಗೆ ಪಾವತಿ ಸಡಿಲಿಕೆ; ಚಿತ್ರ ಮಂದಿರಗಳಿಗೆ ಮನರಂಜನಾ ತೆರಿಗೆಯಲ್ಲಿ ರಿಯಾಯ್ತಿ.
10. ನೀರು ಮತ್ತು ವಿದ್ಯುತ್ ಬಿಲ್ ಪಾವತಿಯ ಅವಧಿಯಲ್ಲೂ ರಿಯಾಯ್ತಿ.

ರಾಜ್ಯಸಭೆಗೆ ಗೊಗೊಯ್ ನಾಮಕರಣ "ನ್ಯಾಯಾಂಗದ ಸ್ವಾತಂತ್ರ್ಯದ ಮೇಲೆ ಕಪ್ಪು ಚುಕ್ಕೆ"!?



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಮೋದಿ ಸರಕಾರ ಇತ್ತೀಚೆಗೆ ನಿವೃತ್ತರಾದ ಭಾರತದ ಮುಖ್ಯ ನ್ಯಾಯಾಧೀಶ ಶ್ರೀ ರಂಜನ್ ಗೊಗೊಯ್ ರವರನ್ನು ರಾಜ್ಯಸಭೆಯ ಸದಸ್ಯರಾಗಿ ನಾಮಕರಣ ಮಾಡಿರುವುದಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ದೃಢ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಈ ನಡೆಯ ಮೂಲಕ ಮೋದಿ ಸರಕಾರ ನ್ಯಾಯಾಂಗದ ಸ್ವಾತಂತ್ರ್ಯವನ್ನು ಯಾವುದೇ ನಾಚಿಕೆಯಿಲ್ಲದೆ ಶಿಥಿಲಗೊಳಿಸಿದೆ. ಪ್ರಭುತ್ವದ ಅಂಗಗಳ ಅಧಿಕಾರಗಳನ್ನು ಪ್ರತ್ಯೇಕಗೊಳಿಸಿರುವ ನಮ್ಮ ಸಂವಿಧಾನಿಕ ವ್ಯವಸ್ಥೆಯ ಅನುಲ್ಲಂಘನೀಯ ನೀತಿಯನ್ನು ಈ ಮೂಲಕ ಬುಡಮೇಲು ಮಾಡಲಾಗಿದೆ ಎಂದು ಅದು ಟೀಕಿಸಿದೆ.

ತಮಾಷೆಯೆಂದರೆ, "ನಿವೃತ್ತಿಯ ನಂತರದ ನೇಮಕ ನ್ಯಾಯಾಂಗದ ಸ್ವಾತಂತ್ರ್ಯದ ಮೇಲೊಂದು ಕಪ್ಪುಚುಕ್ಕೆ" ಎಂದು ಕಳೆದ ವರ್ಷವಷ್ಟೇ ಆಗ ದೇಶದ ಮುಖ್ಯ ನ್ಯಾಯಾಧೀಶರಾಗಿದ್ದ ಗೊಗೊಯ್‌ರವರೇ ಹೇಳಿದ್ದರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಸಂವಿಧಾನಿಕ ವ್ಯವಸ್ಥೆಯಲ್ಲಿ, ಭಾರತದಲ್ಲಿ ನ್ಯಾಯಾಂಗ ಸ್ವತಂತ್ರವಾಗಿದೆ ಮಾತ್ರವಲ್ಲ, ನಮ್ಮ ಸಂವಿಧಾನದ ಅಡಿಯಲ್ಲಿ ಕಾನೂನಿನ ಆಳ್ವಿಕೆಯನ್ನು ಕಾಪಾಡುವಲ್ಲಿ ಅದಕ್ಕೆ ಒಂದು ಅತ್ಯಂತ ಮಹತ್ವದ ಪಾತ್ರವಿದೆ. ಇತ್ತೀಚೆಗೆ ನ್ಯಾಯ ನೀಡಿಕೆಯಲ್ಲಿ ವಿಳಂಬ, ಹೈಕೋರ್ಟ್ ನ್ಯಾಯಾಧೀಶರ ಮಧ್ಯರಾತ್ರಿ ವರ್ಗಾವಣೆಗಳು ಮತ್ತು ಕಲಮು 370 ರದ್ದತಿ ಹಾಗೂ ಸಿಎಎ ಗೆ ಸವಾಲುಗಳನ್ನು ವಿಚಾರಣೆಗೆ ಎತ್ತಿಕೊಳ್ಳುವಲ್ಲಿ ವಿಳಂಬ ಜನಗಳಲ್ಲಿ ವಿಶ್ವಾಸವನ್ನು ಉಂಟುಮಾಡುತ್ತಿಲ್ಲ ಮತ್ತು ಇವೆಲ್ಲ ಜನಗಳ ಅತ್ಯುಚ್ಚ ನಿರೀಕ್ಷೆಗಳಿಗೆ ಅನುಗುಣವಾಗಿಲ್ಲ ಎಂದು ಈ ಮೊದಲೇ ಸಿಪಿಐ(ಎಂ) ಸ್ಪಷ್ಟವಾಗಿ ಹೇಳಿತ್ತು.

ಕಾರ್ಯಾಂಗವು ನ್ಯಾಯಾಂಗದ ಮೇಲೆ ಒತ್ತಡ ಹಾಕುತ್ತಿದೆ ಮತ್ತು ನ್ಯಾಯಾಂಗ ತನ್ನ ಹೊಣೆಗಾರಿಕೆಯನ್ನು ಬಿಟ್ಟುಕೊಟ್ಟಿದೆ ಎಂಬ ವ್ಯಾಪಕ ಟೀಕೆಗಳ ಹಿನ್ನೆಲೆಯಲ್ಲಿ ಸಿಪಿಐ(ಎಂ) ಸರಕಾರದ ಈ ನಡೆಯನ್ನು ದೃಢವಾಗಿ ವಿರೋಧಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ನಮ್ಮ ಸಂವಿಧಾನದ ಭಾವನೆಯ ಹಿತದೃಷ್ಟಿಯಿಂದ ಈ ಪ್ರವೃತ್ತಿಯನ್ನು ತುರ್ತಾಗಿ ಸರಿಪಡಿಸಬೇಕಾಗಿದೆ, ಆದ್ದರಿಂದ ಭಾರತದ ರಾಷ್ಟ್ರಪತಿಗಳು ಶ್ರೀ ಗೊಗೊಯ್ ಅವರ ನಾಮಕರಣವನ್ನು ಹಿಂದಕ್ಕೆ ಪಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿತ್ತು.

ನಿವೃತ್ತ ಮುಖ್ಯ ನ್ಯಾಯಾಧೀಶ ರಂಜನ್ ಗೊಗೊಯ್‌ರವರನ್ನು ರಾಜ್ಯಸಭೆಗೆ ನೇಮಕ ಮಾಡಿರುವುದು ಮೋದಿ ಆಳ್ವಿಕೆ ಭಾರತೀಯ ನ್ಯಾಯಾಂಗಕ್ಕೆ ಕೊಟ್ಟಿರುವ ಮತ್ತೊಂದು ಆಘಾತ ಎಂದು ವರ್ಣಿಸಿದ ಅಖಿಲ ಭಾರತ ವಕೀಲರ ಸಂಘ (ಎಐಎಲ್‌ಯು) ವೂ ನ್ಯಾಯಾಂಗದ ವಿಶ್ವಾಸಾರ್ಹತೆ, ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಮತ್ತು ನ್ಯಾಯಾಂಗದ ಬಗ್ಗೆ ಜನಗಳ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳಲಿಕ್ಕಾಗಿ ಗೊಗೊಯ್ ಅವರು ಇದನ್ನು ಸ್ವೀಕರಿಸಬಾರದು ಎಂದು ವಿನಂತಿಸಿಕೊಂಡಿತ್ತು.


ರಾಜಕೀಯ ಪಕ್ಷಗಳು ಮತ್ತು ವಕೀಲರಿಂದ ಮಾತ್ರವಲ್ಲ, ಹಲವು ನಿವೃತ್ತ ನ್ಯಾಯಾಧೀಶರುಗಳಿಂದಲೂ ಈ ನೇಮಕಕ್ಕೆ ಬಲವಾದ ಆಕ್ಷೇಪಗಳು ಬಂದವು..

ಇವು ಯಾವುದನ್ನೂ ಲೆಕ್ಕಿಸದ ಗೊಗೊಯ್ ತಡಮಾಡದೆ ಸರಕಾರದ ಆಹ್ವಾನವನ್ನು ಸ್ವೀಕರಿಸಿದ್ದಾರೆ. ಪ್ರತಿಪಕ್ಷಗಳ ವಿರೋಧಧ ನಡುವೆ ಪ್ರಮಾಣ ವಚನವನ್ನೂ ಸ್ವೀಕರಿಸಿದ್ದಾರೆ.

ನ್ಯಾಯಮೂರ್ತಿ ಗೊಗೊಯ್ ನವಂಬರ್ 17, 2019ರಂದಷ್ಟೇ ನಿವೃತ್ತರಾದರು. ಅಖಿಲ ಭಾರತ ವಕೀಲರ ಸಂಘ ಹೇಳಿರುವಂತೆ ಭಾರತದ ಮುಕ್ಯ ನ್ಯಾಯಾಧೀಶರಾಗಿ ಅವರ ಅಧಿಕಾರಾವಧಿ ಅತ್ಯಂತ ವಿವಾದಾಸ್ಪದ ಅವಧಿಯಾಗಿತ್ತು. ಇದು ಸುಪ್ರಿಂ ಕೋರ್ಟ್ ಮೂಲಭೂತ ಹಕ್ಕುಗಳನ್ನು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸುವ ಜಾಗೃತ ಕಾವಲಗಾರನ ಪಾತ್ರವನ್ನು ನಿರ್ವಹಿಸುವುದು ಸಾಧ್ಯವಾಗದೇ ಹೋದ ಅವಧಿ ಎಂದು ಪರಿಣಿತರು ಅಭಿಪ್ರಾಯ ಪಡುತ್ತಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನದ ಇಳಿಕೆ, ರಫೆಲ್ ಕೇಸ್, ಅಸ್ಸಾಂ ಎನ್‌ಆರ್‌ಸಿ ಇತ್ಯಾದಿಗಳು ಉದಾಹರಣೆಗಳು. ನ್ಯಾಯಾಂಗ ತನ್ನ ಕ್ರಿಯೆ, ನಿಷ್ಕ್ರಿಯೆ ಮತ್ತು ಮೌನದ ಮೂಲಕ ಕಾರ್ಯಾಂಗಕ್ಕೆ ಕೊಡಬೇಕಾದಕ್ಕಿಂತಲೂ ಬಹಳ ಹೆಚ್ಚಿನ ರಕ್ಷಣೆ ನೀಡಿದ ಅವಧಿ ಇವರಿಂದ ಆರಂಭವಾಗಿದೆ ಎಂದು ಎಐಎಲ್‌ಯು ಹೇಳಿದೆ.

ಟ್ರಿಬ್ಯೂನಲ್ (ನ್ಯಾಯಮಂಡಳಿ)ಗಳ ನ್ಯಾಯಾಧೀಶರುಗಳನ್ನು ನಿವೃತ್ತಿಯ ನಂತರ ಮರು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಗೊಗೊಯ್ ಅವರ ನೇತೃತ್ವದ ಸಂವಿಧಾನ ಪೀಠದ ತೀರ್ಪಿನಲ್ಲಿ ಮರುನೇಮಕಕ್ಕೆ ಅವಕಾಶ ನೀಡುವ ಅಂಶವನ್ನು ರದ್ದು ಮಾಡುತ್ತ ಅವರು "ಮರುನೇಮಕದ ಅವಕಾಶ ನ್ಯಾಯಮಂಡಳಿಯ ಸದಸ್ಯರ ಸ್ವಾತಂತ್ರ್ಯವನ್ನು ಶಿಥಿಲಗೊಳಿಸುತ್ತದೆ, ಅವರು ತಮ್ಮ ಮರುನೇಮಕವನ್ನು ಖಾತ್ರಿಗೊಳಿಸುವ ರೀತಿಯಲ್ಲಿ ವಿಷಯಗಳನ್ನು ನಿರ್ಧರಿಸುವ ಬಾಧ್ಯತೆಗೆ ಒಳಗಾಗಬಹುದು" ಎಂದು ಹೇಳಿದ್ದರು ಎಂಬುದನ್ನು ನೆನಪಿಸಿರುವ ಎಐಎಲ್‌ಯು, ಈ ಹಿನ್ನೆಲೆಯಲ್ಲಿ ರಾಜ್ಯಸಭೆಗೆ ಅವರ ನೇಮಕ ಬಾಬ್ರಿ ಮಸೀದಿ, ರಫೆಲ್ ಕೇಸ್ ಸೇರಿದಂತೆ ಕಾರ್ಯಾಂಗದ, ಮೋದಿ ಆಳ್ವಿಕೆಯ ಪರವಾದ ಅವರ ತೀರ್ಪುಗಳು, ಆದೇಶಗಳು ಮತ್ತು ಕ್ರಿಯೆಗಳಿಗೆ ನೀಡಿದ ಇನಾಮು ಎಂಬ ಟೀಕೆಯನ್ನು ಮಾಡದಿರಲು ಸಾಧ್ಯವಿಲ್ಲ ಎಂದಿದೆ.

ಗೊಗೊಯ್ ರವರ ನಾಮಕರಣವನ್ನು ಅವರ ಒಪ್ಪಿಗೆಯಿಂದಲೇ ಮಾಡಿರಬಹುದು ಎಂಬ ಎಐಎಲ್‌ಯು ಅಭಿಪ್ರಾಯ ನಿಜ ಎಂದು ಈಗ ಅನಿಸುತ್ತಿದೆ. ವ್ಯಂಗ್ಯಚಿತ್ರಕಾರರಲ್ಲಿ ಹಲವರಿಗೆ ಗೊಗೊಯ್ ಅವರು ಆರಂಭಿಸಿದ "ಮೊಹರಾದ ಲಕೋಟೆ'ಯ ಪರಿಪಾಠ ಈ ಸಂದರ್ಭದಲ್ಲಿ ನೆನಪಾಗಿದ್ದರಲ್ಲಿ ಆಶ್ಚರ್ಯವಿಲ್ಲ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ಸಾಂಕೇತಿಕ ಕ್ರಮಗಳು ಬಿಟ್ಟು ಪ್ರಸಾರ ಭಾಷಣದಲ್ಲಿ ಏನಿದೆ?


ಪ್ರಧಾನ ಮಂತ್ರಿಗಳ ಬಹುಪ್ರಚಾರಿತ ಪ್ರಸಾರ ಭಾಷಣದಲ್ಲಿ ಕೊರೊನ ವೈರಸ್ ಮಹಾಮಾರಿಯನ್ನು ಎದುರಿಸಲು ಜನಗಳಿಗೆ ನೆರವಾಗಲು ಸರಕಾರದ ಸಿದ್ಧತೆಗಳು ಮತ್ತು ಅದು ಕೈಗೊಂಡಿರುವ ಕ್ರಮಗಳ ಬಗ್ಗೆ ಏನೂ ಇರಲಿಲ್ಲ ಎಂಬುದು ದುರದೃಷ್ಟಕರ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಪ್ರಧಾನ ಮಂತ್ರಿಗಳು ಮುಂದಿಟ್ಟ ಸಾಂಕೇತಿಕ ಕ್ರಮಗಳನ್ನು ಬಿಟ್ಟರೆ, "ವರ್ಕ್ ಫ್ರಮ್ ಹೋಮ್"(ಮನೆಯಿಂದ ಕೆಲಸ) ಅವಕಾಶವಿರದ, ತಮ್ಮ ದಿನದ ಆದಾಯದಿಂದಲೇ ಬದುಕುಳಿಯಬೇಕಾಗಿರುವ ಭಾರತದ ಬಹುಪಾಲು ಜನಗಳು ಎದುರಿಸುತ್ತಿರುವ ಬಿಕ್ಕಟ್ಟನ್ನು ಶಮನ ಮಾಡಲು ಸರಕಾರ ಏನು ಮಾಡುತ್ತಿದೆ?

ಚಟುವಟಿಕೆಗಳು ಸ್ಥಗಿತಗೊಳ್ಳುವದರಿಂದ ಅತಿ ಹೆಚ್ಚು ಸಂಕಷ್ಟಕ್ಕೀಡಾಗುವವರು ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರು ಎಂಬುದು ಸ್ಪಷ್ಟ. ಸರಕಾರ ತನ್ನ ದಾಸ್ತಾನುಗಳಲ್ಲಿರುವ ಹೆಚ್ಚುವರಿ ಆಹಾರಧಾನ್ಯಗಳನ್ನು ಇವರಿಗೆ ಲಭ್ಯಗೊಳಿಸಲು ಏನು ಮಾಡುತ್ತಿದೆ?.

ಕೇರಳದ ಎಡ ಸರಕಾರ ವೈದ್ಯಕೀಯ ಬಿಕ್ಕಟ್ಟನ್ನು ಎದುರಿಸುವುದು ಹೇಗೆ ಎಂದು ತೋರಿಸಿಕೊಟ್ಟಿದೆ ಮಾತ್ರವಲ್ಲ, ಈಗ ಬಡವರ ಸಂಕಷ್ಟಗಳನ್ನು ಶಮನ ಮಾಡಲು ಕೂಡ ಪರಿಹಾರ ಕ್ರಮಗಳನ್ನು ಪ್ರಕಟಿಸಿದೆ. ಅದು ಮಾರ್ಚ್ 19ರಂದು 20,000 ಕೋಟಿ ರೂ.ಗಳ ಪುನರುಜ್ಜೀವನ ಪ್ಯಾಕೇಜನ್ನು ಪ್ರಕಟಿಸಿದೆ. ಪಿಂಚಣಿದಾರರು, ಆಟೋ ಮತ್ತು ಬಸ್ ಮಾಲಕರಿಗೂ ಹಲವಾರು ಪರಿಹಾರ ಕ್ರಮಗಳನ್ನು ಪ್ರಕಟಿಸಿದೆ.

ಪ್ರಧಾನ ಮಂತ್ರಿಗಳು ಈ ಮಾದರಿಯನ್ನು ಅನುಸರಿಸಿ ಇಡೀ ದೇಶಕ್ಕೆ ಇಂತಹ ಕ್ರಮಗಳನ್ನೇಕೆ ಪ್ರಕಟಿಸಲಿಲ್ಲ ಎಂದು ಯೆಚುರಿ ಪ್ರಶ್ನಿಸಿದ್ದಾರೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಭಾರತೀಯ ಬ್ಯಾಂಕುಗಳ ಹಣಕಾಸು ಭಂಗುರಗೊಳ್ಳುತ್ತಿರುವುದೇಕೆ?



ಯಸ್ ಬ್ಯಾಂಕ್ ಸಾಲ ವಿಹಾರದಲ್ಲಿದ್ದಾಗ ರಿಝರ್ವ್ ಬ್ಯಾಂಕ್ ಏನು ಮಾಡುತ್ತಿತ್ತು ಎಂಬ ಪ್ರಶ್ನೆಗೆ ಅದು ನಿದ್ದೆ ಮಾಡುತ್ತಿತ್ತು ಎಂಬುದಷ್ಟೇ ಉತ್ತರವಲ್ಲ, ಬದಲಿಗೆ ಅದೂ, ಬೆಳವಣಿಗೆ ದರ ಏರುತ್ತಿರುವಂತೆ ಮಾಡುವ ಪ್ರಯತ್ನದಲ್ಲಿ, ಅರ್ಥವ್ಯವಸ್ಥೆಯ ಮೇಲೆ ನಿಗಾ ಇಟ್ಟಿರಬೇಕಾದ ಇತರ ಎಲ್ಲ ಸಂಸ್ಥೆಗಳಂತೆ, ಮುಖ ಬೇರೆಡೆಗೆ ತಿರುಗಿಸಿ ಅದನ್ನು ತಾನು ಕಂಡೇ ಇಲ್ಲ ಎಂದು ಕುರುಡುತನ ಪ್ರದರ್ಶಿಸುತ್ತಿತ್ತು. ಇದಕ್ಕೆ ನಾವೀಗ ಅಂಗೀಕರಿಸಿರುವ ನವ-ಉದಾರವಾದಿ ಬಂಡವಾಳಶಾಹಿಯ ಸಂರಚನೆಯೇ ಕಾರಣ. ಇದನ್ನು ಬಹಳಷ್ಟು ವಿಶ್ಲೇಷಕರು ಕಾಣಲಾರದಾಗಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ ಠೇವಣಿದಾರರ ಹಣ ಸುರಕ್ಷಿತವಾ'ಗಿರುತ್ತದೆ ಎಂದು ನಂಬುವುದೇ ಒಂದು ಭ್ರಾಂತಿ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ವೇದರಾಜ ಎನ್.ಕೆ.



ಯಸ್ ಬ್ಯಾಂಕ್ ಬಿಕ್ಕಟ್ಟು ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಒಟ್ಟಾರೆಯಾಗಿ ಬಾಧಿಸುತ್ತಿರುವ ಒಂದು ರೋಗದ ದಟ್ಟವಾದ ಅಭಿವ್ಯಕ್ತಿಯಷ್ಟೇ. ಆ ರೋಗವೆಂದರೆ ವಿಪರೀತವಾಗಿ ಹೆಚ್ಚಿರುವ ಹಣಕಾಸು ಭಂಗುರತೆ. ಮುಖ್ಯ ಆರ್ಥಿಕ ಸಲಹೆಗಾರರು ಮಾಧ್ಯಮಗಳ ಮೂಲಕ ಠೇವಣಿದಾರರಿಗೆ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾಕಷ್ಟು ಸ್ಥಿರತೆ ಇದೆ ಎಂದು ಆಶ್ವಾಸನೆ ನೀಡಿದ್ದಾರೆ. ಅದರ ಬಗ್ಗೆ ಸಂದೇಹವಿಲ್ಲ. ಆದರೆ ಈ ಆಶ್ವಾಸನೆ ಅದು ಹೆಚ್ಚೆಚ್ಚು ಭಂಗುರಗೊಳ್ಳುತ್ತಿದೆ ಎಂಬುದನ್ನೇನೂ ನಿರಾಕರಿಸುವುದಿಲ್ಲ. ಯಸ್ ಬ್ಯಾಂಕಿನ ಬಿಕ್ಕಟ್ಟು ಉಂಟಾಗಿರುವುದು ಕಳೆದ ಐದು ವರ್ಷಗಳಲ್ಲಿ ಅದರ ಸಾಲನೀಡಿಕೆಯಲ್ಲಿ ವಿಪರೀತ ಹೆಚ್ಚಳವಾಗಿರುವುದು, 2014ರಲ್ಲಿ 55,633 ಕೋಟಿ ರೂ. ಇದ್ದದ್ದು ಮಾರ್ಚ್ 2019ರಲ್ಲಿ 2,41,499 ಕೋಟಿ ರೂ. ಆಗಿರುವುದರಿಂದಾಗಿ ಎಂಬ ಕಾಂಗ್ರೆಸ್ ಪಕ್ಷದ ದಾವೆಯ ಬಗ್ಗೆಯೂ ಸಂದೇಹವೇನಿಲ್ಲ. ವಿಶೇಷವಾಗಿ ಮಾರ್ಚ್ 2016 ರಿಂದ ಮಾರ್ಚ್ 2018ರ ಅವಧಿಯಲ್ಲಂತೂ ಅದು 98210 ಕೋಟಿ ರೂ.ನಿಂದ 2,03,534 ಕೋಟಿಗೆ ನೆಗೆದಿದೆ. ಮತ್ತು ಈ ಸಾಲ ವಿಹಾರಕ್ಕೂ "ಬಂಟ ಬಂಡವಾಳಶಾಹಿ'ಗೂ ನಿಕಟ ಸಂಬಂಧವಿದೆ, ಅಂದರೆ ಇಂತಹ ಸಾಲಗಳ ಪ್ರಧಾನ ಫಲಾನುಭವಿಗಳಲ್ಲಿ ಪ್ರಧಾನ ಮಂತ್ರಿಗಳ "ಬಂಟ ಬಂಡವಾಳಿಗರು" ಬಹಳ ಮಂದಿ ಇದ್ದಾರೆ ಎಂಬುದರಲ್ಲಿಯೂ ಸಂದೇಹವಿಲ್ಲ.

ಆದರೆ, ಇವೆಲ್ಲವೂ ನಿಜವಾಗಿದ್ದರೂ, ಇಂತಹ ವಿಶ್ಲೇಷಣೆಯು ಮಟ್ಟದಲ್ಲೇ ನಿಂತು ಬಿಟ್ಟರೆ ಸಾಲದು. ಏಕೆಂದರೆ ಇದು ನವ-ಉದಾರವಾದದ ಸ್ವರೂಪಕ್ಕೇ ಸಂಬಂಧಪಟ್ಟಿರುವ ಒಂದು ಆಳವಾದ ಸಮಸ್ಯೆಯನ್ನು ಮಸುಕುಗೊಳಿಸುತ್ತದೆ. ಅಂದರೆ ಇಂತಹ ಒಂದು ಅರ್ಥವ್ಯವಸ್ಥೆ ಹಣಕಾಸು ಸಂಸ್ಥೆಗಳ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ನಷ್ಟದ ಸಂಭವನೀಯತೆ(ರಿಸ್ಕ್)ಯನ್ನು ಹೆಚ್ಚಿಸುತ್ತ ಹೋಗುವುದರಿಂದಾಗಿ ಹಣಕಾಸು ವ್ಯವಸ್ಥೆಯನ್ನು ಅಗತ್ಯವಾಗಿಯೂ, ಅನಿವಾರ್ಯವಾಗಿಯೂ ಹೆಚ್ಚೆಚ್ಚು ಭಂಗುರಗೊಳಿಸುತ್ತದೆ. ನಿಜ ಹೇಳಬೇಕೆಂದರೆ ಇಂತಹ ಒಂದು ನವ-ಉದಾರವಾದಿ ವ್ಯವಸ್ಥೆಯಲ್ಲಿ ಒಂದು ಆರ್ಥಿಕ ಭರಾಟೆಯನ್ನು ಕಾಯ್ದುಕೊಳ್ಳಬೇಕಾದರೆ ಹಣಕಾಸು ವ್ಯವಸ್ಥೆಯನ್ನು ಹೆಚ್ಚು ಭಂಗುರಗೊಳಿಸುವ ಕ್ರಮಗಳನ್ನು ಕೈಗೊಳ್ಳುವುದೇ ಏಕೈಕ ದಾರಿ.

ಹೀಗಿರುವಾಗ, ಯಸ್ ಬ್ಯಾಂಕ್ ಸಾಲ ಕೊಡುವ ಆವೇಶದಲ್ಲಿದ್ದಾಗ ರಿಝರ್ವ್ ಬ್ಯಾಂಕ್ ಏನು ಮಾಡುತ್ತಿತ್ತು ಎಂಬ ಪ್ರಶ್ನೆಗೆ ಅದು ನಿದ್ದೆ ಮಾಡುತ್ತಿತ್ತು ಎಂಬುದಷ್ಟೇ ಉತ್ತರವಲ್ಲ, ಬದಲಿಗೆ ಅದೂ, ಬೆಳವಣಿಗೆ ದರ ಏರುತ್ತಿರುವಂತೆ ಮಾಡುವ ಪ್ರಯತ್ನದಲ್ಲಿ, ಅರ್ಥವ್ಯವಸ್ಥೆಯ ಮೇಲೆ ನಿಗಾ ಇಟ್ಟಿರಬೇಕಾದ ಇತರ ಎಲ್ಲ ಸಂಸ್ಥೆಗಳಂತೆ, ಮುಖ ಬೇರೆಡೆಗೆ ತಿರುಗಿಸಿ ಅದನ್ನು ತಾನು ಕಂಡೇ ಇಲ್ಲ ಎಂದು ಕುರುಡುತನ ಪ್ರದರ್ಶಿಸುತ್ತಿತ್ತು.

ಒಂದು ನವ-ಉದಾರವಾದಿ ವ್ಯವಸ್ಥೆಯ ಒಂದು ಪ್ರಮುಖ ಲಕ್ಷಣವೆಂದರೆ, ಒಂದು ಆರ್ಥಿಕ ಉತ್ಕರ್ಷವನ್ನು ತರಲು ಅಥವ ಕಾಯ್ದುಕೊಳ್ಳಲು ವಿತ್ತೀಯ ಧೋರಣೆಯನ್ನು ಬಳಸುವಂತಿಲ್ಲ. ಏಕೆಂದರೆ ಇಂತಹ ವ್ಯವಸ್ಥೆ ಜಗತ್ತೆಲ್ಲ ಅಡ್ಡಾಡುವ ಹಣಕಾಸು ಬಂಡವಾಳದ ಒತ್ತಡಕ್ಕೊಳಗಾಗಿರುತ್ತದೆ. ಅದು ಇಂತಹ ವ್ಯವಸ್ಥೆ ತನ್ನ ವಿತ್ತೀಯ ಕೊರತೆಯನ್ನು ಒಟ್ಟು ಜಿಡಿಪಿಯ ಒಂದು ನಿಗದಿತ ಶೇಕಡಾಕ್ಕೆ ಸೀಮಿತಗೊಳಿಸುವಂತೆ ಬಲವಂತ ಮಾಡುತ್ತದೆ. ಭಾರತವೂ ಸೇರಿದಂತೆ, ಹೆಚ್ಚಿನ ನವ-ಉದಾರವಾದಿ ಅರ್ಥವ್ಯವಸ್ಥೆಗಳು ತಮ್ಮ ವಿತ್ತೀಯ ಕೊರತೆಯನ್ನು ಜಿಡಿಪಿಯ 3ಶೇ. ದಾಟಬಾರದು ಎಂದು ಶಾಸನಗಳನ್ನೇ ಮಾಡಿವೆ ಎಂಬುದನ್ನು ಗಮನಿಸಬೇಕು.

ನಿಜ, ವಿತ್ತೀಯ ಕೊರತೆಯನ್ನು ವಿಸ್ತರಿಸದಿದ್ದರೂ ಒಂದು ಆರ್ಥಿಕ ಉತ್ಕರ್ಷವನ್ನು ಕಾಯ್ದುಕೊಳ್ಳಬಹುದು. ಆದರೆ ಅದಕ್ಕೆ ಅರ್ಥವ್ಯವಸ್ಥೆಯಲ್ಲಿನ ಒಟ್ಟು ಬೇಡಿಕೆಯ ಪ್ರಮಾಣ ಇಳಿಮುಖಗೊಳ್ಳುವಂತೆ ಕಾಣಲಾರಂಭಿಸಿದಾಗ, ಇಳಿಕೆಯನ್ನು ತಡೆಗಟ್ಟಿ, ಬೇಡಿಕೆಯ ಪ್ರಮಾಣವನ್ನು ಹೆಚ್ಚಿಸಬೇಕಾಗುತ್ತದೆ. ಇದಕ್ಕೆ ಸರಕಾರದ ವೆಚ್ಚವನ್ನು ಹೆಚ್ಚಿಸಬೇಕಾಗುತ್ತದೆ, ಅದಕ್ಕೆ ಹಣವನ್ನು ಬಂಡವಾಳಿಗರ ಮೇಲೆ ತೆರಿಗೆಯನ್ನು ಹಾಕುವ ಮೂಲಕ ಸಂಗ್ರಹಿಸಬೇಕಾಗುತ್ತದೆ (ಏಕೆಂದರೆ, ಕಾರ್ಮಿಕರು ತಮ್ಮ ಆದಾಯಗಳ ಬಹುಪಾಲನ್ನು ತಮ್ಮ ದೈನಂದಿನ ಅಗತ್ಯಗಳಿಗಾಗಿ ಖರ್ಚು ಮಾಡಬೇಕಾಗುತ್ತದೆ, ತದ್ವಿರುದ್ಧವಾಗಿ ಬಂಡವಳಿಗರು ತಮ್ಮ ಹೆಚ್ಚಿನ ಆದಾಯಗಳನ್ನು ಉಳಿತಾಯ ಮಾಡುತ್ತಾರೆ). ಆದರೆ ಇದು ಹಣಕಾಸು ಬಂಡವಾಳಕ್ಕೆ ಇಷ್ಟವಾಗುವುದಿಲ್ಲ. ಆದ್ದರಿಂದ ಇಂತಹ ದಾರಿ ಹಿಡಿಯಲು ಅದು ಬಿಡುವುದಿಲ್ಲ. ಆದ್ದರಿಂದಲೇ ಇಂತಹ ಒಂದು ಅರ್ಥವ್ಯವಸ್ಥೆ ಕೆಳಕ್ಕೆ ಜಾರುತ್ತಿರುವಾಗ ವಿತ್ತೀಯ ಧೋರಣೆ ಅದನ್ನು ತಡೆದು ಮೇಲಕ್ಕೇರುವಂತೆ ಮಾಡುವ ಬದಲು, ಅದು ಮತ್ತಷ್ಟು ಕೆಳಕ್ಕೆ ಜಾರುವಂತೆ ಮಾಡುತ್ತದೆ.

ಆದ್ದರಿಂದ ಇಂತಹ ಜಾರುದಾರಿಯನ್ನು ತಪ್ಪಿಸಲು, ಉತ್ಕರ್ಷವನ್ನು ಕಾಯ್ದುಕೊಳ್ಳಲು ಲಭ್ಯವಾಗುವ ಏಕೈಕ ಸಾಧನವೆಂದರೆ ಹಣ ಚಲಾವಣೆ ಕುರಿತ ಧೋರಣೆ ಅನುಸರಿಸುವುದು. ಹೆಚ್ಚೆಚ್ಚು 'ಕೆಳ ಗುಣಮಟ್ಟದ' ಸಾಲಗಳನ್ನು, ಅಂದರೆ ನಷ್ಟದ ಸಂಭವನೀಯತೆ ಹೆಚ್ಚಿರುವ ಸಾಲಗಳನ್ನು ಕೊಡುವುದು. ಹಣಕಾಸು ಸಂಸ್ಥೆಗಳು ಇಂತಹ ಸಾಲಗಳನ್ನು ಕೊಡಲು ಅನುವಾಗುವಂತೆ ಬಡ್ಡಿದರಗಳನ್ನು ಆಗಾಗ ಇಳಿಸಲಾಗುತ್ತದೆ.

ಆದ್ದರಿಂದ ಇಂತಹ ಜಾರುದಾರಿಯನ್ನು ತಡೆಯಲು ಮತ್ತು ತೇಜಿಯನ್ನು ಉಳಿಸಿಕೊಳ್ಳಲು ಇರುವ ಏಕೈಕ ಉಪಕರಣ ಎಂದರೆ ಹಣ ಚಲಾವಣೆ ಸಂಬಂಧಿತ ಧೋರಣೆ. ಅದರ ಕೆಲಸ ಮಾಡುವ ವಿಧಾನವೆಂದರೆ, "ಕೆಳ ಗುಣಮಟ್ಟ"ದ ಅಂದರೆ ವಾಪಾಸು ಬರುವ ಸಮಸ್ಯೆ ಹೆಚ್ಚಿರುವ ಸಾಲಗಳನ್ನು ಹೆಚ್ಚೆಚ್ಚಾಗಿ ಕೊಡುವುದು. ಹಣಕಾಸು ಸಂಸ್ಥೆಗಳು ಹೀಗೆ ಮಾಡಲು ಆಗಾಗ ಬಡ್ಡಿದರಗಳನ್ನು ಇಳಿಸಲಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಫೆಡರಲ್ ರಿಝರ್ವ್ ಬೋರ್ಡ್(ಅಲ್ಲಿನ ಬ್ಯಾಂಕಿಂಗ್ ನಿಯಂತ್ರಕ ಸಂಸ್ಥೆ-ಅನು.)ನ ಅಧ್ಯಕ್ಷರಾಗಿದ್ದ ಅಲನ್ ಗ್ರೀನ್‌ಸ್ಪಾನ್ "ಡಾಟ್.ಕಾಂ ಗುಳ್ಳೆ" ಮುಗಿಯುತ್ತಿದ್ದಾಗ ಆಗಿನ ಅಮೆರಿಕಾದ ಆರ್ಥಿಕ ತೇಜಿಯನ್ನು ಕಾಯ್ದುಕೊಳ್ಳಲು ಮಾಡಿದ್ದು ಇದನ್ನೇ.

ಆದರೆ, ಭಾರತದಲ್ಲಿ ಬಡ್ಡಿದರಗಳನ್ನು ಬಳಸುವ ಜೊತೆಗೇ, ಸರಕಾರ ಆಗಾಗ ನೇರವಾಗಿಯೇ ಮೂಲರಚನೆಗಳಂತಹ ಹೆಚ್ಚು ರಿಸ್ಕ್ ಇರುವ ವಲಯಗಳಿಗೆ ಸಾಲ ಕೊಡಲು ಪ್ರೋತ್ಸಾಹ ನೀಡುತ್ತದೆ. ಇದರಲ್ಲಿ ರಿಯಲ್ ಎಸ್ಟೇಟ್ ಪ್ರಾಜೆಕ್ಟ್‌ಗಳೂ ಸೇರಿವೆ. ಅವು ಉನ್ನತ "ಆದ್ಯತೆ"ಗೆ ಅರ್ಹವಾಗಿವೆ ಎಂದು ಸರಕಾರಗಳು ನೆವ ಹೇಳುತ್ತವೆ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸರಕಾರದ ಇಂತಹ ಹಸ್ತಕ್ಷೇಪ ನೇರವಾಗಿದ್ದರೆ, ಯಸ್ ಬ್ಯಾಂಕಿನಂತಹ ಸದಾ ತಮ್ಮ ಗುರಿ ಸಾಧನೆಗೆ ಮುನ್ನುಗ್ಗುವ ಪ್ರವೃತ್ತಿಯ ಖಾಸಗಿ ವಲಯದ ಬ್ಯಾಂಕುಗಳ ವಿಷಯದಲ್ಲಿ ಇದು, ಅವರ ಸಾಲ ನೀಡಿಕೆ ಭರಾಟೆಯ ಬಗ್ಗೆ ಕಣ್ಣು ಮುಚ್ಚಿಕೊಂಡಿರುವ ಮೂಲಕ ಕೆಲಸ ಮಾಡುತ್ತದೆ.

ಬ್ಯಾಂಕುಗಳ ಪರಿಸ್ಥಿತಿಗಳು ಹೆಚ್ಚೆಚ್ಚು ದುರ್ಬಲವಾಗುತ್ತಿದ್ದರೂ ಆರ್ಥಿಕ ತೇಜಿ ಮುಂದುವರೆಯುವ ರೀತಿ ಇದು. ಈ ದುರ್ಬಲತೆ ಆರ್ಥಿಕ ತೇಜಿಯೊಂದಿಗೇ ಬರುವಂತದ್ದು, ಅದಕ್ಕೆ ತೆರಬೇಕಾದ ಬೆಲೆಯೂ ಹೌದು. ಭಾರತದಲ್ಲಿ ಬೆಳವಣಿಗೆ ದರವನ್ನು ಮುಂದುವರೆಸಿಕೊಂಡು ಹೋಗಲು ಸರಕಾರದ ಮುತುವರ್ಜಿಯಿಂದಲೇ ಖಾಸಗಿ ಕಾರ್ಪೊರೇಟ್ ಸಾಲಗಾರರಿಗೆ ಮೂಲರಚನೆಗಳ ಪ್ರಾಜೆಕ್ಟ್‌ಗಳಿಗೆ ಗಮನಾರ್ಹ ಪ್ರಮಾಣದಲ್ಲಿ ಸಾಲಗಳನ್ನು ಕೊಡಲಾಯಿತು ಎಂಬುದು ಸ್ಪಷ್ಟ . ಇದು ಬ್ಯಾಂಕುಗಳ ಆಸ್ತಿಗಳ "ಗುಣಮಟ್ಟ"ವನ್ನು ಕೆಳಗಿಳಿಸಿದವು. ಈ ಗುಣಮಟ್ಟ ಇಳಿಕೆ, ಈ ಸಾಲಗಳ ಹೊರತಾಗಿಯೂ ಬೇಡಿಕೆ ತಗ್ಗಲಾರಂಭಿಸಿದಾಗ ಇನ್ನಷ್ಟು ಉಲ್ಬಣಗೊಂಡಿತು. ಇದಕ್ಕೆ ರಫ್ತುಗಳ ಮಂದಗತಿ ಮುಂತಾದ ಹೊರಗಿನ ಕಾರಣಗಳೂ ಇವೆ.

ಅಮೆರಿಕನ್ ಅರ್ಥಶಾಸ್ತ್ರಜ್ಞ ಹೈಮನ್ ಮಿನ್ಸ್ಕಿ ಇಂತಹ ಹಣಕಾಸು ಭಂಗುರತೆ ಹೆಚ್ಚುತ್ತ ಹೋಗುವುದು ಎಲ್ಲ ಬಂಡವಾಳಶಾಹಿ ತೇಜಿಗಳ ಲಕ್ಷಣವೇ ಆಗಿದೆ ಎಂದು ವಾದಿಸುತ್ತಾರೆ. ಇದು, ವಿಶೇಷವಾಗಿ, ನವ-ಉದಾರವಾದಿ ಬಂಡವಾಳಶಾಹಿಯಲ್ಲಿ ಮತ್ತಷ್ಟು ನಿಜ. ಏಕೆಂದರೆ, ಇಲ್ಲಿ ಬೇಡಿಕೆಯನ್ನು ಹೆಚ್ಚಿಸಲಿಕ್ಕಾಗಿ ವಿತ್ತೀಯ ಕ್ರಮಗಳನ್ನು ಕೈಗೊಳ್ಳಲು ಅವಕಾಶವೇ ಇಲ್ಲ. ನಿಯಂತ್ರಣದ ಅರ್ಥವ್ಯವಸ್ಥೆಯಲ್ಲಿದ್ದರೆ, ಬೇಡಿಕೆ ಹೆಚ್ಚಿಸಲು ವಿತ್ತೀಯ ಕೊರತೆಯನ್ನು ಬಳಸಬಹುದಾಗಿತ್ತು, ಇದಕ್ಕೆ ಬ್ಯಾಂಕ್ ಸಾಲಗಳ ಬೆಂಬಲವಿರುತ್ತಿತ್ತು, ಅಂತಹ ಸಾಲಗಳ "ಗುಣಮಟ್ಟ' ಕಳಪೆಯಾಗಿರುತ್ತಿರಲಿಲ್ಲ.

ನವ-ಉದಾರವಾದಿ ಅರ್ಥವ್ಯವಸ್ಥೆಯ ಅಡಿಯಲ್ಲಿ ಒಂದು ಆರ್ಥಿಕ ತೇಜಿಯ ಸಂದರ್ಭದಲ್ಲಿ ಬ್ಯಾಂಕ್ ಆಸ್ತಿಗಳ "ಗುಣಮಟ್ಟ" ಇಳಿಯುತ್ತ ಹೋಗುತ್ತದೆ ಎಂಬುದು 2008ರಲ್ಲಿ ಅಮೆರಿಕ ಮತ್ತು ಇತರ ಮುಂದುವರೆದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳನ್ನು ಹಣಕಾಸು ಬಿಕ್ಕಟ್ಟು ಆವರಿಸಿದಾಗ ಎದ್ದು ಕಂಡಿತು. ಈ ಬಿಕ್ಕಟ್ಟಿನ ಮೊದಲು ಮನೆಸಾಲದ ಗುಳ್ಳೆ ಎದ್ದಿತ್ತು. ಈ ಸಾಲಗಳ "ಗುಣಮಟ್ಟ" ಕಳಪೆಯಾಗಿತ್ತು, ನಿಜ, ಇದನ್ನು ಮನೆ ಬೆಲೆಗಳಲ್ಲಿ ಸಟ್ಟಾಕೋರತನ ಸ್ವಲ್ಪಕಾಲ ಮರೆಮಾಚಿತು. ಆದರೆ ಇದು ಬ್ಯಾಂಕುಗಳಿಗೆ ಕಾಣದ ಸಂಗತಿಯೇನಲ್ಲ.

ಹಲವರು ಆ ಬ್ಯಾಂಕುಗಳು ಸಾಲ ಕೊಡುತ್ತಲೇ ಹೋಗಿ ಮನೆಸಾಲದ ಗುಳ್ಳೆಗಳನ್ನು ಸೃಷ್ಟಿಸಿದವೆಂದು ಟೀಕಿಸುತ್ತಾರೆ. ಆದರೆ ಅವು ಹಾಗೆ ಸಾಲ ಕೊಡದಿರುತ್ತಿದ್ದರೆ, ಆಗಿದ್ದ ಆರ್ಥಿಕ ತೇಜಿ ಇನ್ನೂ ಬೇಗನೇ ಮುಗಿದು ಬಿಡುತ್ತಿತ್ತು, ಸಾಮೂಹಿಕ ನಿರುದ್ಯೋಗ ಅಮೆರಿಕನ್ ಮತ್ತು ಇತರ ಮುಂದುವರೆದ ಅರ್ಥವ್ಯವಸ್ಥೆಗಳ ಮೇಲೆ ಆಗಲೇ ಎರಗುತ್ತಿತ್ತು ಎಂಬುದನ್ನು ಈ ಟೀಕಾಕಾರರು ಗಮನಿಸುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವರು ನವ-ಉದಾರವಾದಿ ವ್ಯವಸ್ಥೆಯ ಸಂರಚನಾ ಲಕ್ಷಣಗಳನ್ನು ಕಾಣಲಾರದೇ, ನಿರ್ದಿಷ್ಟ ಬ್ಯಾಂಕುಗಳನ್ನು ದೂರುತ್ತಾರೆ.

ಇಂತಹುದೇ ದೃಶ್ಯಾವಳಿಗಳು ಈಗ ಭಾರತದಲ್ಲಿ ಕಾಣುತ್ತಿವೆ. ಯಸ್ ಬ್ಯಾಂಕಿನ ಬಿಕ್ಕಟಿಟಗೆ ಅದರ ಮಾಲಕ ಎರ್ರಾಬಿರ್ರಿಯಾಗಿ ಸಾಲ ನೀಡಿದ್ದೇ ಕಾರಣ ಎಂದು ದೂಷಿಸಬಹುದಾದರೂ, ಹೆಚ್ಚಿನ ಟಿಪ್ಪಣಿಕಾರರು, ಈ ಮಾಲಕ, ಅಥವ ಇತರ ಬ್ಯಾಂಕ್ ಮಾಲಕರುಗಳೂ ಹೀಗೆ ಮಾಡದಿರುತ್ತಿದ್ದರೆ, ಈ ಆರ್ಥಿಕ ಬಿಕ್ಕಟ್ಟು, ಮತ್ತು ಸಾಮೂಹಿಕ ನಿರುದ್ಯೋಗ ಇದಕ್ಕಿಂತಲೂ ಮೊದಲೇ ಬರುತ್ತಿತ್ತು ಎಂಬ ಸಂಗತಿಯನ್ನು ಮರೆಯುತ್ತಾರೆ.

ಅಂದರೆ ಇದರರ್ಥ ಠೇವಣಿದಾರರ ಠೇವಣಿಗಳನ್ನು ಹೆಚ್ಚು ಅಪಾಯ ಸಂಭವಿಸಬಹುದಾದ ಸಾಲಗಳಿಗೆ ಬಳಸಲಾಯಿತು ಎಂಬ ಸಂಗತಿಯನ್ನು ಕ್ಷಮಿಸಬೇಕು ಎಂದೇನಲ್ಲ. ಬದಲಿಗೆ, ಆರ್ಥಿಕ ತೇಜಿ ಮುಂದುವರೆಯುವಂತೆ ಮಾಡಲು ಸರಕಾರ ಮರುಪಾವತಿಯಾಗದಿರುವ ಸಂಭವವೇ ಹೆಚ್ಚಿರುವ ಸಾಲಗಳನ್ನು ಬ್ಯಾಂಕುಗಳ ಕೊಡಲೇ ಬೇಕಾದಂತಹ ಸನ್ನಿವೇಶದಲ್ಲಿ ಠೇವಣಿದಾರರ ಹಣ ಸುರಕ್ಷಿತವಾಗಿರುತ್ತದೆ ಎಂದು ನಂಬುವುದೇ ಒಂದು ಭ್ರಾಂತಿ ಎಂದು ಸೂಚಿಸಲಿಕ್ಕಷ್ಟೇ ಇದನ್ನು ಹೇಳುತ್ತಿರುವುದು. ಬ್ಯಾಂಕುಗಳು ಒಂದು ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹೇಗೆ ವರ್ತಿಸುತ್ತವೆ ಎಂಬ ಪ್ರಶ್ನೆ ಮಹತ್ವದ್ದಲ್ಲ, ಬದಲಿಗೆ ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯೇ ಮುಖ್ಯ ಪ್ರಶ್ನೆ.

ನವ-ಉದಾರವಾದಿ ಅರ್ಥಶಾಸ್ತ್ರದ ಆಧಿಪತ್ಯ ಹೆಚ್ಚಿನ ಟಿಪ್ಪಣಿಕಾರರು ಈ ಸಂಗತಿಯನ್ನು ಕಾಣದಂತೆ ತಡೆಯುತ್ತದೆ. ಆದ್ದರಿಂದಲೇ ಅವರು ಯಸ್ ಬ್ಯಾಂಕ್ ಬಿಕ್ಕಟ್ಟನ್ನು ಪ್ರತ್ಯೇಕವಾಗಿ ಬಿಡಿಯಾಗಿಯೇ ನೋಡುತ್ತಾರೆ, ಮತ್ತು ಅದಕ್ಕೆ ಎರ್ರಾಬಿರ್ರಿ ಸಾಲ ನೀಡಿದ್ದೇ ಕಾರಣ ಎನ್ನುತ್ತಾರೆ.

ಪ್ರೋತ್ಸಾಹಧನ ಹೆಚ್ಚಳಕ್ಕೆ ಆಗ್ರಹಿಸಿ ಧರಣಿ
ಜಿಲ್ಲಾಡಳಿತ ಭವನದ ಎದುರು ವಿಮುಕ್ತ ದೇವದಾಸಿಯರ ಪ್ರತಿಭಟನೆ



ವಿಮುಕ್ತ ದೇವದಾಸಿ ಮಹಿಳೆಯರ ಮಾಸಿಕ, ಪ್ರೋತ್ಸಾಹಧನ ಮತ್ತು ದೇವದಾಸಿ ಮಹಿಳೆಯರ ಹಕ್ಕೊತ್ತಾಯಗಳನ್ನು ಬಜೆಟ್‌ನಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿ – ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಕೊಪ್ಪಳ ಜಿಲ್ಲಾ ಸಮಿತಿಯಿಂದ ನಗರದ ಜಿಲ್ಲಾಡಳಿತ ಭವನದ ಎದುರು ಎರಡು ದಿನ ಅಹೋರಾತ್ರಿ ಪ್ರತಿಭಟನೆ ನಡೆಸಲಾಯಿತು.

ಸಂಘದ ಜಿಲ್ಲಾಧ್ಯಕ್ಷೆ ಜಿ. ಹುಲಿಗೆಮ್ಮ ಮಾತನಾಡಿ, ರಾಜ್ಯ ಸರಕಾರ ಮಂಡಿಸಿದ ಬಜೆಟ್‌ನಲ್ಲಿ ವಿಮುಕ್ತ ದೇವದಾಸಿ ಮಹಿಳೆಯರ ಬೇಡಿಕೆಗಳನ್ನು ಕಡೆಗಣಿಸಲಾಗಿದೆ. ದಲಿತ ಹಾಗೂ ವಿಮುಕ್ತ ದೇವದಾಸಿ ಮಹಿಳೆಯರ ಕುಟುಂಬದ ತಲಾ ಆದಾಯ ಹೆಚ್ಚಿಸುವ ಪ್ರಸ್ತಾಪ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಮುಕ್ತ ದೇವದಾಸಿಯರು ಕಷ್ಟದಲ್ಲಿ ಜೀವನ ನಡೆಸುತ್ತಿದ್ದು, ಅವರು ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲು ಕನಿಷ್ಠ ಐದು ಎಕರೆ ನೀರಾವರಿ ಜಮೀನು ನೀಡುವ ಮೂಲಕ ಸರಕಾರ ಸಹಾಯ ಮಾಡಬೇಕು ಎಂಬ ಬೇಡಿಕೆಯ ಮನವಿಯನ್ನು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ ಅವರಿಗೆ ಸಲ್ಲಿಸಲಾಯಿತು.

ಸಂಘಟನೆಯ ಗೌರವಾಧ್ಯಕ್ಷ ಜಿ. ನಾಗರಾಜ, ಲಕ್ಷ್ಮಿ ಕನಕಗಿರಿ, ಸುಂಕಪ್ಪ ಗದಗ, ಮಂಜುನಾಥ ಡಗ್ಗಿ, ದುರ್ಗಮ್ಮ ಶಿವಪುರ, ನಿಂಗಪ್ಪ ಹುಲಿಗೆಮ್ಮ ಪೂಜಾರ, ಸತ್ಯಮ್ಮ ಗಬ್ಬೂರು, ಗಂಗಮ್ಮ ಕಾಮನೂರು ಸೇರಿದಂತೆ ಇತರರು ಇದ್ದರು.

ಬೇಡಿಕೆಗಳು:

- ವಿಮುಕ್ತ ದೇವದಾಸಿಯರಿಗೆ ತಲಾ ಐದು ಎಕರೆ ನೀರಾವರಿ ಜಮೀನು ನೀಡಬೇಕು.
- ವಿಮುಕ್ತ ದೇವದಾಸಿ ಮಹಿಳೆಯರಿಗೆ ಮಾಸಿಕ ಸಹಾಯಧನ 5000ರೂ. ಹೆಚ್ಚಿಸಬೇಕು.
- ವಿಮುಕ್ತ ದೇವದಾಸಿ ಮಹಿಳೆಯರ ಮಕ್ಕಳಿಗೆ ಷರತ್ತಿಲ್ಲದೇ ಪ್ರೋತ್ಸಾಹ ಧನ ನೀಡಬೇಕು.

ಎರಡನೇ ದಿನ ಸಂಜೆ ಜಿಲ್ಲಾಧಿಕಾರಿಗಳು ಆಗಮಿಸಿ ಮನವಿಯನ್ನು ಸ್ವೀಕರಿಸಿದರು. ಬೇಡಿಕೆಗಳ ಕುರಿತು ಚರ್ಚಿಸಲು ಮಾರ್ಚ್ 16 ರಂದು ಸಭೆ ಕರೆಯುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಉಪಸ್ಥಿತರಿದ್ದರು.

ವಿವಿಧ ಸೌಲಭ್ಯ ಒದಗಿಸಲು ಪಟ್ಟು
ಅಕ್ಷರ ದಾಸೋಹ ನೌಕರರ ಸಂಘದಿಂದ ಮನವಿ



ಗಂಗಾವತಿ: ಕನಿಷ್ಠ ವೇತನ ಸೇರಿ ಇತರ ಸೌಲಭ್ಯ ಒದಗಿಸುವಂತೆ ಒತ್ತಾಯಿಸಿ ಸಿಐಟಿಯು ಕಾರ್ಯಕರ್ತರೊಂದಿಗೆ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ತಾಲೂಕು ಸಮಿತಿ ಸದಸ್ಯರು ನಗರದ ಕೃಷ್ಣದೇವರಾಯ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಗಂಗಾವತಿಯ ತಹಶಿಲ್ದಾರ್‌ರವರಿಗೆ ಮನವಿ ಸಲ್ಲಿಸಿದರು. ಸಂಘದ ತಾಲೂಕು ಅಧ್ಯಕ್ಷೆ ಲಕ್ಷ್ಮಿದೇವಿ ಮಾತನಾಡಿ, ವಿದ್ಯಾರ್ಥಿಗಳ ಯೋಗಕ್ಷೇಮದೊಂದಿಗೆ ಅತಿ ಹೆಚ್ಚು ಅವಧಿಯಲ್ಲಿ ಕೆಲಸ ಮಾಡುವ ಬಿಸಿಯೂಟ ನೌಕರರನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸುತ್ತಿದ್ದು, ಬೇಡಿಕೆಗಳನ್ನು ಈಡೇರುತ್ತಿಲ್ಲ. ಕನಿಷ್ಠ ವೇತನ ಯೋಜನೆ ಮತ್ತು ಉದ್ಯೋಗ ಭದ್ರತೆ ಒದಗಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಗೌರವ ಧನ ಹೆಚ್ಚಳದ ನಿರೀಕ್ಷೆ ಹುಸಿಯಾಗಿದೆ. ಯೋಜನೆ ಯಶಸ್ವಿಯಲ್ಲಿ ಬಿಸಿಯೂಟ ನೌಕರರ ಪಾತ್ರ ಮುಖ್ಯವಾಗಿದ್ದು, ಕನಿಷ್ಠ ವೇತನ ಯೋಜನೆ ಜಾರಿಗೊಳಿಸುವಂತೆ ಒತ್ತಾಯಿಸಿದರು. ಸಿಐಟಿಯು ತಾಲೂಕು ಕಾರ್ಯದರ್ಶಿ ನಿರುಪಾದಿ, ಸದಸ್ಯ ಮಂಜುನಾಥ ಡಗ್ಗಿ, ಸಂಘದ ಪದಾಧಿಕಾರಿಗಳಾದ ಅನುಸೂಯಾ, ಶಾಂತಾ, ಗಂಗಮ್ಮ, ಜಯಶ್ರೀ, ಹನುಮಮ್ಮ, ಅನ್ನಪೂರ್ಣ ಇತರರಿದ್ದರು.

ಸ್ಥಳಾಂತರಗೊಂಡ ಕುಟುಂಬಕ್ಕೂ ಹಕ್ಕುಪತ್ರ ವಿತರಿಸಿ

ಗಂಗಾವತಿ ನಗರದ 24ನೇ ವಾರ್ಡ್ ನಿವಾಸಿಗಳಿಗೆ ಹಕ್ಕು ಪತ್ರ ವಿತರಿಸುವಂತೆ ಒತ್ತಾಯಿಸಿ ಡಿವೈಎಫ್ಐ ತಾಲೂಕು ಸಮಿತಿ ಸದಸ್ಯರು ನಗರದ ನಗರಸಭೆ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

24ನೇ ವಾರ್ಡ್‌ನಲ್ಲಿ ಸಮದ್‌ಸಾಬ್ ಲೇಔಟ್‌ನಲ್ಲಿ ಮೀಸಲಿರಿಸಿದ್ದ ಉದ್ಯಾನ ಜಾಗದಲ್ಲಿ ಹಲವು ವರ್ಷಗಳಿಂದ 40 ಕುಟುಂಬಗಳು ವಾಸವಾಗಿದ್ದು, ಇತ್ತೀಚೆಗೆ ನಗರಸಭೆಯಿಂದ ತೆರವುಗೊಳಿಸಿತ್ತು. ಪರ್ಯಾಯ ವ್ಯವಸ್ಥೆ ಕಲ್ಪಿಸುವ ಜತೆಗೆ ಎಲ್ಲ ಕುಟುಂಬಗಳಿಗೂ ಹಕ್ಕು ಪತ್ರ ವಿತರಿಸುವಂತೆ ಒತ್ತಾಯಿಸಿದರು. ಡಿವೈಎಫ್ಐ ತಾಲೂಕು ಅಧ್ಯಕ್ಷ ಸೈಯ್ಯದ್ ಜೀಲಾನಿ, ಖಾದ್ರಿ ಮತ್ತು ವಕ್ಫ್ ಮಂಡಳಿ ಮಾಜಿ ಸದಸ್ಯ ಸೈಯ್ಯದ್ ಅಲಿ ಮಾತನಾಡಿ, ಹಲವು ವರ್ಷಗಳಿಂದ ವಾಸವಾಗಿದ್ದ 40 ಕುಟುಂಬಗಳನ್ನು ನಗರಸಭೆ ಒಕ್ಕಲೆಬ್ಬಿಸಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸದೇ ತೆರವುಗೊಳಿಸಿದ್ದಾರೆ.

ಉದ್ದೇಶಿತ ಜಾಗದಲ್ಲಿ ಪ್ರಭಾವಿಗಳ ಕಟ್ಟಡಗಳಿದ್ದರೂ ಅಧಿಕಾರಿಗಳು ತೆರವುಗೊಳಿಸಿಲ್ಲ. ತಾರತಮ್ಯ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕಿದ್ದು, ತೆರವುಗೊಂಡ ಎಲ್ಲ ಕುಟುಂಬಗಳಿಗೂ ಹಕ್ಕು ನಿವೇಶನ ವಿತರಿಸಬೇಕು. ನಿರ್ಲಕ್ಷಿಸಿದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ತಾಲೂಕು ಸಮಿತಿ ಕಾರ್ಯದರ್ಶಿ ಪ್ರಕಾಶ ಚಿತಗಾರ, ಖಜಾಂಚಿ ರಾಜೇಶ್ವರಿ, ಸದಸ್ಯರಾದ ಕವಿತಾ ರಗಡಪ, ಹಸೀನಾಬೇಗಂ, ರೇಣುಕಾ, ಸೋಫಿಯಾ, ಶೇಖಬಿಬೀ, ರಾಮವ್ವ, ಗೌಸಭಾಷಾ, ಅಬ್ದುಲ್ ವಾಜೀದ್, ಹುಸೇನ್‌ಸಾಬ್ ಇತರರಿದ್ದರು.



ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ



'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 17 ವಿಡಿಯೋಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೋಗಳು ಹೀಗಿವೆ :

* ಪರಿಹಾರ ಘೋಷಿಸಿದ ಪಿಣರಾಯಿ, ಪ್ರಧಾನಿಯವರ ಭಾಷಣದಲ್ಲಿ ಏನಿದೆ? (ಮಾ. 20)
* ಕೋಳಿ ಸಾಕಾಣಿಕೆದಾರರ ನಷ್ಟ ಭರಿಸಲು ಆಗ್ರಹ. (ಮಾ. 18)
* ರಾಯಚೂರು ವಿವಿಗೆ ಸರಕಾರದ ತೂಗುಕತ್ತಿ! (ಮಾ. 18)
* ಕನ್ನಡ ನಾಡಿನ ಸಾಕ್ಷಿ ಪ್ರಜ್ಞೆ ಪಾಟೀಲ್ ಪುಟ್ಟಪ್ಪ ಇನ್ನಿಲ್ಲ (ಮಾ. 17)
* ಕೊರೊನಾ ಕುರಿತು ಜಾಗೃತಿ ಹಾಡು (ಮಾ. 17)
* ಶಾಸಕ ಯತ್ನಾಳ ವಿರುದ್ಧ DHS ಪ್ರತಿಭಟನೆ (ಮಾ. 16)
* ಕೊರೊನಾ ವೈರಸ್ ಅದೊಂದು ವೈರಲ್ ಅಷ್ಟೆ, ಭಯ ಬೇಡ, ಜಾಗೃತಿ ಬೇಕು (ಮಾ. 14)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.

ನಂತರ ಅಲ್ಲಿ ಕಾಣುವ 'Subscribe'ನ್ನು ಕ್ಲಿಕ್ ಮಾಡಿ.

ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೋಟೀಫಿಕೇಶನ್ ಬರುತ್ತದೆ.

ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ಪ್ರೋತ್ಸಾಹಿಸಿ.

ಈಗ ನಡೆಯುತ್ತಿರುವುದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಪಾಲು ಹೆಚ್ಚಿಸಿಕೊಳ್ಳಲು ಪ್ರಮುಖ ತೈಲ ಉತ್ಪಾದಕರಾದ ಸೌದಿ ಮತ್ತು ರಶ್ಯ ನಡುವೆ ಬೆಲೆ ಸಮರ. ಆದರೆ ಅಷ್ಟು ಮಾತ್ರವಲ್ಲ, ಇದರಲ್ಲಿ ಪ್ರಾದೇಶಿಕ-ರಾಜಕೀಯ ರಣನೀತಿಯ ಪಟ್ಟುಗಳು ಸಹ ಇವೆ. ಈ ಎರಡರಲ್ಲೂ ಸಮೀಪದ ಭವಿಷ್ಯದಲ್ಲಿ ಬಹುಶಃ ಅಮೆರಿಕಕ್ಕೆ ಹೆಚ್ಚಿನ ಏಟು ಬೀಳಲಿದೆ.

ತೈಲ ಬೆಲೆ ಕುಸಿತ: ಬೆಲೆ ಸಮರದ ಗುರಿ ಯಾರು?

ಜಗದ ಸುತ್ತ

ವಸಂತರಾಜ ಎನ್.ಕೆ.

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಕುಸಿದಿದೆ. ಇದಕ್ಕೆ ಸೌದಿ ಅರೇಬಿಯದ ನಾಯಕತ್ವದ ಒಪೆಕ್ (ಜಾಗತಿಕ ತೈಲ ಉತ್ಪಾದಕರ) ಕೂಟವು ಕಳೆದ ವಾರ ತೈಲ ಬೆಲೆ ಇಳಿಸಲು ನಿರ್ಧರಿಸಿದ್ದು ಕಾರಣ. ಒಂದೇ ವಾರದಲ್ಲಿ ಶೇ. 30ರಷ್ಟು ಬೆಲೆ ಕುಸಿದಿದೆ. 2014 ಸೆಪ್ಟೆಂಬರ್-ಅಕ್ಟೋಬರ್ ನಲ್ಲಿ ಪ್ರತಿ ಬ್ಯಾರಲಿಗೆ 100 ಡಾಲರ್ ಇದ್ದಿದ್ದು, ಈಗ (ಮಾರ್ಚ್ 18ರಂದು) 24 ಡಾಲರಿಗೆ ಕುಸಿದಿದೆ. ಇದು ಕಳೆದ 17 ವರ್ಷಗಳಲ್ಲಿ ಅತಿ ಕಡಿಮೆ ಬೆಲೆ. ತೈಲದ ಜಾಗತಿಕ ಬೆಲೆ 2018 ಮತ್ತು 2020 ಜನವರಿ ಇದ್ದ (67 ಡಾಲರ್) ಬೆಲೆಯ ಮೂರನೇ ಒಂದು ಭಾಗಕ್ಕೆ ಕುಸಿದಿದೆ.

ಈ ತೈಲ ಬೆಲೆ ಕುಸಿತ ಯಾಕೆ? ಇದು ಸಹಜ ಮಾರುಕಟ್ಟೆ ಏರುಪೇರು ಅಲ್ಲ. ಪ್ರಮುಖ ತೈಲ ಉತ್ಪಾದಕರ ನಡುವೆ ಬೆಲೆ ಸಮರದ ಫಲ. ಸೌದಿ ಅರೇಬಿಯ ನಾಯಕತ್ವದ ಒಪೆಕ್, ರಶ್ಯ ಮತ್ತು ಅಮೆರಿಕ ಗಳ ಮೇಲೆ ಹೂಡಿರುವ ಬೆಲೆ ಸಮರದ ಫಲ. ಹವಾಮಾನ ಬದಲಾವಣೆಗೆ ಕೈಗೊಂಡಿರುವ ಕ್ರಮಗಳು ಮತ್ತು ಕೊರೊನಾ ವೈರಸ್ ಜಾಗತಿಕ ಮಹಾಮಾರಿಯ ಪರಿಣಾಮವಾಗಿ ಉಂಟಾಗಿರುವ ತೈಲದ ಬೇಡಿಕೆ ಕುಸಿತ ಎದುರಿಸಲು ಸೌದಿ-ಒಪೆಕ್ ಉತ್ಪಾದನೆ ಕಡಿತ ಮಾಡಿ ಬೆಲೆ ಇಳಿಸಿದೆ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ವಾಸ್ತವ ಇದಕ್ಕಿಂತ ಇನ್ನೂ ಹೆಚ್ಚು ಸಂಕೀರ್ಣ ಎಂಬುದು ಪ್ರಾದೇಶಿಕ-ರಾಜಕೀಯ ವ್ಯೂಹಗಳ ಪರಿಣತ ವೀಕ್ಷಕರ ಅಭಿಪ್ರಾಯ.

ಮಾರ್ಚ್ ಮೊದಲ ವಾರದಲ್ಲಿ ಆಸ್ಟ್ರಿಯಾದ ರಾಜಧಾನಿ ವಿಯನ್ನಾದಲ್ಲಿ ನಡೆದ ಒಪೆಕ್+ (ಒಪೆಕ್ ಕೂಟ ಮತ್ತು ರಶ್ಯಾದ ಜಂಟಿ ಸಭೆ) ಶೃಂಗಸಭೆಯಲ್ಲಿ ರಶ್ಯಾ ಪ್ರತಿನಿಧಿಯು, ಪ್ರತಿ ದಿನ 15 ಲಕ್ಷ ಬ್ಯಾರೆಲ್ (ಒಪೆಕ್ ದೇಶಗಳಿಂದ 10ಲಕ್ಷ ಮತ್ತು ಇತರ ಉತ್ಪಾದಕರಿಂದ 5 ಲಕ್ಷ) ಉತ್ಪಾದನೆ ಕಡಿತ ಮಾಡುವ ಸೌದಿ ಅರೇಬಿಯದ ಪ್ರಸ್ತಾವಕ್ಕೆ ಒಪ್ಪಲಿಲ್ಲ. ಇದರೊಂದಿಗೆ ರಶ್ಯಾ ಒಪೆಕ್ ಜೊತೆಗಿದ್ದ 3 ವರ್ಷಗಳ ಒಪ್ಪಂದ ಮುರಿದು ಬಿದ್ದಂತಾಯಿತು. ತೈಲ ಉತ್ಪಾದನೆ ಕಡಿತ ಸಮಸ್ಯೆಗೆ ಪರಿಹಾರ ಅಲ್ಲ ಎಂಬುದು ರಶ್ಯಾದ ನಿಲುವು. ಅದೇ ಸಮಯದಲ್ಲಿ ಒಪೆಕ್+ ಕೂಟದಿಂದ ಹೊರಬರುವುದು ರಶ್ಯಾದ ಉದ್ದೇಶವಾಗಿರಲಿಲ್ಲ. ಈಗಿರುವ ಉತ್ಪಾದನೆ ಪ್ರಮಾಣವನ್ನು ಒಪ್ಪಂದವನ್ನು ಮುಂದುವರೆಸಿ ಬೆಲೆ ಪರಿಸ್ಥಿತಿ ಗಮನಿಸುತ್ತಾ ಮುಂದಿನ ಕ್ರಮಗಳನ್ನು ಒಟ್ಟಾಗಿ ಕೈಗೊಳ್ಳಬೇಕು. ಕೊರೊನಾ ವೈರಸ್ ಮಹಾಮಾರಿಯಿಂದಾಗಿ ಜಾಗತಿಕ ಆರ್ಥಿಕ ಸ್ಥಿತಿ ಹದಗೆಟ್ಟಿರುವಾಗ ಅಸ್ಥಿರತೆ ತರುವ ಯಾವುದೇ ಕ್ರಮ ಕೈಗೊಳ್ಳಬಾರದು. ಹಿಂದಿನಂತೆ ತೈಲ ಮಾರುಕಟ್ಟೆಯ ಭದ್ರತೆಯನ್ನು ಒಪೆಕ್+ ಕಾಯ್ದುಕೊಳ್ಳಬೇಕು ಎಂಬುದು ರಶ್ಯಾದ ನಿಲುವಾಗಿತ್ತು. ಆದರೆ ಶೃಂಗಸಭೆ ಮುಗಿಯುತ್ತಿದ್ದಂತೆ ಸೌದಿ-ಒಪೆಕ್ ಬೆಲೆ ಇಳಿಕೆಯನ್ನು ಮಾಡಿತು. ಇದರ ಉದ್ದೇಶ ರಶ್ಯಾದ ವಿರುದ್ಧ ಬೆಲೆ ಸಮರ ಸಾರುವುದು ಆಗಿತ್ತು.

ಶೃಂಗಸಭೆಯ ಮೊದಲೇ ರಶ್ಯಾ ಕಳೆದ ಕೆಲವು ವರ್ಷಗಳಲ್ಲಿ ಸೌದಿ-ಒಪೆಕ್ ನಿರ್ಣಯಗಳ ಹಿಂದಿರುವ ಕಾರಣಗಳ ಬಗ್ಗೆ ವಿಶ್ಲೇಷಣೆ ನಡೆಸಿತ್ತು. ಸೌದಿ ಸಾಮಾನ್ಯವಾಗಿ ಅಮೆರಿಕದ ಹಿತಾಸಕ್ತಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದು ಅದು ಡಬ್ಬಲ್ ಗೇಮ್ ಆಡುತ್ತಿದೆ. ಸೌದಿ-ಅಮೆರಿಕ ಸೇರಿಕೊಂಡು ತೈಲ ಬೆಲೆ ಮತ್ತು ವಿನಿಮಯ ದರಗಳನ್ನು ನಿರ್ಧರಿಸುವಲ್ಲಿ ತಾವು ಜಾಗತಿಕ ಮಾರುಕಟ್ಟೆ ಪಾಲು ಹೆಚ್ಚಿಸಿಕೊಂಡು ರಶ್ಯದ ಪಾಲನ್ನು ಕಡಿಮೆ ಮಾಡುವ ಹುನ್ನಾರ ನಡೆಸಿದೆ, ಎಂದು ಸಂದೇಹಿಸಿತ್ತು. ಶೃಂಗಸಭೆಯ ಮೊದಲು ಸೌದಿ ಯುವರಾಜನಿಗೆ ಅಧ್ಯಕ್ಷ ಟ್ರಂಪ್ ಕರೆ ಮಾಡಿ ಮಾತನಾಡಿದ್ದಾಗಿ ವರದಿಯಾಗಿತ್ತು.

ರಶ್ಯಾ ಸೇರಿ 2016ರಲ್ಲಿ ಆದ ಒಪೆಕ್+ ಕೂಟದಿಂದ ಸೌದಿ ಮತ್ತು ಅಮೆರಿಕಕ್ಕೆ ಹೆಚ್ಚು ಪ್ರಯೋಜನವಾಗಿತ್ತು. ಒಪೆಕ್+ ಕೂಟದಿಂದಾಗಿ ತೈಲ ಬೆಲೆ ಏರಲಾರಂಭಿಸಿತ್ತು. ಇದರಿಂದಾಗಿ ಹೆಚ್ಚಿನ ಉತ್ಪಾದನೆ ಖರ್ಚು ಇರುವ ಅಮೆರಿಕದ ಶೇಲ್ ತೈಲಕ್ಕೆ ಜಾಗತಿಕ ಮಾರುಕಟ್ಟೆ ದೊರಕಿತ್ತು. 2016ರ ನಂತರ ಅಮೆರಿಕದ ತೈಲ ರಫ್ತು 5 ಪಟ್ಟು ಹೆಚ್ಚಿತ್ತು. ಉತ್ಪಾದನೆ ಪ್ರತಿ ದಿನ 89 ಲಕ್ಷ ಬ್ಯಾರೆಲುಗಳಿಂದ 131 ಲಕ್ಷ ಬ್ಯಾರೆಲುಗಳಿಗೆ ಏರಿತ್ತು. ಸೌದಿ ಅರೇಬಿಯದ ಪ್ರಮುಖ ಕಂಪನಿ ಅರ್ಮಾಕೊ ತನ್ನ ಶೇರುಗಳನ್ನು ಮಾರುಕಟ್ಟೆಗೆ ತಂದು ಇನ್ನೂ ಹೆಚ್ಚಿನ ನಿಧಿ ಸಂಗ್ರಹಿಸಲು ನಿರ್ಧರಿಸಿದ್ದು ಅದರ ಲಾಭ ಹೆಚ್ಚಿದ್ದರ ಸೂಚಕವಾಗಿತ್ತು. ಆದರೆ ಇದೇ ಅವಧಿಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ರಶ್ಯಾದ ಮಾರುಕಟ್ಟೆ ಪಾಲು ಕಡಿಮೆಯಾಗುತ್ತಿತ್ತು.

ಪರಿಸ್ಥಿತಿ ಹೀಗಿರುವಾಗ ತೈಲ ಬೆಲೆಯನ್ನು ಹೆಚ್ಚಿನ ಮಟ್ಟದಲ್ಲಿ ಇಡುವುದೆಂದರೆ ಅಮೆರಿಕದ ಶೇಲ್ ತೈಲದ ಹೆಚ್ಚಿನ ಉತ್ಪಾದನಾ ವೆಚ್ಚಕ್ಕೆ ಸಬ್ಸಿಡಿ ಕೊಟ್ಟಂತೆ. ಅದನ್ನು ಮುಂದುವರೆಸಬಾರದು. ರಶ್ಯಾದ ಬಳಿ ತೈಲ ಸಂಪನ್ಮೂಲ ಸಾಕಷ್ಟಿದ್ದು ಮತ್ತು ಅದರ ಉತ್ಪಾದನಾ ವೆಚ್ಚ ಸಾಕಷ್ಟು ಕಡಿಮೆ ಇದ್ದು ಅದು ಕಡಿಮೆ ಮಟ್ಟದ ತೈಲ ಬೆಲೆಗಳನ್ನು ತಾಳಿಕೊಳ್ಳಬಲ್ಲದು. ಸೌದಿ ಅರೇಬಿಯದ ಉತ್ಪಾದನಾ ವೆಚ್ಚ ಸಹ ಕಡಿಮೆ ಇದ್ದರೂ, ಅದರ ಆರ್ಥಿಕ ಪೂರ್ಣವಾಗಿ ತೈಲ ವ್ಯಾಪಾರದ ಮೇಲೆ ಅವಲಂಬಿತವಾಗಿದ್ದು ಅದು ಕಡಿಮೆ ಮಟ್ಟದ ತೈಲ ಬೆಲೆಗಳನ್ನು ದೀರ್ಘ ಕಾಲ ತಾಳಿಕೊಳ್ಳಲಾಗದು. ಆದ್ದರಿಂದ ಸೌದಿ ಅರೇಬಿಯ ತೈಲ ಬೆಲೆ ಕಡಿತ ಮಾಡಿ ಬೆಲೆ ಸಮರ ಹೂಡಿದರೆ ಅಮೆರಿಕದ ರಫ್ತು ಕುಸಿಯುತ್ತದೆ. ಆದರೆ ಸೌದಿ ಬಹಳ ಕಾಲ ತಾಳಿಕೊಳ್ಳದು ಎಂಬುದು ರಶ್ಯಾದ ಅಂದಾಜಾಗಿತ್ತು. ರಶ್ಯ ಇವೆಲ್ಲವನ್ನು ಅಂದಾಜು ಮಾಡಿಯೇ ಶೃಂಗಸಭೆಯಲ್ಲಿ ಗಟ್ಟಿ ನಿಲುವು ತೆಗೆದುಕೊಂಡಿದೆ. ಅದು ಸೌದಿ ಹರಿಯಬಿಡುವ ಬೆಲೆ ಸಮರಕ್ಕೆ ಸಿದ್ಧವಾಗಿಯೇ ಬಂದಿದೆ ಎಂದು ಪರಿಣತರು ಹೇಳಿದ್ದಾರೆ.



ಸಮೀಪದ ಭವಿಷ್ಯದಲ್ಲಿ ಸೌದಿ ಮತ್ತು ರಶ್ಯ ಎರಡಕ್ಕೂ ನಷ್ಟವಾದರೂ ಹೆಚ್ಚಿನ ಹೊಡೆತ ಬೀಳುವುದು ಅಮೆರಿಕಕ್ಕೆ. ಅದರ ಜಾಗತಿಕ ತೈಲ ಮಾರುಕಟ್ಟೆ ಪಾಲು ಕುಸಿದು ಮಾಯವಾಗುತ್ತದೆ. ಇದರಲ್ಲಿ ಇವೆರಡೂ ದೇಶದ ಹಿತಾಸಕ್ತಿಯೂ ಅಡಕವಾಗಿದೆ. ಹೀಗಾಗಿ ಇದು ಬರಿಯ ಸೌದಿ-ರಶ್ಯಾ ತೈಲ ಬೆಲೆ ಸಮರ ಮಾತ್ರವಲ್ಲ. ಅಮೆರಿಕದ ಮಾರುಕಟ್ಟೆ ಮತ್ತೆ ಕಸಿದುಕೊಳ್ಳಲು ಸೌದಿ-ರಶ್ಯಾ ಗಳ ಜಂಟಿ ಪ್ರಾಜೆಕ್ಟೂ ಸಹ ಇರಬಹುದು. ಅಮೆರಿಕದ ಅಧ್ಯಕ್ಷ ಟ್ರಂಪ್ ರಶ್ಯದ ಇಂಧನ ಪ್ರಾಜೆಕ್ಟುಗಳನ್ನು ರಾಜಕೀಯ-ಆರ್ಥಿಕ ಅಸ್ತ್ರಗಳನ್ನು ಬಳಸಿ ಕೆಡವಲು ಪ್ರಯತ್ನಿಸುವುದಕ್ಕೆ ಕಡಿವಾಣ ಹಾಕಲು ರಶ್ಯ ನಿರ್ಧರಿಸಿರುವಂತೆ ಕಾಣುತ್ತದೆ. ಸೈಬೀರಿಯ-ಜರ್ಮನಿ ಗ್ಯಾಸ್ ಪೈಪ್ ಲೈನ್ ಮತ್ತು ವೆನೆಜುವೇಲಾದಲ್ಲಿ ರಶ್ಯನ್ ತೈಲ ಪ್ರಾಜೆಕ್ಟುಗಳನ್ನು ನಿಲ್ಲಿಸಲು ದಿಗ್ಬಂಧನವನ್ನು ಟ್ರಂಪ್ ಬಳಸಿದ್ದರು. ಆದ್ದರಿಂದ ಅಮೆರಿಕದ ತೈಲ ರಫ್ತು ನಷ್ಟಗೊಳಿಸುವುದು ಅದರ ಸಮೀಪ ಭವಿಷ್ಯದ ಗುರಿ. ಅದರ ಜೊತೆಗೆ ಈಗಾಗಲೇ ಡೋಲಾಯಮಾನವಾಗಿರುವ ಅದರ ಆರ್ಥಿಕಕ್ಕೆ ಮಾರಕ ಏಟು ಕೊಡುವುದು ರಶ್ಯಾದ ಉದ್ದೇಶವಿದ್ದಂತಿದೆ. ಅದು ಈಡೇರಿದ ಮೇಲೆ ಸೌದಿ ಜೊತೆ ಪುನಃ ಒಪೆಕ್ ಸೇರಿ ಅದು ಬೆಲೆ ಏರಿಸಬಹುದು. ಅಷ್ಟರ ಮಟ್ಟಿಗೆ ಸೌದಿ ಜತೆ ರಶ್ಯ ಸಂಬಂಧ ಉಳಿಸಿಕೊಂಡಿದೆ ಎನ್ನಲಾಗಿದೆ.

ಈಗ ನಡೆಯುತ್ತಿರುವುದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಪಾಲು ಹೆಚ್ಚಿಸಿಕೊಳ್ಳಲು ಪ್ರಮುಖ ತೈಲ ಉತ್ಪಾದಕರಾದ ಸೌದಿ ಮತ್ತು ರಶ್ಯ ನಡುವೆ ಬೆಲೆ ಸಮರ. ಆದರೆ ಅಷ್ಟು ಮಾತ್ರವಲ್ಲ, ಇದರಲ್ಲಿ ಪ್ರಾದೇಶಿಕ-ರಾಜಕೀಯ ರಣನೀತಿಯ ಪಟ್ಟುಗಳು ಸಹ ಇವೆ. ಎರಡರಲ್ಲೂ ಸಮೀಪದ ಭವಿಷ್ಯದಲ್ಲಿ ಬಹುಶಃ ಅಮೆರಿಕಕ್ಕೆ ಹೆಚ್ಚಿನ ಏಟು ಬೀಳಲಿದೆ.

ಕೊರೊನಾವೈರಸ್ ಮಹಾಮಾರಿ: ಇರಾನ್ ದಿಗ್ಬಂಧನ ತೆಗೆಯಲು ಆಗ್ರಹ

ಇರಾನ್ ಕೊರೊನಾವೈರಸ್ ಮಹಾಮಾರಿಯಿಂದ ಮೂರನೇ ಅತಿ ಹೆಚ್ಚು ಪೀಡಿತವಾದ ದೇಶವಾಗಿದ್ದು, ಅದರ ವಿರುದ್ಧ ಕ್ರಮ ಕೈಗೊಳ್ಳಲು ಅನುವಾಗುವಂತೆ, ಅಮೆರಿಕ ಅದರ ಮೇಲೆ ವಿಧಿಸಿರುವ ಕಟುವಾದ ಆರ್ಥಿಕ ದಿಗ್ಬಂಧನದ ಕ್ರಮಗಳನ್ನು ಹಿಂತೆಗೆಯಬೇಕೆಂದು ಹಲವು ವಿಭಾಗಗಳಿಂದ ಆಗ್ರಹಪೂರ್ವಕ ಕರೆ ನೀಡಲಾಗುತ್ತಿದೆ. ಇರಾನ್ ನಲ್ಲಿ ಕೊರೊನಾವೈರಸ್ ಸೋಂಕು ತಗಲಿದವರ ಸಂಖ್ಯೆ (ಮಾ. 17ರ ಹೊತ್ತಿಗೆ) 16 ಸಾವಿರ ದಾಟಿದ್ದು ಸಾವುಗಳ ಸಂಖ್ಯೆ 1000 ಸಮೀಪಿಸಿದೆ. ಪಶ್ಚಿಮ ಏಶ್ಯಾದಲ್ಲೆ ಉತ್ತಮ ವೈದ್ಯಕೀಯ ಸೇವೆ ಹೊಂದಿರುವ ಇರಾನ್ ನ ವೈದ್ಯಕೀಯ ವ್ಯವಸ್ಥೆ ಅಮೆರಿಕದ ಆರ್ಥಿಕ ದಿಗ್ಬಂಧನದಿಂದಾಗಿ ದುರ್ಭರ ಸ್ಥಿತಿಯಲ್ಲಿದೆ. ಅಮೆರಿಕದ ಆರ್ಥಿಕ ದಿಗ್ಬಂಧನಗಳು ಸೃಷ್ಟಿಸಿರುವ ವೈದ್ಯಕೀಯ ಸಲಕರಣೆ, ಔಷಧಿ ಇತ್ಯಾದಿಗಳ ತೀವ್ರ ಕೊರತೆಯಿಂದಾಗಿ ಇರಾನ್ ನ ವೈದ್ಯಕೀಯ ವ್ಯವಸ್ಥೆ ಸಾಮಾನ್ಯ ಸ್ಥಿತಿಯನ್ನು ಸಹ ನಿಭಾಯಿಸಲಾಗದ ದುಸ್ಥಿತಿಯಲ್ಲಿದೆ. ಕೊರೊನಾವೈರಸ್ ಸೋಂಕು ತಗಲಿದವರ ಮಹಾಪೂರದ ಅಸಾಮಾನ್ಯ ಸ್ಥಿತಿಯನ್ನು ಎದುರಿಸುವ ಸ್ಥಿತಿಯಲ್ಲಿ ಅದು ಖಂಡಿತ ಇಲ್ಲ. ಕೋಟಿಗಟ್ಟಲೆ ಮುಖಗವುಸು (ಮಾಸ್ಕ್) ಗಳನ್ನು ಅದು ತುರ್ತಾಗಿ ಆಮದು ಮಾಡಬೇಕಾಗಿದೆ. ಆದರೆ ದಿಗ್ಬಂಧನದಿಂದಾಗಿ ಅದು ಸಾಧ್ಯವಾಗುತ್ತಿಲ್ಲ. ಅದು ಕೊರೊನಾವೈರಸ್ ವಿರುದ್ಧ ಹೋರಾಡುವ ಸ್ಥಿತಿಯಲ್ಲಿ ಇಲ್ಲ. ಅಮೆರಿಕ ಇಂತಹ ಪರಿಸ್ಥಿತಿಯಲ್ಲೂ ಆರ್ಥಿಕ ದಿಗ್ಬಂಧನಗಳನ್ನು ಮುಂದುವರೆಸಿರುವುದನ್ನು ಇರಾನಿನ ವಿದೇಶ ಸಚಿವ "ಮೆಡಿಕಲ್ ಭಯೋತ್ಪಾದನೆ" ಮತ್ತು "ಅನೈತಿಕ' ಕ್ರಮ ಎಂದು ಕರೆದಿದ್ದಾರೆ.

ದಿಗ್ಬಂಧನ ಔಷಧಿಗೆ ಅನ್ವಯವಾಗುವುದಿಲ್ಲ ಎಂದು ಅಮೆರಿಕ ಹೇಳುತ್ತದೆ. ಆದರೆ ವಾಸ್ತವದಲ್ಲಿ ಇರಾನಿಗೆ ಯಾವುದೇ ವೈದ್ಯಕೀಯ ನೆರವು ನೀಡುವ ಕಂಪನಿಗಳ ಅಥವಾ ಸ್ವಿಸ್ ಮಾನವೀಯ ಸಂಸ್ಥೆಗಳ ಮೇಲೂ ನಿರ್ಬಂಧ ಹೇರುವ ಮೂಲಕ ಔಷಧಿ ಪೂರೈಕೆಯಾಗದಂತೆ ನೋಡಿಕೊಳ್ಳುತ್ತಿದೆ. ವಿದೇಶದಲ್ಲಿರುವ ಇರಾನ್ ನ ಹಣಕಾಸು ಮೂಲಗಳನ್ನು ಬ್ಲಾಕ್ ಮಾಡುವ ಮೂಲಕ ಅದು ಯಾವುದೇ ತುರ್ತು ಖರೀದಿ ಮಾಡದಂತೆ ಮಾಡಿದೆ ಎಂದು ಇರಾನ್ ಸರ್ಕಾರದ ಮೂಲಗಳು ತಿಳಿಸಿವೆ.


ಅಮೆರಿಕದ ಮತ್ತು ಜಗತ್ತಿನ ಎಲ್ಲೆಡೆ ಹಲವಾರು ಮಾನವೀಯ ಧೋರಣೆಯ ಎನ್.ಜಿ.ಒ ಗಳು, ಚಳುವಳಿಗಳು, ಪ್ರಗತಿಪರ ವ್ಯಕ್ತಿಗಳು ಸಂಘಟನೆಗಳು ಕೊರೊನಾವೈರಸ್ ಮಹಾಮಾರಿಯಿಂದ ಸಾವಿರಾರು ಜೀವಗಳನ್ನು ರಕ್ಷಿಸುವ ದೃಷ್ಟಿಯಿಂದ ಇರಾನ್ ಮೇಲಿನ ದಿಗ್ಬಂಧನ ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿವೆ, ಮನವಿ ಮಾಡಿವೆ. ಅಧ್ಯಕ್ಷ ಟ್ರಂಪ್ ಇದಕ್ಕೆಲ್ಲ ಸ್ಪಂದಿಸುವ ವ್ಯಕ್ತಿಯಲ್ಲ ಎಂದು ಅವರಿಗೆಲ್ಲ ಗೊತ್ತಿರುವುದರಿಂದ ಅವರಲ್ಲಿ ಹಲವರು ಈಗಾಗಲೇ ವೈದ್ಯಕೀಯ ಉಪಕರಣ, ಔಷಧಿ ಮತ್ತಿತರ ಕೊರೊನಾವೈರಸ್ ಮಹಾಮಾರಿಯ ವಿರುದ್ಧ ಹೋರಾಟಕ್ಕೆ ಬೇಕಾಗುವ ಸಲಕರಣೆಗಳ ಉತ್ಪಾದಕರು ಹಂಚಿಕೆದಾರರು ಅಮೆರಿಕದ ದಿಗ್ಬಂಧನ ಧಿಕ್ಕರಿಸಿ ಇವನ್ನು ಇರಾನಿಗೆ ಕಳಿಸಲು ಮನವಿ ಮಾಡಿದ್ದಾರೆ. ಇದರ ಸುತ್ತ ಜಾಗತಿಕ ಚಳುವಳಿಯನ್ನು ಹರಿಯಬಿಡಲು ಪ್ರಯತ್ನಿಸುತ್ತಿದ್ದಾರೆ.

ಅಮೆರಿಕದ ದಿಗ್ಬಂಧನವನ್ನು ಧಿಕ್ಕರಿಸಿ ಚೀನಾ ಈಗಾಗಲೇ ಇರಾನಿಗೆ ವೈದ್ಯಕೀಯ ನೆರವು ಕಳಿಸುತ್ತಾ ಬಂದಿದೆ. ಅಮೆರಿಕಕ್ಕೆ ದಿಗ್ಬಂಧನವನ್ನು ಹಿಂತೆಗೆಯಬೇಕೆಂದು ಸಹ ಅದು ಆಗ್ರಹಪಡಿಸಿದೆ. ರಶ್ಯ ಸಹ ಅದೇ ಆಗ್ರಹವನ್ನು ಮಾಡಿದೆ. "ಜಾಗತಿಕ ಮಹಾಮಾರಿಯ ಸಮಯ, ಪ್ರಾದೇಶಿಕ-ರಾಜಕೀಯ ಮೇಲಾಟದಲ್ಲಿ ತೊಡಗುವ ಸಮಯವಲ್ಲ. ಅದೂ ಯಾವುದೇ ಆಧಾರವಿಲ್ಲದ ತನ್ನ ಹಿತಾಸಕ್ತಿ ಕಾಪಾಡಲು ಅಮೆರಿಕದಲ್ಲಿ ಉತ್ಪಾದಿಸಲಾದ ಆಪಾದನೆಗಳನ್ನು ಮಾಡುತ್ತಾ ಕೂಡುವ ಸಮಯವಲ್ಲ" ಎಂದು ರಶ್ಯದ ವಿದೇಶ ಸಚಿವಾಲಯ ಹೇಳಿದೆ. ಇರಾನಿನ ಕೊರೊನಾವೈರಸ್ ಮಹಾಮಾರಿಗೆ ಬಲಿಯಾದವರಲ್ಲಿ ಅಮೆರಿಕದ ದಿಗ್ಬಂಧನಕ್ಕೆ ಬಲಿಯಾದವರೇ ಹೆಚ್ಚು. ಅದನ್ನು ಹಿಂತೆಗೆಯದಿದ್ದರೆ ಅದರ ಬಲಿಗಳ ಸಂಖ್ಯೆ ಹೆಚ್ಚಲಿದೆ ಎಂದು ಖಾರವಾಗಿ ಪ್ರತಿಕ್ರಿಯಿಸಿದೆ.

JANASHAKTHI KANNADA VARA PATRIKE March 23-29, 2020 Price: Rs. 10/- Date of Publication: 20 March 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಹೋರಾಟಗಾರನೊಬ್ಬನ ಹೆಜ್ಜೆಗಳು...

ಕೆ. ಮಹಾಂತೇಶ್



ಭಾರತದ ನೆಲವನ್ನು ಬ್ರಿಟಿಷರಿಂದ ವಿಮೋಚನೆಗೊಳಿಸಲು ಈ ದೇಶದ ಮುಸ್ಲಿಂರು ಮಾಡಿದ ತ್ಯಾಗ ಬಲಿದಾನಕ್ಕೆ ಸಾವಿರ ಸಾಕ್ಷಿಗಳಿವೆ. ದುರಂತವೆಂದರೆ ಹುಸಿ ದೇಶಪ್ರೇಮಿಗಳ ಇವತ್ತಿನ ಆರ್ಭಟದಲ್ಲಿ ಆ ಎಲ್ಲಾ ಸಾಕ್ಷಿಗಳು ಮಣ್ಣಲ್ಲಿ ಮಣ್ಣಾಗುವ ಸಾಧ್ಯತೆಗಳಿವೆ. ಹಾಗೆಯೇ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ಜೊತೆ ಜೊತೆಯಲ್ಲಿಯೇ ಬ್ರಿಟಿಷರು ಮತ್ತು ದೇಶಿಯ ಆಳರಸರು ಹಾಗೂ ಅವರ ಲಾಭಬಡುಕ ಶೋಷಕರು ಹರಿಯಬಿಟ್ಟ ಶೋಷಣೆಯ ವಿರುದ್ದ ಕಮ್ಯೂನಿಸ್ಟರ ನೇತೃತ್ವದಲ್ಲಿ ನಡೆದ ಸಂಘರ್ಷಮಯ ಹೋರಾಟದಲ್ಲೂ ಮುಸ್ಲಿಂಮರ ತ್ಯಾಗ ಬಲಿದಾನ ಸ್ಪೂರ್ತಿ ನೀಡುವಂತದ್ದು. ಸ್ವಾತಂತ್ರ್ಯದ ಬಳಿಕಾವೂ ಇಂತಹ ಸಹಸ್ರಾರು ಹೋರಾಟಗಳು ಈ ಮಣ್ಣಿನಲ್ಲಿ ಸಾಗಿಬಂದಿವೆ ಮತ್ತು ಈಗಲೂ ವಿವಿಧ ಸ್ವರೂಪಗಳಲ್ಲಿ ಸಾಗುತ್ತಲೇ ಇವೆ. ಆದರೆ ಅಂದಿನ ಆ ಕಾಲಘಟ್ಟಕ್ಕೆ ತಕ್ಕನಾಗಿ ನಡೆಯುವ ಅಂತಹ ಸಂಘರ್ಷಗಳು ಕಾಲಾನುಕ್ರಮ ಅದರ ಸ್ಪೂರ್ತಿಗಳನ್ನು ಕಳೆದುಕೊಂಡು ಕಣ್ಮರೆಯಾಗುತ್ತವೆ. ಆದರೆ ಅಂತಹುಗಳಲ್ಲಿ ಕೆಲವುಗಳು ಮಾತ್ರವೇ ದಾಖಲೆಗಳಾಗಿ ಉಳಿದು ಭವಿಷ್ಯದ ಪೀಳಿಗೆಗೆ ಒಂದು ಇತಿಹಾಸವನ್ನು ಪರಿಚಯಿಸಲು ಸಹಾಯಮಾಡುತ್ತವೆ. ಅಂತಹ ಪ್ರಯತ್ನಕ್ಕೆ ಇತ್ತೀಚಿಗೆ ಸೇರ್ಪಡೆಯಾಗಿರುವುದು ಕಮ್ಯೂನಿಸ್ಟ್ ಕಾರ್ಯಕರ್ತನಾಗಿ ಹಲವು ದಶಕಗಳ ಕಾಲ ದುಡಿದ ಇಮ್ತಿಯಾಜ್ ಹುಸೇನ್ ಅವರ "ಹೆಜ್ಜೆ ಗುರುತುಗಳು" ಎನ್ನುವ ಆತ್ಮಕಥೆ.

ಇಮ್ತೀಯಾಜ್ ಹುಸೇನ್, ದಾವಣಗೆರೆ ಕಮ್ಯೂನಿಸ್ಟ್ ಚಳವಳಿಯಲ್ಲಿ ಒಡ ಮೂಡಿದ ಒಬ್ಬ ಹೋರಾಟದ ಕಾರ್ಯಕರ್ತ. ನಮ್ಮ ದೇಶದ ಕಮ್ಯೂನಿಸ್ಟ್ ಚಳವಳಿಯ ದಂತಕಥೆ ಎಂದೇ ನಾವೆಲ್ಲ ಪ್ರೀತಿಸುವ ಅಮೀರ್ ಹೈದರ್‌ಖಾನ್ ಅವರ ಹೋರಾಟದ ಬದುಕೇ ಒಂದು ರೋಚಕ ಮತ್ತು ಸ್ಪೂರ್ತಿದಾಯಕ. ಅವರಂತೆ ಹುಟ್ಟಿನಲ್ಲಿ ಮುಸ್ಲಿಂರಾದರೂ ನಂತರ ಬಡಜನರ ಚಳವಳಿಗಳಲ್ಲಿ ಭಾಗಿಗಳಾಗುವ ಮೂಲಕ ಕಮ್ಯೂನಿಸ್ಟ್ ನಾಯಕರಾಗಿ ಬೆಳೆದವರು ದೇಶದ ಉದ್ದಗಲಕ್ಕೂ ಸಿಗುತ್ತಾರೆ. ಹೀಗೆ ಕಮ್ಯೂನಿಸ್ಟ್ ಚಳವಳಿಗೆ ಆಕರ್ಷಣೆಗೊಳಗಾದ ಬಹುತೇಕ ಮುಸ್ಲಿಂ ನಾಯಕರ ಸಾಮಾಜಿಕ ಹಾಗೂ ಆರ್ಥಿಕ ಬದುಕು ಆರಂಭಗೊಳ್ಳುವುದು ಹೆಚ್ಚು ಕಡಿಮೆ ಒಂದೇ ತೆರನಾಗಿಯೇ. ಹುಟ್ಟು ಬಡತನ, ಸದಾ ಬೆನ್ನಿಗಂಟಿಕೊಂಡ ಹಸಿವು, ಭವಿಷ್ಯದ ಬದುಕಿಗಾಗಿ ಊರಿಂದೂರಿಗೆ ಅಲೆದಾಟ, ಎಷ್ಟೇ ದುಡಿದರೂ ಕೊನೆಗಾಣದ ಶೋಷಣೆ ಅಂತಿಮವಾಗಿ ಆಕಸ್ಮಿಕವಾದ ತಿರುವುಗಳಲ್ಲಿ ಸಿಕ್ಕು ಕಮ್ಯೂನಿಸ್ಟ್‌ನಾಗುವುದು ಆ ಮೂಲಕ ಜನಚಳವಳಿ ನಾಯಕರಾಗಿ ಹೋರಾಟ ಹಾಗೂ ಸಂಘರ್ಷದ ಬದುಕು. ಹೆಚ್ಚು ಕಡಿಮೆ ಇದೇ ಹಾದಿಯಲ್ಲಿ ಸಾಗಿ ಬಂದು ಕಮ್ಯೂನಿಸ್ಟ್ ಪಕ್ಷ ಸೇರಿದವರು ಇಮ್ತಿಯಾಜ್ ಹುಸೇನ್. ಅದಾಗಲೇ ಬೆಳೆದಿದ್ದ ಕಮ್ಯೂನಿಸ್ಟ್ ಪಕ್ಷ ಮತ್ತು ನಾಯಕರ ನೆರಳಿನಲ್ಲಿಯೇ ಇಮ್ತೀಯಾಜ್ ಹುಸೇನ್ ತಮ್ಮ ಕೆಲಸ ಆರಂಭಿಸಿದ್ದರಿಂದಲೋ ಅಥವಾ ಅವರ ಸಾಮಾರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲವೋ ಗೊತ್ತಿಲ್ಲ ಒಟ್ಟಿನಲ್ಲಿ ಇಮ್ತಿಯಾಜ್ ಹುಸೇನ್ ಇತರೆ ಇತರೆ ಮುಸ್ಲಿಂ ಮುಖಂಡರಂತೆ ರಾಜ್ಯ ಹಾಗೂ ದೇಶ ಮಟ್ಟದ ನಾಯಕರಾಗಲಿಲ್ಲ ನಿಜ, ಆದರೆ ತಳಮಟ್ಟದಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿರುವ ನೂರಾರು ಜನರಿಗಂತೂ ಒಂದು ಮಾರ್ಗದರ್ಶಿ ಕೈಪಿಡಿಯಂತಿದೆ ಅವರ ಆತ್ಮಕಥೆ "ಹೆಜ್ಜೆ ಗುರುತುಗಳು".

ಕೋಟೆ ನಗರ ಚಿತ್ರದುರ್ಗದ ಸಂತೆ ಹೊಂಡದ ಸಮೀಪದ ಒಂದು ಬಡತನವೇ ಹೊದ್ದು ಮಲಗಿದ್ದ ಮನೆಯಲ್ಲಿ ಜನನ. ಕೇವಲ ಹಬ್ಬ ಹರಿದಿನಗಳಲ್ಲಿ ಬಟ್ಟೆ ಹೋಲಿದರಷ್ಟೇ ತುತ್ತು ಅನ್ನ ಗತಿ ಎನ್ನುವ ಪರಿಸ್ಥಿತಿಯಲ್ಲೂ ಹದಿಮೂರು ಜನ ಮಕ್ಕಳನ್ನು ಹುಟ್ಟಿಸಿಕೊಂಡ ತಂದೆತಾಯಿ, ಅವ್ವ ಕಟ್ಟುತ್ತಿದ್ದ ಬೀಡಿ ಕೆಲಸದಿಂದ ಮಕ್ಕಳ ಅರೆ ಹೊಟ್ಟೆಯೂ ಭರ್ತಿಯಾಗದಿದ್ದರೂ ಹೊಡೆದು ಬಡಿದಾದರೂ ಸರಿಯೇ ಮಕ್ಕಳನ್ನು ಶಾಲೆಗೆ ದೂಡುವ ಅವಳ ಹಠ, ಆದರೆ ಮಕ್ಕಳಿಗೆ ಶಾಲೆಯಲ್ಲಿ ಸಿಗುವ ಹಾಲು ಉಪ್ಪಿಟ್ಟಿನ ಮೇಲಷ್ಟೇ ಆಶೆ. ಪರಿಣಾಮ ಶಾಲೆಯಲ್ಲಿ ಫೇಲು ಸಿನಿಮಾ ಹುಚ್ಚು, ಅದರಿಂದಾಗಿ ಸಿನಿಮಾ ಟಾಕೀಸ್‌ನಲ್ಲಿ ಕೆಲ ಕಾಲ ಬಿಟ್ಟಿ ದುಡಿಮೆ. ಕೊನೆಗೆ ದಾವಣಗೆರೆ ನಗರ ಸಭೆಯಲ್ಲಿ ದಿನಗೂಲಿಯಾಗಿ ಕೆಲಸ. ಕೆಲಸಕ್ಕೆ ಸೇರಿದಾಗ ಇಮ್ತಿಯಾಜ್ ಮುಂದೆ ಇದ್ದಿದ್ದು ತನ್ನ ಬಡತನವೆಂಬ ಬೃಹತ್ ಬಂಗಲೆಯಲ್ಲಿದ್ದ ಹಸಿದ ಅಪ್ಪ ಅವ್ವ ಹಾಗೂ ಜೊತೆಗಿದ್ದವರ ಹೊಟ್ಟೆ ತುಂಬಿಸುವ ಕನಸ್ಸಷ್ಟೇ. ಆದರೆ ವಾಸ್ತವವಾಗಿ ಬಂಡಾಯವನ್ನು ಒಡಲಲ್ಲಿ ಇಟ್ಟುಕೊಂಡ ಯುವಕನಿಗೆ ದಿನಗೂಲಿ ಕಾರ್ಮಿಕರಿಗೆ ಸಂಬಳ ನೀಡದೇ ಶೋಷಿಸುತ್ತಿದ್ದ ಗುತ್ತಿಗೆದಾರ–ಅಧಿಕಾರಿಗಳ ಕ್ರಮ ಸಿಟ್ಟು ತರಿಸಿದ್ದು ಸಹಜವಾಗಿತ್ತು. ಇಂತಹ ಆಕ್ರೋಶಕ್ಕೆ ಮತ್ತಷ್ಟು ನಿರೇದಿದ್ದು ಆಗಲೇ ದಾವಣಗೆರೆಯ ಬಂಡವಾಳಿಗರಿಗೆ ಸಿಂಹಸ್ವಪ್ನವಾಗಿದ್ದ ಪಂಪಾಪತಿ ಎನ್ನುವ ನಾಯಕ. ಕನಸ್ಸು ಮತ್ತು ಸ್ಪೂರ್ತಿ ಮೈವೆತ್ತ ಯುವನೊರ್ವನಿಗೆ ಸ್ವತಃ ಶಾಸಕರೂ ಆಗಿದ್ದ ಪಂಪಾಪತಿಯವರೇ ದಿನಗೂಲಿ ನೌಕರರ ಸಂಘದ ಅಧ್ಯಕ್ಷರಾಗಿದ್ದು ಆನೆಯ ಬಂದತಾಯಿತು. ಅಲ್ಲಿಂದ ಆರಂಭಗೊಂಡ ಇಮ್ತಿಯಾಜ್ ಅವರ ಸಂಘಟನಾ ಪರ್ಯಟನೆ.. ಅಂದಿನ ಅವಿಭಜಿತ ಜಿಲ್ಲೆಯಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಓಡಾಡಿ ಹತ್ತಾರು ಸಂಘಟನೆಗಳನ್ನು ಕಟ್ಟಿದರು.

ಹೀಗೆ ಉತ್ತಮ ನಾಯಕನಾಗಿ ಬೆಳೆದ ಇವರನ್ನು ಪಕ್ಷದೊಳಗೂ ತುಳಿಯುವ ಹತ್ತಾರು ಪಯತ್ನಗಳಾದವು. ನಾನು ಕಾರ್ಮಿಕ ಸಂಘ ಹಾಗೂ ಪಕ್ಷದೊಳಗೆ ನಡೆಯುತ್ತಿದ್ದ ವ್ಯಕ್ತಿಗತ ತಪ್ಪುಗಳನ್ನು ನೇರವಾಗಿ ಟೀಕೀಸುತ್ತಿದ್ದುದ್ದು ಪ್ರಮುಖ ಕಾರಣವಾಗಿತ್ತು ಎನ್ನುವುದು ಅವರು ಇದಕ್ಕೆ ಕೊಡುವ ಕಾರಣ. ಇವರು ಕಟ್ಟಿದ್ದ ಕಾರ್ಮಿಕ ಸಂಘಗಳ ಕಾರ್ಮಿಕರಿಗೆ ನ್ಯಾಯ ಕೊಡಿಸುವ ನೆಪದಲ್ಲಿ ಅಲ್ಲಿನ ಮಾಲೀಕರು ಹಾಗೂ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜೊತೆ ಹಿರಿಯ ಕಾರ್ಮಿಕ ಮುಖಂಡರೇ ಮಾಡಿಕೊಂಡ ಒಳ ಒಪ್ಪಂದಗಳು ಇವರನ್ನು ಇಕ್ಕಟ್ಟಿಗೆ ಸಿಲುಕಿಸುತ್ತವೆ. ಅಂತಹ ಅನ್ಯಾಯಗಳ ವಿರುದ್ದವೇ ಇವರು ಸ್ವತಂತ್ರವಾಗಿ ಕ್ರಾಂತಿ ಕಹಳೆ ಎನ್ನುವ ಪತ್ರಿಕೆ ಆರಂಭಿಸುತ್ತಾರೆ ಇಮ್ತೀಯಾಜ್. ಒಂದು ಕಡೆ ನಾಲ್ಕು ಮಕ್ಕಳು ಹಾಗೂ ತಂದೆ ತಾಯಿ ಮತ್ತು ಹಲವು ಸಹೋದರರನ್ನು ಸಾಕುವ ಹೊಣೆಗಾರಿಕೆ, ಮತ್ತೊಂದಡೆ ವಿವಿಧ ಸಂಘಟನೆ ಮತ್ತು ಪಕ್ಷವನ್ನು ಬೆಳೆಸಬೇಕೆನ್ನುವ ಹಠ ಜೊತೆ ಜೊತೆಯಲ್ಲೇ ಈಗಾಗಲೇ ನಗರ ಸಭೆ ಅಧಿಕಾರ ಮತ್ತು ಕಾರ್ಮಿಕ ಸಂಘಗಳ ಮೇಲೆ ಅಧಿಪತ್ಯ ಸ್ಥಾಪಿಸಿಕೊಂಡಿದ್ದ ನಾಯಕರ ಅಸಹಕಾರ ಹೀಗೆ ಹೆಚ್ಚು ಕಡಿಮೆ ಅತಂತ್ರ ಬದುಕಿನಲ್ಲೆ ಹಲವು ದಶಕಗಳನ್ನೇ ದೂಡುವ ಇಮ್ತಿಯಾಜ್ ಅದರಿಂದ ಬಿಡುಗಡೆ ಎಂಬಂತೆ ಬಂಡಾಯ ಮತ್ತು ಸಮುದಾಯ ಮೊದಲಾದ ಸಾಂಸ್ಕೃತಿಕ ತಂಡಗಳೊಂದಿಗೆ ಹಾಗೂ ಮಲೆನಾಡ ಸಂಗತಿ ಎನ್ನುವ ಮಾಸಿಕ ಪತ್ರಿಯೊಂದಿಗೂ ಹಲವು ವರ್ಷಗಳ ಕಾಲ ಕೆಲಸ ಮಾಡುತ್ತಲೇ ಅವುಗಳ ಸಿಹಿ–ಕಹಿ ಎರಡನ್ನು ಅನುಭವಿಸುತ್ತಾರೆ.

1989 ರಲ್ಲಿ ಮತ್ತು 1992 ಬಳಿಕಾ ದಾವಣಗೆರೆ ರಾಮಜನ್ಮಭೂಮಿ ಎನ್ನುವ ಕೋಮು ಉನ್ಮಾದದ ಬೆಂಕಿಯಲ್ಲಿ ಸುಟ್ಟು ಬೂದಿಯಾಗುವಾಗ ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗುವ ಇಮ್ತಿಯಾಜ್ ತಾನು ವಾಸವಿದ್ದ ಪ್ರದೇಶದಲ್ಲೇ ಅವರ ಮಧ್ಯೆ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟುವ ಕೆಲಸ ಆರಂಭಿಸುತ್ತಾರೆ. ಆದರೆ ಪಕ್ಷದೊಳಗೆ ಅವರನ್ನು ಮೇಲೆ ಬರದಂತೆ ತುಳಿಯುವ ಒಳ ಪ್ರಯತ್ನಗಳು ಮುಂದುವರೆಯುತ್ತವೆ. ಸಾಲದೆಂಬಂತೆ ಪಕ್ಷಕ್ಕಾಗಿ ಹಗಲಿರುಳು ದುಡಿಯಲು ಸಿದ್ದರಿದ್ದ ಯುವ ಕಾರ್ಯಕರ್ತರನ್ನು ಉಳಿಸಿಕೊಳ್ಳುವ ಯಾವ ಪ್ರಯತ್ನಗಳು ನಡೆಯದಿರುವುದು ತೀವ್ರ ಬೇಸರ ಮತ್ತು ನಿರಾಶೆ ಉಂಟು ಮಾಡುತ್ತವೆ. ಜಾತಿ, ಭ್ರಷ್ಟಚಾರ ಪಕ್ಷದೊಳಗೆ ನುಸುಳುವಿಕೆ, ಕಂಡು ಕಾಣದಂತೆ ಪಂಪಾಪತಿ ಹಾಗೂ ರಾಜ್ಯ ಮಟ್ಟದ ನಾಯಕತ್ವದ ಮೌನ. ಒಂದು ಕಾಲದಲ್ಲಿ ಬಲಿಷ್ಟ ಕಾರ್ಮಿಕ ಚಳವಳಿ ಕೇಂದ್ರವಾಗಿದ್ದ ಕಾಟನ್ ಮಿಲ್‌ನಲ್ಲಿ ಸಂಘಪರಿವಾರ ಬೆಂಬಲಿತ ಬಿಎಂಎಸ್ ಪ್ರವೇಶಕ್ಕೆ ಕಾರ್ಮಿಕ ನಾಯಕರೇ ಕಾರಣವಾದುದ್ದು ಮತ್ತೊಂದೆಡೆ ಕಾರ್ಖಾನೆ ಮುಚ್ಚಿ ಬೀದಿಗೆ ಬಿದ್ದ ಕಾರ್ಮಿಕ ಕುಟುಂಬಗಳಿಗೆ ನ್ಯಾಯ ಕೊಡಿಸಲು ವಿಫಲವಾದುದ್ದು ಹೀಗೆ... ಈ ಎಲ್ಲಾ ಬೆಳವಣಿಗೆಗಳಿಂದ ಬೇಸತ್ತ ಇಮ್ತಿಯಾಜ್ ಪಕ್ಷಕ್ಕೆ ರಾಜೀನಾಮೆ ನೀಡುತ್ತಾರೆ.

ಹೀಗೆ ಪಕ್ಷದಿಂದ ನೋವಿನಿಂದಲೇ ಹೊರಕಾಲಿಟ್ಟ ಇಮ್ತಿಯಾಜ್ ಅವರಿಗೆ ಕನಿಷ್ಟ ಪಂಪಾಪತಿಯವರೂ ಸೌಜನ್ಯಕ್ಕಾದರೂ ಕೇಳಬಹುದೆಂಬ ಆಶೆ. ಆದರೆ ಅದು ಇಲ್ಲವಾಗುತ್ತದೆ. ಕೆಲ ವರ್ಷಗಳ ಬಳಿಕಾ ಗೆಳೆಯನೊಬ್ಬನ ಒತ್ತಾಸೆಯಿಂದ ಅನಿವಾರ್ಯವಾಗಿ ಬಹುಜನ ಸಮಾಜ ಪಕ್ಷಕ್ಕೂ ಕಾಲಿಟ್ಟು ಅದರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿಯೂ ಆದ ಅವರು ಒಳ ಹೋದಷ್ಟೇ ವೇಗವಾಗಿ ಭ್ರಮನಿರಸನಗೊಂಡು ಹೊರ ದೂಡಲ್ಪಡುತ್ತಾರೆ. ಬಳಿಕಾ ಅಂದಿನ ಕಾಂಗ್ರಸ್ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಒತ್ತಾಶೆಯಂತೆ ಕಾಂಗ್ರಸ್ ನತ್ತ ಮುಖ ಅಲ್ಲಿ ಎಲ್ಲರೂ ಹುಬ್ಬೇರಿಸುವಂತೆ ಆಶ್ರಯ ಕಮಿಟಿ ಅಧ್ಯಕ್ಷರಾಗಿ ನೇಮಕ. ಬಡವರು ಅಸಂಘಟಿತರಿಗಾಗಿ ಹತ್ತು ಸಾವಿರ ಮನೆ ನಿರ್ಮಾಣಕ್ಕೂ ಕಾರಣವಾಗುತ್ತಾರೆ. ಆದರೆ ಮುಸ್ಲಿಂರೊಳಗಿನ ಅಸ್ಪೃಶ್ಯರಾದ ಪಿಂಚಾರ(ನದಾಫ್) ಜಾತಿಗೆ ಸೇರಿಗೆ ಇಮ್ತಿಯಾಜ್ ಹುಸೇನ್ ಅವರಿಗೆ ಕಾಂಗ್ರೆಸ್‌ನಲ್ಲಿ ಸಿಗುತ್ತಿರುವ ಪ್ರಾಶಸ್ತ್ಯದ ವಿರುದ್ದವೂ ಕಟ್ಟಾ ಮುಸ್ಲಿಂಮರಿಂದ ವಿರೋಧ ವ್ಯಕ್ತವಾಗುತ್ತದೆ. ಹೀಗಾಗಿ ಬೇಸತ್ತ ಅವರು ಅಲ್ಲಿಂದಲೂ ಹೊರನಡೆಯುತ್ತಾರೆ.

ತೀರ ಬಡತನದಿಂದ ಬೆಳೆದು ಬಂದ ಯುವ ಕಮ್ಯೂನಿಸ್ಟ್ ಕಾರ್ಯಕರ್ತನೊಬ್ಬನನ್ನು ಪಕ್ಷ ಅದರ ನಾಯಕತ್ವ ಸರಿಯಾದ ಬಳಸಿಕೊಳ್ಳದಿದ್ದಲ್ಲಿ ಎಷ್ಟೋ ಇಂತಹ ಕಾರ್ಯಕರ್ತರು ಅನಿವಾರ್ಯವಾಗಿ ಬಂಡವಾಳಶಾಹಿ ಪಕ್ಷಗಳ ಕೈವಶವಾಗಿ ಅಲ್ಲೂ ಇರಲಾರದೇ ವಾಪಸ್ಸ್ ಬರಲಾಗದ ಉಭಯ ಸಂಕಟಗಳನ್ನು ಅನುಭವಿಸುತ್ತಾರೆ ಎನ್ನುವುದಕ್ಕೆ ಇಮ್ತಿಯಾಜ್ ಅವರ ಬದುಕೊಂದು ಜೀವಂತ ಉದಾಹರಣೆ. ಒಟ್ಟಿನಲ್ಲಿ ಇಮ್ತಿಯಾಜ್ ಅವರ ಈ ಪುಸ್ತಕ ಎಲ್ಲ ಆತ್ಮಕಥೆಗಳಂತೆ ಅಲ್ಲಲ್ಲಿ ಸ್ವಯಂ ಪ್ರಶಂಶೆಯ ಜಾಡು ಹಿಡಿದಿದ್ದರೂ ವಸ್ತುನಿಷ್ಟತೆಯನ್ನು ತೆರದಿಡುತ್ತಾ ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಹೀಗಾಗಿ ಎಲ್ಲಾ ಕಮ್ಯೂನಿಸ್ಟ್ ಕಾರ್ಯಕರ್ತರು ಓದಬಹುದಾದ ಕೃತಿ ಇದಾಗಿದೆ.

ಸಹನ ಪ್ರಕಾಶನ ದಾವಣಗೆರೆ
ಲೇಖಕ : ಇಮ್ತಿಯಾಜ್ ಹುಸೇನ್
ಪುಟ – 172
ಬೆಲೆ ರೂ. 150
ಮೊಬೈಲ್ 9448415167

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**